47)ಬಾಹುಬಲಿ ಬಿ ಜೆ, 48)ಪ್ರಕಾಶ್ ಎಂ ಸಿ, 49)ರೇವಣ್ಣ ಸಿದ್ದಪ್ಪ, 50)ಭಾಗ್ಯಶ್ರೀ ಸುರೇಶ್ ಕುಮಾರ್, 51)ರುಕ್ಮಿಣಿ ಟಿ ಸಿಂಗಾವಿ 52)ಶಾರದ, 53)ವಿಮಲ್ ಕುಮಾರ್ ಎನ್ ಬಿ, 54)ಪರಮಶಿವನ್ ಎ ವಿ, 55)ಶಿವಮ್ಮ, 56)ಮಹೇಶ ಜಿ ಎಸ್, 57)ಗೋಪಾಲಚಾರ್ ಜಿ ಎಲ್, 58)ಜಗದೀಶ್ ಬಾಬು ಟಿ ವಿ, 59)ಆನಂದ್ ಎಸ್ ಹಿರೇಮಠ್, 60)ಸ್ವರ್ಣ ಸಿ ಆರ್, 61)ಅಮರನಾಥ ಗುಪ್ತ ಎಂ ಎಸ್,62)ಪಾರ್ಶ್ವನಾಥ್ ಟಿ ಎ, 63)ಪ್ರತಿಮಾ ಜೈನ್ ಪಿ, 64)ಪಾರ್ವತಮ್ಮ ಎ ವಿ, 65)ಮಠಪತಿ ಎಫ್ ಎ 66)ಪಾಯಿದೇವರು ಎಸ್ ಪಿ, 67)ಸರೋಜಮ್ಮ ಬಿ, 68)ನೀಲಾಂಬಿಕ ಜಿ ಎಸ್, 69)ಉದಯಕುಮಾರ್ ಎಸ್ 70)ಸೋಮಶೇಖರಯ್ಯ ಜಿ, 71)ಸೀತಮ್ಮ, 72)ಮಹದೇವಯ್ಯ ಹೆಚ್ ಎನ್, 73)ಪರಮೇಶ್ ಕೆ ವಿ, 74)ಅಶ್ವಥಮ್ಮ, 75)ವರಲಕ್ಷ್ಮಮ್ಮ, 76)ನಾರಾಯಣ ಶೆಟ್ಟಿ ಎಂ ವಿ, 77)ಗುರುಸಿದ್ದಯ್ಯ ಪಿ ಎಸ್, 78)ನೀಲಕಂಠಯ್ಯ ಬಿ ಎನ್, 79)ರಾಮ ಶೆಟ್ಟಿ ಬಿ ಎನ್, 80)ಚಿಕ್ಕರುದ್ರಯ್ಯ ಬಿ ಎಸ್, 81)ದಕ್ಷಿಣ ಮೂರ್ತಿ, 82)ಭಾನು ಪ್ರಕಾಶ್ ಟಿ ಜಿ, 83)ಇಂದ್ರ ಸಿ ಎಸ್, 84)ವಿಶ್ವೇಶ್ವರಯ್ಯ ಸಿ ಎಸ್, 85)ರಾಜೇಂದ್ರ ಪ್ರಸಾದ್ ಹೆಚ್ ಸಿ, 86)ಸರಸ್ವತಿ ಬಾಯಿ ಎಸ್, 87)ಕೃಷ್ಣ ಮೂರ್ತಿ ಆರ್, 88)ಉಮಾದೇವಿ ವಿ ಎಸ್, 89)ಪ್ರೇಮ್ ಕುಮಾರ್ ಆರ್, 90)ಚಿದಾನಂದ ಐ ಸಿ, 91)ಜ್ಞಾನೇಶ್ವರ್ ಜಿ, 92)ಮಂಜುನಾಥ್ ಡಿ ಎನ್, 93)ಅಹಮದ್ ಜಾನ್, 94)ಸೈಯದ್ ಶನಾವಾಸ್, 95)ರಾಜಶೇಖರ ಪಿ, 96)ಕಾಂತರಾಜು ಟಿ ಎಸ್, 97)ಕೃಷ್ಣಪ್ಪ ಬಿ, 98)ನಾಗರತ್ನ ಎ ಹೆಚ್, 99)ಸಾವಿತ್ರಮ್ಮ 100)ವಜ್ರನಾಭಯ್ಯ ವೈ ಪಿ, 101)ನಾಗರಾಜ, 102)ದೇವರಾಮ್, 103)ಮುಕ್ತಾಂಬ ಬಿ, 104)ಮಧುಚಂದ್ರ ಬಿ ಜೆ, 105)ಗಾಯತ್ರಿ ಎಂ ಕೆ, 106)ಜ್ವಾಲಣ್ಣ ಎಂ ಬಿ, 107)ನಿರ್ಮಲ್ ಕುಮಾರ್ ಎ ಆರ್, 108)ರಾಜು ಎಸ್, 109)ದಿಲೀಪ್ ಕುಮಾರ್ ಹೆಚ್ ಎಂ, 110)ಶ್ರೀನಿವಾಸ ಮೂರ್ತಿ ಬಿ ಆರ್, 111)ರಾಜೇಂದ್ರ ಪ್ರಸಾದ್ ಎಂ ಎಸ್, 112)ಮಹದೇವಯ್ಯ ಟಿ, 113)ಪ್ರಭು ಕುಮಾರ್ ಆರ್ 114)ದೇವಮ್ಮ ಎಲ್, 115)ರಾಜಕೀರ್ತಿ ಟಿ, 116)ಲೋಕೇಶಾಚಾರ್, 117)ಶೈಲಾ ಶಾಮರಾವ್ ಶಿರಹಟ್ಟಿ, 118)ನರಸಿಯಪ್ಪ 119)ಗಾಯತ್ರಿ ಟಿ, 120)ಮೋಹನ್‌ಕುಮಾರ್ ಆರ್ ಎನ್, 121)ನಯಾಜ್ ಉರ್ ರೆಹಮಾನ್ ಟಿ ಕೆ, 122)ವಿಜಯಾ ಕುಮಾರಿ ಎಂ ಡಿ, 123)ಪಾಂಡುರಂಗಯ್ಯ ಶೆಟ್ಟಿ ಬಿ ಜೆ, 124)ಸೌಭಾಗ್ಯ ಕೆ, 125)ಎಸ್ ಗಂಗಣ್ಣ ವಿ ಜಿ, 126)ನವರತ್ನ ಟಿ ಎನ್, 127)ಹೊನ್ನಪ್ಪ ಕೆ 128)ಗಂಗಾಧರಪ್ಪ ಹೆಚ್, 129)ಶಿವಕುಮಾರ್ ಕೆ ವಿ, 130)ನಳಿನ 131)ಅಮೃತ, 132)ಭುಜಬಲಯ್ಯ ಬಿ ಜೆ, 133)ಲಿಂಗಣ್ಣ ಟಿ ಎಂ, 134)ಪ್ರಕಾಶ್ ಕೆ ವಿ, 135)ಸುನೀತಾ, 136)ಶಿವಕುಮಾರ್ ಎಂ ಆರ್.

**3. ಸ್ವಾಗತ:** ಸಭಾಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು 62ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಸಭೆಯಲ್ಲಿ ಭಾಗವಹಿಸಿರುವ ಎಲ್ಲಾ ಆತ್ಮೀಯ ಸಹಕಾರ ಬಂಧುಗಳಿಗೆ ಬ್ಯಾಂಕಿನ ಪರವಾಗಿ ನಮಸ್ಕಾರಗಳನ್ನು ತಿಳಿಸುತ್ತಾ, ಮೊದಲಿಗೆ ಈ ವರ್ಷದ ಪ್ರಾರಂಭದಲ್ಲಿ ನಡೆದ ಬ್ಯಾಂಕಿನ ಚುನಾವಣೆಯಲ್ಲಿ ನಮ್ಮ ಮಾತೃ ಸಂಸ್ಥೆಯಿಂದ ಆಯ್ಕೆ ಮಾಡಿದ ಎಲ್ಲಾ ಅಭ್ಯರ್ಥಿಗಳನ್ನು ಅತ್ಯಧಿಕ ಮತಗಳಿಂದ ಗೆಲ್ಲಿಸಿದ ತಮಗೆ ನಮ್ಮ ಆಡಳಿತ ಮಂಡಳಿಯಿಂದ ಮತ್ತು ನಮ್ಮ ಮಾತೃಸಂಸ್ಥೆಯ ಪರವಾಗಿ ಸಭೆಯಲ್ಲಿ ನೆರೆದಿದ್ದ ಸದಸ್ಯರುಗಳಿಗೆ ವಿನಯ ಪೂರ್ವಕವಾಗಿ ಧನ್ಯವಾದಗಳನ್ನು ಸಲ್ಲಿಸಿದರು. ನಮ್ಮ ಮೇಲಿನ ನಿಮ್ಮ ನಂಬಿಕೆಯನ್ನು ಖಂಡಿತವಾಗಿ ಉಳಿಸಿಕೊಳ್ಳುತ್ತೇವೆ ಎಂದರು. ಮುಂದುವರೆಸುತ್ತಾ ಆತ್ಮೀಯ ಸಹಕಾರ ಬಂಧುಗಳೇ, ನಮ್ಮ ಟಿಜಿಎಂಸಿ ಬ್ಯಾಂಕಿನ 62ನೇ ವಾರ್ಷಿಕ ಸಾಮಾನ್ಯ ಸಭೆಗೆ ಗೌರವಾನ್ವಿತ ಸದಸ್ಯರಾದ ತಮ್ಮೆಲ್ಲರಿಗೂ ಆತ್ಮೀಯವಾದ ಸ್ವಾಗತವನ್ನು ಕೋರುತ್ತಾ, ಮೊದಲಿಗೆ ನಮ್ಮ ಬ್ಯಾಂಕಿನ ಶ್ರೇಯೋಭಿವೃದ್ಧಿಗೆ ನಿರಂತರವಾಗಿ ಬೆಂಬಲ ನೀಡುತ್ತಿರುವ ಹಾಗೂ ಸಲಹೆ ಸೂಚನೆಗಳನ್ನು ನೀಡುತ್ತಿರುವ ಸದಸ್ಯರೆಲ್ಲರಿಗೂ ಬ್ಯಾಂಕಿನ ಪರವಾಗಿ ಕೃತಜ್ಞತೆಗಳನ್ನು ಸಮರ್ಪಿಸಿದರು. ನಮ್ಮ ಬ್ಯಾಂಕ್ ಸ್ಥಾಪನೆಯಾಗಿ ಇಂದಿಗೆ 62 ವರ್ಷಗಳು ತುಂಬಿದ್ದು ಈ ಸಂದರ್ಭದಲ್ಲಿ ತಮ್ಮೆಲ್ಲರಿಗೂ ಸಹ ಅಭಿನಂದನೆಗಳನ್ನು ಸಲ್ಲಿಸಲು ಬಯಸುತ್ತೇನೆ. ನಮ್ಮ ಟಿಜಿಎಂಸಿ ಬ್ಯಾಂಕಿನ ಪ್ರಗತಿಗೆ ಹಲವಾರು ಮಹನೀಯರು ಶ್ರಮಿಸಿದ್ದಾರೆ, ಅವರೆಲ್ಲರ ಪರಿಶ್ರಮ ಹಾಗೂ ಸದಸ್ಯರಾದ ತಮ್ಮೆಲ್ಲರ ಸಹಕಾರದೊಂದಿಗೆ ನಮ್ಮ ಬ್ಯಾಂಕ್ ಇಂದು ಹೆಮ್ಮರವಾಗಿ ಬೆಳೆಯಲು ಸಾಧ್ಯವಾಗಿದೆ. ಇಂತಹ ಒಂದು ಸಂದರ್ಭದಲ್ಲಿ ನಮ್ಮ ಬ್ಯಾಂಕ್ ಹಲವಾರು ಏರಿಳಿತಗಳನ್ನು ಕಾಣುವಂತಾಯಿತು ಅದಕ್ಕೆ ಕಾರಣಗಳು ಹಲವಾರು, ಅವುಗಳೆಲ್ಲದರ ನಡುವೆಯೂ ಸಹ ಸುಸ್ಥಿರತೆಯನ್ನು ಸಾಧಿಸುವಲ್ಲಿ ನಮ್ಮ ಬ್ಯಾಂಕ್ ಸಫಲವಾಗಿದೆ ಎಂದು ಹೇಳಲು ಬಯಸುತ್ತೇನೆ ಎಂದರು. ಒಂದು ಆರ್ಥಿಕ ಸಂಸ್ಥೆಯಾಗಿ ನಮ್ಮ ಬ್ಯಾಂಕಿಗೆ ಎದುರಾದ ಸವಾಲುಗಳು ಹಲವಾರು ಕೋವಿಡ್–19ರ ಮುಂದುವರೆದ ಸವಾಲುಗಳು, NPA ಹಿಡಿತದಿಂದ ಹೊರಬರಲು ಬ್ಯಾಂಕಿಗೆ ದೊಡ್ಡ ಸಮಸ್ಯೆಗಳನ್ನು ತಂದೊಡ್ಡಿದ್ದರ ಜೊತೆಗೆ ಕೆಲವು ವ್ಯಕ್ತಿಗಳ ಅಪಪ್ರಚಾರದಿಂದಾಗಿ ಬ್ಯಾಂಕಿನ ಠೇವಣಿಗಳು ಕುಸಿತಗೊಂಡು ಗ್ರಾಹಕರು ತಮ್ಮ ಠೇವಣಿಗಳನ್ನು ಹಿಂಪಡೆಯುವಂತಾಯಿತು. ಬ್ಯಾಂಕಿನಿಂದ ಸಾಲ ಪಡೆದ ಗ್ರಾಹಕರು ಸರಿಯಾದ ಸಮಯಕ್ಕೆ ಮರುಪಾವತಿಸದೆ NPA ಮಟ್ಟದಲ್ಲೂ ತುಸು ಏರಿಕೆ ಕಾಣುವಂತಾಯಿತು, ಇವುಗಳೆಲ್ಲವುದರ ಮಧ್ಯೆಯು ಬ್ಯಾಂಕಿನ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದ ಪರಿಶ್ರಮದ ಜೊತೆಗೆ ತಮ್ಮೆಲ್ಲರ ಸಹಕಾರದೊಂದಿಗೆ ಹಿಂದಿನ ಸಾಲಿಗೆ ಹೋಲಿಸಿದರೆ ವರದಿ ಸಾಲಿನಲ್ಲಿ ಬ್ಯಾಂಕಿನ ಕಾರ್ಯಕ್ಷಮತೆ ಉತ್ತಮವಾಗಿದ್ದು. ಈ ಸಾಲಿನಲ್ಲಿ ರೂ.15.46 ಕೋಟಿಗಳಷ್ಟು ನಿವ್ವಳ ಲಾಭಾಂಶವನ್ನು ಬ್ಯಾಂಕ್ ಗಳಿಸುವುದರೊಂದಿಗೆ ಮತ್ತೆ ತನ್ನ ಹಿಂದಿನ ಗತವೈಭವಕ್ಕೆ ಮುನ್ನುಡಿ ಬರೆಯುವಂತಾಗಿದೆ. ಇದರೊಂದಿಗೆ ಗ್ರಾಹಕ ಸ್ನೇಹಿ ಯೋಜನೆಗಳನ್ನು ರೂಪಿಸಿಕೊಂಡು ಮೊಬೈಲ್ ಬ್ಯಾಂಕಿಂಗ್, ಇಂಟರ್ನೆಟ್ ಬ್ಯಾಂಕಿಂಗ್, ಯುಪಿಐ ಬ್ಯಾಂಕಿಂಗ್ ಪರಿಚಯಿಸುವುದರೊಂದಿಗೆ ಉತ್ತಮ ಸೇವೆಗಳನ್ನು ಗ್ರಾಹಕರಿಗೆ ನೀಡುತ್ತಿರುತ್ತದೆ. ಇದರೊಂದಿಗೆ ಗೃಹ ಸಾಲ, ವಾಹನ ಸಾಲ, ಚಿನ್ನದ ಸಾಲಗಳ ಬಡ್ಡಿಗಳಲ್ಲಿ ಇಳಿಕೆ ಮಾಡಿದ್ದು ಸಾಮಾನ್ಯ ಗ್ರಾಹಕನಿಗೂ ಸಹ ಇದನ್ನು ಸದುಪಯೋಗ ಪಡಿಸಿಕೊಳ್ಳುವಂತಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ ಹಲವಾರು ಕಾರ್ಯಯೋಜನೆಗಳನ್ನು ರೂಪಿಸಿಕೊಂಡು ಮುನ್ನಡೆಯುವ ಗುರಿಯನ್ನು ಬ್ಯಾಂಕ್ ಹೊಂದಿರುತ್ತದೆ. ಪ್ರಸ್ತುತ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಬ್ಯಾಂಕಿಂಗ್ ಕ್ಷೇತ್ರವು ಸಹ ಹೊರತಲ್ಲ, ಎಲ್ಲಾ ಬ್ಯಾಂಕುಗಳೊಂದಿಗೆ ಹಾಗೂ ಇತರ ಹಣಕಾಸು ಸಂಸ್ಥೆಗಳೊಂದಿಗೆ ನಮ್ಮ ಬ್ಯಾಂಕ್ ಸಹ ಲಾಭದ ಗಳಿಕೆಯ

ಗುರಿಯನ್ನು ಸಾಧಿಸಲೇಬೇಕಾಗಿದೆ. ಇದಕ್ಕೆ ತಮ್ಮೆಲ್ಲರ ಸಹಕಾರವೇ ಶ್ರೀರಕ್ಷೆಯಾಗಿರುತ್ತದೆ. ಹಲವಾರು ಏರಿಳಿತಗಳ ನಡುವೆಯೂ ನಮ್ಮ ಬ್ಯಾಂಕ್ ಸುಸ್ಥಿರವಾಗಿದ್ದು ವರದಿ ವರ್ಷದಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸಿದ್ದು ಮುಂದೆಯೂ ಇದೇ ರೀತಿಯಾಗಿ ಪ್ರಗತಿಯ ಹಾದಿಯಲ್ಲಿ ಸಾಗುವುದರೊಂದಿಗೆ ಸದಸ್ಯರ ಕೋರಿಕೆಯನ್ನು ಈಡೇರಿಸುವಂತಹ ಶಕ್ತಿಯನ್ನು ತುಂಬುವ ಕೆಲಸ ನಮ್ಮೆಲ್ಲರಿಂದಲೂ ಆಗಬೇಕಿದೆ. ಈ ನಿಟ್ಟಿನಲ್ಲಿ ಸದಸ್ಯರಿಗೆ ಈ ಬಾರಿ ಆರ್ ಬಿ ಐ ಒಪ್ಪಿಗೆ ಮೇರೆಗೆ ಶೇಕಡ 10.00% ರಷ್ಟು ಡಿವಿಡೆಂಡ್ ನೀಡಲು ನಿರ್ಧರಿಸಿದ್ದು, ಡಿವಿಡೆಂಡ್ ಪ್ರಮಾಣವನ್ನು ಮುಂದಿನ ದಿನಗಳಲ್ಲಿ ಹೆಚ್ಚಿಸುವ ಭರವಸೆಯನ್ನು ಸಹ ನೀಡಲು ಬಯಸುತ್ತಾ ನಮ್ಮ ಬ್ಯಾಂಕಿನ ಎಲ್ಲಾ ಗ್ರಾಹಕರಿಗೆ, ವ್ಯವಹಾರ ಪಾಲುದಾರರಿಗೆ ಮತ್ತು ಷೇರುದಾರರಿಗೆ, ನಿಮ್ಮ ಬ್ಯಾಂಕಿನ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗ ಸಮಾಜಕ್ಕೆ ಸದಾ ಗುಣಾತ್ಮಕ ಸೇವೆ ನೀಡಲು ಕಟಿಬದ್ಧವಾಗಿದೆ ಎಂದು ಭರವಸೆ ಕೊಟ್ಟು ಎಲ್ಲಾ ಸದಸ್ಯರಿಗೂ ಸಭೆಗೆ ಸ್ವಾಗತ ಕೋರಿದರು.

**4. 62ನೇ ವರ್ಷದ ಸಾಮಾನ್ಯ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ಅಂಗೀಕರಿಸುವುದು:**

ಬ್ಯಾಂಕಿನ ನಿರ್ದೇಶಕರಾದ ಶ್ರೀ ಜಿ ಎಸ್ ರಮೇಶ್‌ರವರು ಎಲ್ಲಾ ಸಹಕಾರಿ ಬಂಧುಗಳಿಗೆ ನಮಸ್ಕರಿಸುತ್ತಾ 62ನೇ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ಸಭೆಯ ಅಂಗೀಕಾರಕ್ಕಾಗಿ ಮಂಡಿಸಿದರು. ಇದನ್ನು ಸಭೆಯು ಅಂಗೀಕರಿಸಿತು.

**5. 61ನೇ ವಾರ್ಷಿಕ ಸಾಮಾನ್ಯ ಸಭೆಯ ನಡಾವಳಿಯನ್ನು ಓದಿ ಧೃಡೀಕರಿಸುವುದು:**

ಬ್ಯಾಂಕಿನ ನಿರ್ದೇಶಕರಾದ ಶ್ರೀ ಟಿ ಡಿ ಬಾಹುಬಲಿ ಬಾಬುರವರು ಸರ್ವಸದಸ್ಯರಿಗೆ ನಮಸ್ಕರಿಸುತ್ತಾ ಬ್ಯಾಂಕಿನ 2023-24 ನೇ ಸಾಲಿನ ಬ್ಯಾಂಕಿನ 61ನೇ ವಾರ್ಷಿಕ ಸಾಮಾನ್ಯ ಸಭೆಯ ನಡಾವಳಿಯನ್ನು 2024-25 ನೇ ಸಾಲಿನ ಆಡಳಿತ ವರದಿಯಲ್ಲಿ ಪುಟ ಸಂಖ್ಯೆ 32 ರಿಂದ 60 ರವರೆಗೆ ಮುದ್ರಿಸಿದ್ದು, ಆಡಳಿತ ವರದಿಯನ್ನು ಬ್ಯಾಂಕಿನಲ್ಲಿ ಈಗಾಗಲೇ ಸದಸ್ಯರಿಗೆ ವಿತರಿಸಿದ್ದು ಮತ್ತು ಬ್ಯಾಂಕಿನ ಜಾಲತಾಣದಲ್ಲಿಯೂ ಸಹ ಪ್ರಕಟಿಸಿದ್ದು ತಾವೆಲ್ಲರೂ ಈಗಾಗಲೇ ಆಡಳಿತ ವರದಿಯನ್ನು ಓದಿರುವಿರೆಂದು ಭಾವಿಸುತ್ತಾ 61ನೇ ವಾರ್ಷಿಕ ಸಾಮಾನ್ಯ ಸಭೆಯ ನಡಾವಳಿಗಳನ್ನು ಧೃಢೀಕರಿಸಲು ಸಭೆಗೆ ಮಂಡಿಸಿದರು.

ಸಭೆಯು ಸರ್ವಾನುಮತದಿಂದ 61ನೇ ವಾರ್ಷಿಕ ಸಾಮಾನ್ಯ ಸಭೆಯ ನಡಾವಳಿಯನ್ನು ಧೃಢೀಕರಿಸಿ ಅಂಗೀಕರಿಸಿತು.

**6. 2024-25 ನೇ ಸಾಲಿನ ಆಡಳಿತ ಮಂಡಳಿಯ ವಾರ್ಷಿಕ ವರದಿಯನ್ನು ಹಾಗೂ 2025-26 ನೇ ಸಾಲಿನ ಉದ್ದೇಶಿತ ಯೋಜನೆಗಳನ್ನು ಸಭೆಯ ಅಂಗೀಕಾರಕ್ಕಾಗಿ ಮಂಡಿಸುವುದು.**

ಬ್ಯಾಂಕಿನ ನಿರ್ದೇಶಕರಾದ ಶ್ರೀ ಆರ್ ಎ ಸುರೇಶ್‌ಕುಮಾರ್‌ರವರು ಸದಸ್ಯರೆಲ್ಲರಿಗೂ ನಮಸ್ಕಾರ ತಿಳಿಸಿ ಬ್ಯಾಂಕಿನ 62ನೇ ವಾರ್ಷಿಕ ವರದಿಯಲ್ಲಿ 2024-25ನೇ ಸಾಲಿಗೆ ಬ್ಯಾಂಕಿನ ಸಾಧನೆಯ ಅಂಕಿ ಅಂಶಗಳು, ಉದ್ದೇಶಿತ ಯೋಜನೆಯ ಗುರಿ ಸಾಧನೆಯ ಮಾಹಿತಿ, ಸಭೆಗಳು, ಆದ್ಯತಾವಲಯ ಹಾಗೂ ದುರ್ಬಲ ವರ್ಗಗಳಿಗೆ ನೀಡಲಾಗಿರುವ ಸಾಲದ ವಿವರಗಳು, ಸುಸ್ತಿ ಸಾಲಗಳ ವಿವರ, ಎನ್.ಪಿ.ಎ ಮತ್ತು ಹೂಡಿಕೆಗಳ ವಿವರ ಹಾಗೂ ಶಾಖೆಗಳ ಬಗ್ಗೆ ವಿವರಗಳನ್ನು ತಿಳಿಸುತ್ತಾ ಸಭೆಯ ಅಂಗೀಕಾರಕ್ಕಾಗಿ ಮಂಡಿಸಿದರು.

ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ನಂತರ ಸದಸ್ಯರುಗಳು ಪ್ರಶ್ನೆಯನ್ನು ಕೇಳಲು ಪ್ರಾರಂಭಿಸಿದಾಗ ನಿರ್ದೇಶಕರಾದ ಶ್ರೀ ಆರ್ ಎ ಸುರೇಶ್ ಕುಮಾರ್‌ರವರು ತಮ್ಮ ಎಲ್ಲಾ ಪ್ರಶ್ನೆಗಳನ್ನು ಕೇಳಲು ಮುಂದೆ ಅವಕಾಶವಿದೆ ಎಂದು ಸಭೆಗೆ ತಿಳಿಸಿದರು.

ಬ್ಯಾಂಕಿನ ನಿರ್ದೇಶಕರಾದ ಶ್ರೀಮತಿ ರಶ್ಮಿಕಿರಣ್‌ರವರು as you all aware our TGMC Bank plays a vital role in promoting financial inclusion, community development and economic empowerment. We always ensure transparent operations and the accountability. The audit report highlights our efforts & outcomes are achieving these roles. To just to have a deep into an audit report, I request our vice president Sri C R Nataraj come and brief us the audit report.

ಸದಸ್ಯರಾದ ಶ್ರೀ ಹೆಚ್ ಆರ್ ನರಸಿಂಹ ಗುಪ್ತರವರು ಮಾತನಾಡಿ 2024-25 ಸಾಲಿನ ಅಂಕಿ ಅಂಶಗಳ ಬಗ್ಗೆ ಆಗಿಂದ್ದಾಗ್ಗೆ content ಓದಿ ಚರ್ಚೆ ಮಾಡುವುದು ಸರಿ. ಆದರೆ ಈ ವಿಷಯವನ್ನು ಯಾವಾಗಲೋ ಚರ್ಚೆ ಮಾಡುವುದರಿಂದ ಉಪಯೋಗವಿಲ್ಲ. ಕೆಲವು ಸದಸ್ಯರುಗಳು ಬೇಗ ಮುಗಿಸಿಕೊಂಡು ಮನೆಗೆ ಹೋಗಿರುತ್ತಾರೆ ಅಥವಾ ಸಭೆಯಿಂದ ನಿರ್ಗಮಿಸಿರುತ್ತಾರೆ. ಅದನ್ನು ಓದುವ ಸಮಯ ಬಂದಾಗ ಚರ್ಚೆ ಮಾಡುವುದು ಸೂಕ್ತ ಎಂದರು. ಷೇರು ಸದಸ್ಯರ ಸಂಖ್ಯೆ ಜಾಸ್ತಿಯಾಗಿದ್ದು, ಷೇರು ಬಂಡವಾಳ, ಆಪದ್ಧನ ಮತ್ತು ಇತರೆ ನಿಧಿಗಳು ಸಹ ಏಕೆ ಕಡಿಮೆಯಾಯಿತು? ಜೊತೆಗೆ ತೆರಿಗೆ ಮತ್ತು ಅವಕಾಶಗಳಿಗೂ ಮುನ್ನ ಬ್ಯಾಂಕಿನ ಲಾಭ ಶೇ 62.00%ರಷ್ಟು ಕಡಿಮೆಯಾಗಲು ಕಾರಣವೇನು? ಇದಕ್ಕೆ ಉತ್ತರ ನೀಡಬೇಕು ಅದನ್ನು ಬಿಟ್ಟು ಮುಂದಕ್ಕೆ ಹೋಗಬಾರದು ಎಂದು ಹೇಳಿ ಕಳೆದ

ಸಾಲಿಗಿಂತ 2024-25 ನೇ ಸಾಲಿನಲ್ಲಿ ಸದಸ್ಯರ ಸಂಖ್ಯೆ 19255 ಇದ್ದು 2% ಜಾಸ್ತಿಯಾಗಿದ್ದು ಏಕೆ ಷೇರು ಬಂಡವಾಳ 2.5% ರಷ್ಟು ಕಡಿಮೆಯಾಗಿದೆ ಎಂದು ಪ್ರಶ್ನಿಸಿದಾಗ ಬ್ಯಾಂಕಿನ ನಿರ್ದೇಶಕರಾದ ಶ್ರೀ ಎಸ್ ವಿಶ್ವನಾಥ್‌ರವರು ಮಾತನಾಡಿ ಇದು Overall total share capital ಬಂದಿರುವುದು, ಇದರಲ್ಲಿ ಸಾಲವನ್ನು ಕೊಟ್ಟಾಗ Associate members ಆಗಿ ಮಾಡಿಕೊಂಡಿರುತ್ತೇವೆ. ಆ ಸಾಲದ ಮೊತ್ತವು ಕಡಿಮೆಯಾದಾಗ ಅವರ ಷೇರು ಹಣವನ್ನು ವಾಪಸ್ಸು ಕೊಟ್ಟಿರುವುದರಿಂದ ಷೇರು ಬಂಡವಾಳ ಕಡಿಮೆಯಾಗಿದೆ. ಕಳೆದ ವರ್ಷ ಆಪದ್ಧನ ನಿಧಿಗಳು ರೂ.299.00 ಕೋಟಿಗಳಷ್ಟಿದ್ದು ಈ ವರ್ಷ ರೂ.217.00 ಕೋಟಿಗಳಿದ್ದು ಶೇ.27% ರಷ್ಟು ಕಡಿಮೆ ಆಗಿದೆ. ಈ ಸಲ ಆರ್ ಬಿ ಐ ನವರು NPA provision ಗೆ Balance sheet format ಯಾವ ರೀತಿ ತೋರಿಸಬೇಕು ಎಂದು ಕೆಲವೊಂದು ಹೊಸ norm ಮಾಡಿದ್ದು ಅದನ್ನು ಅನುಸರಿಸಿ ಸುಮಾರು ರೂ.90.00 ಕೋಟಿಯಷ್ಟನ್ನು ನಿಧಿಗಳಾದ ಇತರೇ ಖಾತೆಗೆ transfer ಮಾಡಿರುವುದರಿಂದ ಕಡಿಮೆಯಾಗಿರುತ್ತದೆ. ಬ್ಯಾಂಕಿನ ಸ್ವಂತ ಬಂಡವಾಳ ರೂ.332.00 ಕೋಟಿಗಳಷ್ಟಿದ್ದು, ಈಗ ರೂ.249 ಕೋಟಿಗಳಾಗಿದ್ದು ಇದಕ್ಕೆ ಬ್ಯಾಂಕಿನ ಲಾಭ ಮತ್ತು ವ್ಯಾಪಾರ, ವ್ಯವಹಾರ ಕಡಿಮೆ ಆಗಿರುವುದರಿಂದ ಮತ್ತು ನಿಧಿಗಳ ವರ್ಗಾವಣೆಯಿಂದ ಸ್ವಂತ ಬಂಡವಾಳ ಕಡಿಮೆ ಆಗಿದೆ. ಕಳೆದ ಸಾಲಿನಲ್ಲಿ ಠೇವಣಿಗಳು ರೂ.1465.00 ಕೋಟಿಗಳಷ್ಟಿದ್ದು ಈ ಸಾಲಿನಲ್ಲಿ ರೂ. 1414.00 ಕೋಟಿ ಗಳಾಗಿದ್ದು ಇತ್ತೀಚಿನ ಮೂರ್ನಾಲ್ಕು ಸಾಲಿನಲ್ಲಿ ಕೋವಿಡ್‌ನಿಂದಾಗಿ ಬ್ಯಾಂಕಿನ ಡೆಪಾಸಿಟ್ ಅಲ್ಪ ಪ್ರಮಾಣದಲ್ಲಿ ಕಡಿಮೆಯಾಗಿದೆ. ಮುಂದಿನ ದಿನಗಳಲ್ಲಿ ಹೆಚ್ಚಿಸುವ ಪ್ರಯತ್ನ ಮಾಡುತ್ತೇವೆ ಎಂದರು. ಮುಂದುವರೆದು ಕಳೆದ ಸಾಲಿನಲ್ಲಿ ದುಡಿಯುವ ಬಂಡವಾಳ ರೂ.1797.00 ಕೋಟಿ ಇದ್ದು ಈ ಸಾಲಿನಲ್ಲಿ ರೂ.1663.00 ಕೋಟಿಗಳಾಗಿದ್ದು Business fluctuation ನಿಂದ ಕಡಿಮೆಯಾಗಿದೆ. ಸಾಲ ಮತ್ತು ಮುಂಗಡಗಳು ಕಳೆದ ವರ್ಷ ರೂ.1023.00 ಕೋಟಿಗಳಿದ್ದು ಈ ಸಾಲಿನಲ್ಲಿ ಇದು ರೂ.995.00 ಕೋಟಿಗಳಾಗಿದೆ, ಸಾಲ ವಸೂಲಾತಿ ಮಾಡಿರುವುದರಿಂದ ಸಾಲ ಕಡಿಮೆಯಾಗಿರುತ್ತದೆ. ಬ್ಯಾಂಕಿನಲ್ಲಿ Surplus Fund ಇದ್ದು ಮುಂದಿನ ದಿನಗಳಲ್ಲಿ ಹೆಚ್ಚಿನ ಸಾಲವನ್ನು ನೀಡಲು ಪ್ರಯತ್ನ ಪಡುತ್ತೇವೆ. ಬ್ಯಾಂಕು ಕಳೆದ ಸಾಲಿನಲ್ಲಿ ರೂ. 69.00 ಕೋಟಿ ಲಾಭಗಳಿಸಿದ್ದು, ಅವಕಾಶಗಳ ವಾಪಸ್ಸಾತಿ ಕಡಿಮೆಯಾಗಿರುವುದರಿಂದ Advance and Business ಈ ಸಾಲಿನಲ್ಲಿ ರೂ. 25.00 ಕೋಟಿ ಮಾತ್ರ ಲಾಭಗಳಿಸಿದೆ ಎಂದು ಸಭೆಗೆ ಉತ್ತರಿಸಿದರು.

ಸದಸ್ಯರಾದ ಶ್ರೀ ಕೆ ಎಸ್ ದಯಾನಂದರವರು (ಮೆಂಬರ್‌ಶಿಪ್ ನಂ.1099) ಸಾಮಾನ್ಯ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದು ಕೋರಂ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿರುವುದಿಲ್ಲ.

ಸದಸ್ಯರಾದ ಶ್ರೀ ಕೆ ಎಸ್ ದಯಾನಂದರವರು ಮಾತನಾಡಿ ನೀವು ಆಡಿಟರ್ ಕೋವಿಡ್ ಕೋವಿಡ್ ಎಂದು ಹೇಳುತ್ತಲೇ ಇದ್ದೀರಾ? ನಮ್ಮ ಊರಿನಲ್ಲಿ ಯಾವುದಾದರೂ ವಸ್ತುಗಳ ಬೆಲೆ ಕಡಿಮೆ ಆಗಿದೆಯಾ? ಎಂದಾಗ ನಿರ್ದೇಶಕರಾದ ಶ್ರೀ ಎಸ್ ವಿಶ್ವನಾಥ್‌ರವರು ಯಾವ ಬೆಲೆ? ಎಂದು ಕೇಳಿದಾಗ ಸದಸ್ಯರಾದ ಶ್ರೀ ಕೆ ಎಸ್ ದಯಾನಂದ್‌ರವರು ಮಾತನಾಡಿ ಮದುವೆ ಮಾಡುವುದಾಗಲಿ, ನೀವು ಧರಿಸುವ ಸೂಟ್ ಬೆಲೆಯಾಗಲಿ ಕಡಿಮೆ ಆಗಿದೆಯಾ? ಎಂದು ಕೇಳಿದಾಗ ನಿರ್ದೇಶಕರಾದ ಶ್ರೀ ಎಸ್ ವಿಶ್ವನಾಥ್‌ರವರು ಮಾತನಾಡಿ ಬ್ಯಾಂಕಿಂಗ್ General rate ಮತ್ತು Banking Business ಗೂ ಯಾವುದೇ ಸಂಬಂಧವಿಲ್ಲ, ನಮ್ಮ ಬ್ಯಾಂಕಿನಲ್ಲಿ ಆಗಿರುವ ಆಗು–ಹೋಗುಗಳ ವ್ಯವಹಾರದ ಬಗ್ಗೆ ಮಾತನಾಡುತ್ತಿದ್ದೇವೆ ಎಂದಾಗ ಸದಸ್ಯರಾದ ಶ್ರೀ ಕೆ ಎಸ್ ದಯಾನಂದರವರು ಮಾತನಾಡಿ Nationalize Bank ನವರು ಕೋಟಿಗಟ್ಟಲೇ ಲಾಭ ಮಾಡುತ್ತಿದ್ದಾರೆ, ಆದರೆ ನಮ್ಮ ಬ್ಯಾಂಕ್ ಏಕೆ ಹಿಂದೆ ಇದೆ? ಎಂದು ಕೇಳಿದಾಗ ನಿರ್ದೇಶಕರಾದ ಶ್ರೀ ಎಸ್ ವಿಶ್ವನಾಥ್‌ರವರು ಮಾತನಾಡಿ Specific ಆಗಿ ಯಾವ Nationalized ಬ್ಯಾಂಕ್ ಅಥವಾ Public sector Bank ಎಷ್ಟು ಲಾಭ ಗಳಿಸಿದೆ ಹೇಳಿ ಎಂದಾಗ ಸದಸ್ಯರಾದ ಶ್ರೀ ಕೆ ಎಸ್ ದಯಾನಂದರವರು ಮಾತನಾಡಿ ನೀವು ಆಡಿಟರ್ ಬೇರೆ ಬೇರೆ ಬ್ಯಾಂಕುಗಳ ಬಗ್ಗೆ ದಿನ ಓದುವವರು ನೀವು ಹೇಳಬೇಕು, ನಾನು ಎಸ್ಸೆಸ್ಸೆಲ್ಸಿ ಫೇಲ್ ಎಂದು ಹೇಳಿದಾಗ ನಿರ್ದೇಶಕರಾದ ಶ್ರೀ ಎಸ್ ವಿಶ್ವನಾಥ್‌ರವರು ಮಾತನಾಡಿ ನೀವು ಈಗ ಓದಬೇಕಾಗಿಲ್ಲ ಎಂದು ಹೇಳಿದರು. ಸದಸ್ಯರಾದ ಶ್ರೀ ಕೆ ಎಸ್ ದಯಾನಂದ್‌ರವರು ಮಾತನಾಡಿ RBI ನವರು ಏನು ಹೇಳಿದ್ದಾರೆ, ಅದನ್ನು ಇಲ್ಲಿ ಪ್ರಿಂಟ್ ಮಾಡಿಲ್ಲ ಎಂದಾಗ ನಿರ್ದೇಶಕರಾದ ಶ್ರೀ ಎಸ್ ವಿಶ್ವನಾಥ್ ರವರು ಮಾತನಾಡಿ ಪ್ರಿಂಟ್ ಮಾಡಿದ್ದಾರೆ ಎಂದು ಹೇಳಿದಾಗ ಯಾವ ಪುಟದಲ್ಲಿ ಹೇಳಿ, ಎಲ್ಲಿ ಪ್ರಿಂಟ್ ಮಾಡಿದ್ದೀರಾ? ಎಂದು ಸದಸ್ಯರಾದ ಶ್ರೀ ಕೆ ಎಸ್ ದಯಾನಂದರವರು ಪ್ರಶ್ನಿಸಿದರು. ಅದಕ್ಕೆ ನಿರ್ದೇಶಕರಾದ ಶ್ರೀ ಎಸ್ ವಿಶ್ವನಾಥ್‌ರವರು provision ಎಂದು ಇದೆ, ಆ ಪುಟ ಸಂಖ್ಯೆ ಬಂದಾಗ ಹೇಳುತ್ತೇನೆ ಎಂದು ತಿಳಿಸಿದರು. ನಂತರ ಸದಸ್ಯರಾದ ಶ್ರೀ ಕೆ ಎಸ್ ದಯಾನಂದರವರು ಹೀಗೆ ಹೇಳಿ 62 ವರ್ಷದಿಂದ ನಮ್ಮನ್ನು fool ಮಾಡಿರುವುದು ಎಂದರು. ನಿರ್ದೇಶಕರಾದ ಶ್ರೀ ಎಸ್ ವಿಶ್ವನಾಥ್‌ರವರು ಮತ್ತೆ ಮಾತನಾಡಿ provision ಏಕೆ ಕಡಿಮೆಯಾಗಿದೆ ಎನ್ನುವುದಕ್ಕೆ ಲೆಕ್ಕಪರಿಶೋಧನೆ ವರದಿಯಲ್ಲಿ ಪುಟ ಸಂಖ್ಯೆ 32 ರಲ್ಲಿ ಇರುವುದಾಗಿ ತಿಳಿಸಿದರು.

ನಂತರ ಸದಸ್ಯರಾದ ಶ್ರೀ ಪಿ ಸದಾಶಿವಯ್ಯರವರು ಮಾತನಾಡಿ Subject wise ಚರ್ಚೆ ಮಾಡುವುದು ಸೂಕ್ತ, ಗೊಂದಲ ಮಾಡಿಕೊಂಡು ಕೊನೆಯ ಪುಟವನ್ನು ಮೊದಲು ಚರ್ಚಿಸುವುದು, ಮೊದಲ ಪುಟವನ್ನು ಕೊನೆಗೆ ಚರ್ಚಿಸುವುದು ಬೇಡ ಆ ವಿಷಯ ಬಂದಾಗ ಪ್ರಶ್ನೆ ಕೇಳಲು ಎಲ್ಲಾ ಸದಸ್ಯರಿಗೂ ಅವಕಾಶ ಸಿಗುತ್ತದೆ, ಅದಕ್ಕೆ ಸ್ಪಷ್ಟವಾದ ಉತ್ತರವನ್ನು ನೀಡುತ್ತಾರೆ Agenda ಪ್ರಕಾರ ಮುಂದುವರೆಸಲು ಸಭೆಗೆ ತಿಳಿಸಿದರು.

ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್‌ಕುಮಾರ್‌ರವರು ಮಾತನಾಡಿ Agenda ಪ್ರಕಾರ ಸಭೆಯ ಮುಂದಿನ ಕಾರ್ಯಕಲಾಪಗಳನ್ನು ಪ್ರಿಂಟ್ ಮಾಡಿರುವ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕು, ಅದನ್ನು skip ಮಾಡಿ ಮುಂದಿನದನ್ನು ಹಿಂದಕ್ಕೆ, ಹಿಂದಿನದನ್ನು ಮುಂದಕ್ಕೆ ಚರ್ಚಿಸುತ್ತೀರಾ, ನಂತರ ಲೆಕ್ಕಪರಿಶೋಧನೆ ವರದಿ ಬಂದಾಗ ಪ್ರಶ್ನೆಯನ್ನು ಕೇಳಬೇಕು, ಅದಕ್ಕೆ ಸಭೆಯಲ್ಲಿ ಉತ್ತರವನ್ನು ನೀಡುತ್ತಾರೆ ಎಂದು ಮನವಿ ಮಾಡಿದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ತಾವು ಹೇಳುತ್ತಿರುವುದು ಸರಿಯಾಗಿದೆ, ಸದಸ್ಯರಿಗೆ ಉತ್ತರ ಕೊಡುವುದಕ್ಕಾಗಿ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ನಡೆಸುವುದು ಎಂದು ಹೇಳಿದಾಗ ಮತ್ತೊಮ್ಮೆ ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್‌ರವರು ಮಾತನಾಡಿ ಕಾರ್ಯಕಲಾಪಗಳು ಯಾವ ರೀತಿ ಇದೆಯೋ ಅದೇ ರೀತಿ ನಡೆಸಬೇಕು ಎಂದು ಹೇಳಿದರು. ಇದಕ್ಕೆ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ Agenda ಪ್ರಕಾರ ನಡೆಸುವುದಾಗಿ ತಿಳಿಸಿ ದಯವಿಟ್ಟು ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು ಎಂದು ಕೇಳಿಕೊಂಡರು.

ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್‌ಕುಮಾರ್‌ರವರು ಮಾತನಾಡಿ ಸಭೆಯಲ್ಲಿ ಅನಾವಶ್ಯಕ ಮಾತುಗಳನ್ನಾಡುವುದು ಬೇಡ, ದಯಮಾಡಿ ಆಡಳಿತ ಮಂಡಳಿಯವರು ಕಾರ್ಯಕಲಾಪಗಳನ್ನು ಯಾವ ರೀತಿ ಪ್ರಿಂಟ್ ಆಗಿದೆಯೋ ಅದೇ ರೀತಿಯಲ್ಲಿ ಮುಂದುವರೆಯಲು ಸದಸ್ಯರೆಲ್ಲರೂ ಅನುಕೂಲ ಮಾಡಿಕೊಡಬೇಕು ಎಂದು ಸಭೆಯಲ್ಲಿ ನೆರೆದಿದ್ದ ಸದಸ್ಯರೆಲ್ಲರನ್ನು ಕೇಳಿಕೊಂಡರು.

**7. ಬ್ಯಾಂಕಿನ ಶಾಸನಬದ್ಧ ಲೆಕ್ಕ ಪರಿಶೋಧಕರು ಬಿಡುಗಡೆಗೊಳಿಸಿರುವ 2024-25 ನೇ ಸಾಲಿನ ಲಾಭ–ನಷ್ಟ, ಆಸ್ತಿ–ಜವಾಬ್ದಾರಿ ತಃಖ್ತೆಗಳನ್ನು ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಹಾಗೂ ಆಡಳಿತ ಮಂಡಳಿಯವರ ಸಮಾಧಾನಗಳನ್ನು ಸಭೆಯ ಅಂಗೀಕಾರಕ್ಕಾಗಿ ಮಂಡಿಸುವುದು.**

ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ 62 ನೇ ವಾರ್ಷಿಕ ಸಾಮಾನ್ಯ ಸಭೆಗೆ ಆಗಮಿಸಿರುವ ಗೌರವಾನ್ವಿತ ಸದಸ್ಯರೆಲ್ಲರಿಗೂ ನಮಸ್ಕರಿಸುತ್ತಾ 2024-25 ನೇ ಸಾಲಿನ ಲೆಕ್ಕಪರಿಶೋಧಕರ ವರದಿ ಹಾಗೂ ಆಡಳಿತ ಮಂಡಳಿಯವರ ಸಮಾಧಾನಗಳನ್ನು ಸಭೆಗೆ ಮಂಡಿಸುತ್ತಿದ್ದು, ಪುಟ ಸಂಖ್ಯೆಗಳನ್ನು ಹೇಳುವಾಗ ಆ ಪುಟ ಸಂಖ್ಯೆಗಳಲ್ಲಿ ಯಾವುದೇ ವಿಷಯದ ಬಗ್ಗೆ ಪ್ರಶ್ನೆಗಳನ್ನು ಕೇಳಬೇಕು ಅನ್ನಿಸಿದಲ್ಲಿ ಪ್ರಶ್ನೆಗಳನ್ನು ಕೇಳಬಹುದು ಎಂದು ಸಭೆಗೆ ತಿಳಿಸಿದರು.

ಸದಸ್ಯರಾದ ಜಿನ್ನಪ್ಪ ಹೊಸಮನಿರವರು (ಮೆ ನಂ 15966) ಸಭೆಯಲ್ಲಿದ್ದ ಸದಸ್ಯರಿಗೆ ನಮಸ್ಕರಿಸುತ್ತಾ Admin ವರದಿಯಲ್ಲಿ ಪುಟ ಸಂಖ್ಯೆ 17 ರಲ್ಲಿ Provision towards bad debts: in the previous year, it was Rs.123.00 crores. Now, in 2025, it has increased to Rs.190.00 crores. That means about Rs. 66.00 crores provision has been increased. In the audit report, page no. 9, it has been reported. The bad debts are towards 5 cases, about Rs.700 lakhs. So, we have 5 such cases. It has been mentioned clearly this bad debt, what has gone is due to negligence in verification of records. Why it has become bad debt, what the auditor has mentioned, that means our bank's aim is to lend the money in a proper way. Otherwise, till now, deposits are just waiting. Deposits are not risky. But when lending money, we have to be 200% careful. That means, when you are increasing the bad debts, that office knows that other bad debts are there, so they increased the provision. I want clarification and details in this regard. Director Sri Vishwanath stated The NPA provision what you are asking is: why have you made more? What is the necessity of making so much provision? That is your question?

During the year, what happened is regarding the NPA provision like in current accounts, as you know, whatever the NPA accounts were there earlier, we have made sufficient efforts to recover the same. That is one thing.

Second important thing is, nearly Rs.125 crores of NPA assets have been handed over or assigned to ARCIL, a company incorporated with the approval of RBI. There are 30 such companies; ARCIL is one of the leading ones in India. So, we have assigned the loan recovery to that company. However, in spite of handing it over, RBI has stated that for those assets also, provision has to be made until it is recovered.

So, as a continuing process, and as a matter of questioning, higher NPA provisioning is not new to our bank or only to cooperative banks. If you see across the banking sector nationalised banks, private banks all banks make sufficient provisions. Because we are in the business of lending money, and when we are in that business, it happens that there are chances of non-recovery due to external circumstances like COVID and some other reasons.

So, to have a cushioning and to safeguard the depositors' interest, we have to make sufficient provision. NPA provision is not money that has gone out of the banking system. It is still with the people, it is a form of cushioning. It also forms part of reserves. It is like a cushion. So, if you do not have sufficient reserves, all these setbacks like COVID, low business, non-recovery even then, the bank is able to make profits. Why? Because of sufficient provisioning.

So, that is the reason, sir, for a little bit of provisioning on the higher side. Whatever RBI has stated for your NPA, make Rs.100 crores provision we have made Rs.150 crores or Rs.170 crores, just to have cushioning. For any future setbacks, we can manage it. So, there should not be any problem in that regard. That is the reason provision has been made.

ಮತ್ತೊಮ್ಮೆ ಸದಸ್ಯರಾದ ಶ್ರೀ ಜಿನ್ನಪ್ಪ ಹೊಸಮನಿರವರು ಮಾತನಾಡಿ this loan provided, not recoverd that why we are not aggressive that is mainly because of faulty records that means verification has not taken proper care of it whether any suchthing are happening or not ಎಂದರು.

ನಿರ್ದೇಶಕರಾದ ಶ್ರೀ ಎಸ್ ವಿಶ್ವನಾಥ್‌ರವರು ಮಾತನಾಡಿ it is mandatory for any loan exceeding Rs.1.00 crore with to obtained two legal valuations, two property valuation, this norm we have made internally in our bank. For Loan exceeding Rs.1.00 crore amount we are obtained both, so this effort already been made ಎಂದು ಉತ್ತರಿಸಿದರು.

ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪರವರು ಮಾತನಾಡಿ ಎಲ್ಲರಿಗೂ ನಮಸ್ಕಾರಗಳನ್ನು ತಿಳಿಸುತ್ತಾ ಈಗ ನಡೆಯುತ್ತಿರುವ ವಿಷಯದ ಮೇಲೆ ಮಾತನಾಡುತ್ತೇನೆ, ಅವರು ಹೇಳಿರುವುದರಲ್ಲಿ advance ಮಾಡುವಾಗ ಕಣ್ಣು ಮುಚ್ಚಿಕೊಂಡು ಮಾಡಿದ್ದೀರಾ? ಎರಡು ವರ್ಷದಿಂದ ಈ ವಿಷಯವನ್ನು ಮತ್ತೆ ಮತ್ತೆ ಹೇಳುತ್ತಿದ್ದೇನೆ, ಕೋವಿಡ್‌ಗೂ ನಮ್ಮ ಬ್ಯಾಂಕಿಗೂ ಸಂಬಂಧವಿಲ್ಲ, ನಮ್ಮ ಬ್ಯಾಂಕ್ ಕೋವಿಡ್ ಬಂದಾಗಿನಿಂದ ವ್ಯವಹಾರದಲ್ಲಿ ಇಳಿಕೆ ಕಂಡಿತು. ಏಕೆಂದರೆ ಪ್ರತಿ ವರ್ಷ ಮಾರ್ಚ್‌ನಲ್ಲಿ adjustment, additional loan ಕೊಟ್ಟು renewal ಮಾಡಿಕೊಂಡು ಹತ್ತಾರು ವರ್ಷಗಳಿಂದ ಇದು continue ಆಗುತ್ತಾ ಬಂದಿದೆ, ಕೋವಿಡ್ ಬಂದಿದ್ದರಿಂದ ನಮ್ಮ ಬ್ಯಾಂಕ್ ಒಳ್ಳೆಯದೇ ಆಯಿತು. ಇದೆಲ್ಲಾ stop ಆಗಿತು. ಆದಾದ ಮೇಲೆ ಪದೇ ಪದೇ ಕೋವಿಡ್ ಅಂತ ಹೇಳುವುದಕ್ಕೆ ಹೋಗಬೇಡಿ, ಏಕೆಂದರೆ ನೋವಾಗುತ್ತದೆ. ನಮ್ಮ ಬ್ಯಾಂಕಿನಲ್ಲಿ 4 ವರ್ಷದಿಂದ ಡಿವಿಡೆಂಡ್ ಕೊಟ್ಟಿರಲಿಲ್ಲ, ಆದರೆ ಬೇರೆ ಬ್ಯಾಂಕಿನವರು ಆ ವರ್ಷ ಬಿಟ್ಟು ಬೇರೆ ವರ್ಷಗಳಲ್ಲಿ ಡಿವಿಡೆಂಡ್ ಕೊಟ್ಟಿದ್ದಾರೆ. ಸ್ವಯಂಕೃತ ಅಪರಾಧದಿಂದ ಡಿವಿಡೆಂಡ್ ಕೊಡುವುದಕ್ಕೆ ಆಗದೇ ಲಾಸ್ ಆಗಿದ್ದೇವೆ ಎಂದು ಹೇಳಿದರು. ಕೆಲವು ಸಾಲಗಳೆಲ್ಲ fake documents ಅಂತ ಬಂದಿದೆ, ಈ ಹಿಂದೆ ಇದ್ದ ಆಡಳಿತ ಮಂಡಳಿಗೆ 15 ರಿಂದ 20 ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಆಸ್ತಿಗಳ ಮೇಲೆ ಕೋಟಿಗಟ್ಟಲೆ ಸಾಲ ಕೊಡುವುದಕ್ಕೆ ಹೊರಟಿದ್ದೀರಾ? ಬಹಳ ಸಂತೋಷ. ಆದರೆ ಸಾಲ ಕೊಡಬೇಕಾದರೆ ಗೊತ್ತಿರುವವರನ್ನು ಹುಡುಕಬೇಕು, ಎರಡನೇಯದಾಗಿ ಸಾಲವನ್ನು ರೂ.1.00 ಕೋಟಿಯನ್ನಾದರೂ ಕೊಡಿ ಅಥವಾ ರೂ.5.00 ಕೋಟಿಯನ್ನಾದರೂ ಕೊಡಿ, ಹೊಸದಾಗಿ ಸಾಲವನ್ನು ನೀಡುವಾಗ ಇನ್ನೊಂದು additional security ಯಾಗಿ ತೆಗೆದುಕೊಳ್ಳಬೇಕು, ಜೊತೆಗೆ ಎಲ್ಲಾ ಜಾಮೀನುದಾರರ ಆಸ್ತಿಯನ್ನು ಬರೆಸಿಕೊಳ್ಳಬೇಕು. ನಾವೆಲ್ಲ ವ್ಯಾಪಾರ ಮಾಡುತ್ತ ಇರುವವರೇ ಬ್ಯಾಂಕ್ ನಡೆಸುತ್ತಿರುವುದು, ವ್ಯಾಪಾರ ಮಾಡುವವರಿಗೆ ಗೊತ್ತಾಗುವುದಿಲ್ಲವಾ ಎಲ್ಲಿ ಏಕೆ ತಪ್ಪಾಗಿದೆ? ಎಂದು ಹೇಳಿದರು. ಪದೇ ಪದೇ ಹೇಳಿದರೂ ಸಹ ತಿದ್ದಿಕೊಳ್ಳುವುದಿಲ್ಲ, ಪ್ರತಿ ವರ್ಷ ನೋವಿನಿಂದ ಏಕೆ ಮಾತನಾಡುತ್ತೇನೆ ಅಂದರೆ ಮಾತನಾಡದೆ ಮನೆಯಲ್ಲಿ ಇದ್ದರೆ ವಾಸಿ ಅನಿಸುತ್ತದೆ, ಆದರೂ ಮನಸ್ಸು ತಡೆಯುವುದಿಲ್ಲ. ಮೊದಲಿನ ಕಾಲದಿಂದಲೂ ಬ್ಯಾಂಕ್ ಅಷ್ಟೊಂದು ಚೆನ್ನಾಗಿ ನಡೆದುಕೊಂಡು ಬಂದಿದೆ, ಈ ವರ್ಷ progress ಕಾಲಂನಲ್ಲಿ ಬ್ಯಾಂಕಿನ ಅಂಕಿ ಅಂಶಗಳನ್ನು ಏಕೆ ಹಾಕಿಲ್ಲ ಎನ್ನುವುದು ಗೊತ್ತಿಲ್ಲ. ನೀವು 1990 ಇಸವಿಯಿಂದ 2000 ಇಸವಿಯವರೆಗೂ ಇದ್ದ ಬ್ಯಾಂಕಿನ ಅಂಕಿ–ಅಂಶದ growth ಹಿಂದೇನು ಆಗಿರುವುದಿಲ್ಲ, ಮುಂದೇನು ಆಗುವುದಿಲ್ಲ. ಅಪಪ್ರಚಾರದಿಂದ ಡೆಪಾಸಿಟ್ ಕಡಿಮೆಯಾಯಿತು ಎಂದು ಪದೇ ಪದೇ ಹೇಳುತ್ತೀರಾ? ಅಪಪ್ರಚಾರವನ್ನು ಯಾರು, ಏತಕ್ಕಾಗಿ ಮಾಡಿದರು, ಅಪಪ್ರಚಾರವನ್ನು ಮಾಡಿದ್ದು ಸರಿ ಎಂದು ಅಲ್ಲ, ನಮ್ಮ ಬ್ಯಾಂಕಿನಲ್ಲಿ ಆಗುವ ತಪ್ಪನ್ನು ತೋರಿಸಿ ತಿದ್ದುವುದಕ್ಕೆ ಈ ಮಹಾಸಭೆಯಲ್ಲಿ ಸೇರಿದ್ದೇವೆ. ದಯಮಾಡಿ ಬ್ಯಾಂಕಿನ ವಿರುದ್ದ ಅಪವಾದವಾಗಿ ಬೇರೆ ಹೊರಗಡೆ ಎಲ್ಲೂ ಮಾತನಾಡಬೇಡಿ ಎಂದು ಸಭೆಯಲ್ಲಿ ನೆರೆದಿದ್ದ ಎಲ್ಲಾ ಸದಸ್ಯರಲ್ಲಿ ವಿನಂತಿ ಮಾಡಿದರು. ಮುಂದುವರೆದು, ತುಮಕೂರಿನಲ್ಲಿ ನಮ್ಮ ಬ್ಯಾಂಕ್ ಬಹಳ ಗಟ್ಟಿಯಾಗಿದೆ ಎಂದು ನೂರು ಬಾರಿ ಮಾತನಾಡಿದ್ದೇನೆ. ಈ ಹಿಂದೆಯು ಸಹ ಹಲವಾರು ಬಾರಿ ಹೇಳಿದ್ದೇನೆ, ಸದಸ್ಯರು ಹೆದರುವ ಅವಶ್ಯಕತೆ ಇಲ್ಲ, ಠೇವಣಿದಾರರ ದುಡ್ಡು ಒಂದು ರೂಪಾಯಿನು ಖರ್ಚು ಮಾಡಲ್ಲ, ಖಾತೆದಾರರ ದುಡ್ಡು ಒಂದು ರೂಪಾಯಿನೂ ಮುಟ್ಟುವುದಿಲ್ಲ, ನಮ್ಮ ಬ್ಯಾಂಕಿನಲ್ಲಿ ಸ್ವಂತ ಬಂಡವಾಳವೇ ರೂ. 300.00 ಕೋಟಿ ಇದ್ದು, ಅದರಲ್ಲಿ ರೂ.50.00 ರಿಂದ ರೂ.100.00 ಕೋಟಿ ಹೋದರೂ ಸಹ ಇನ್ನು ಇರುತ್ತದೆ. ನೀವು ಈ ಸಾಲಿನ ಅಂಕಿ ಅಂಶವನ್ನು ನೋಡಿದರೆ ರೂ.99.00 ಕೋಟಿ deductions ಅಂತ ಹೇಳಿದ್ದೀರ? ಎಲ್ಲಿಂದ ಎಲ್ಲಿಗೆ transfer ಮಾಡುತ್ತೀರಾ? ARCIL ಎನ್ನುವರು ಯಾರು? ಮಂಡ್ಯ ಶಾಖೆಯಲ್ಲಿ ಸಾಲದ ಖಾತೆಯನ್ನು ಚುಕ್ತಾ ಮಾಡಿಕೊಂಡಿರುವುದಾಗಿ ತಿಳಿಸಿದ್ದೀರಾ?. ಸಾಲವು ಚುಕ್ತಾ ಆದರೆ ನಮಗೆ ಬರಬೇಕಾಗಿರುವುದು ಬಾಕಿ ಇಲ್ಲವಾ? ಆ ಪುಟ ಬಂದಾಗ ಮಾತನಾಡುತ್ತೇನೆ ಎಂದರು. ಆಡಿಟರ್ ಆಡಿಟ್ ಮಾಡಿರುತ್ತಾರೆ. ಈ ತರಹದ ಆಡಿಟ್ ವರದಿಯ ಮೇಲೆ ಟೀಕೆ ಇಲ್ಲ, ಆದರೆ ಆಡಿಟ್ ರಿಪೋರ್ಟ್‌ನಲ್ಲಿ ಸಾಕಷ್ಟು ಡಿಟೇಲ್ ಆಗಿ ಕೊಡಬೇಕು, ಆಡಿಟರ್‌ನವರು ಬ್ಯಾಂಕನ್ನು ಎಚ್ಚರಿಸಬೇಕು, ಆ ಎಚ್ಚರಿಕೆಯ ಕೆಲಸ ಆಗುತ್ತಿಲ್ಲ. ಏಕೆಂದರೆ ನಾವು ವ್ಯಾಪಾರ ಮಾಡುವವರು ಬ್ಯಾಂಕಿನ ಆಗುಹೋಗುಗಳನ್ನು ಗಮನಿಸಿರುವುದಿಲ್ಲ, ಅವರವರ ಕೆಲಸದಲ್ಲಿ ಬ್ಯುಸಿ ಇರುತ್ತಾರೆ. ತಪ್ಪು ಮಾಡುತ್ತೀದ್ದೀರಾ? ಎಂದು ಆಡಿಟ್‌ನವರು ಕಾಲ ಕಾಲಕ್ಕೆ ಎಚ್ಚರಿಕೆ ವರದಿ ನೀಡಿದ್ದರೆ ಈ ರೀತಿ ಆಗುತ್ತಿರಲಿಲ್ಲ, ಆಡಿಟರ್‌ರವರಿಗೆ ರಿಪೋರ್ಟ್‌ನ್ನು ಬರೆಯುವುದಕ್ಕೆ ಸ್ವತಂತ್ರ ಕೊಡಿ, ಅದಕ್ಕೆ ಸಮಾಧಾನಗಳನ್ನು ಕೊಡಿ ಮುಂದಿನ ವರ್ಷ ಅದನ್ನೆಲ್ಲಾ ತಿದ್ದಿಕೊಂಡಾಗ ಎಲ್ಲಾ ಸದಸ್ಯರು ಒಪ್ಪಿಗೆ ಕೊಡುತ್ತಾರೆ ಯಾರು ಇಲ್ಲವೆಂದು ಹೇಳುವುದಿಲ್ಲ. ಆದರೆ ಬ್ಯಾಂಕ್ ಬೆಂಗಳೂರಿನವರಿಗೆ, ಮೈಸೂರಿನವರಿಗೆ ಗೊತ್ತಿಲ್ಲದೆ ಇರುವವರಿಗೆ ಕೋಟಿಗಟ್ಟಲೆ ಸಾಲ ಕೊಡುತ್ತೀರಾ? ಆಮೇಲೆ 20 ಕೋಟಿ, 50 ಕೋಟಿ ರೈಟ್ ಆಫ್ ಕೇಳುತ್ತೀರಾ, ಹೇಗೆ ಮನಸ್ಸು ಬರುತ್ತದೆ ಎಂದರು. ನಮ್ಮ

ವ್ಯಾಪಾರಸ್ಥರು ರೂ.50000/– ಅಥವಾ ರೂ.100000/–ಗಳನ್ನು ಸಾಲ ತೆಗೆದುಕೊಂಡಿರುತ್ತಾರೆ. ಅವನಿಗೆ renewal ಮಾಡದೆ ಆಕಸ್ಮಾತ್ ಆಗಿ defaulter ಆದರೆ ಎಷ್ಟು ಹಿಂಸೆ ಆಗುತ್ತದೆ, ಬೆಂಗಳೂರಿನಲ್ಲಿರುವ 5 ರಿಂದ 10 ಕೋಟಿ mortgage ಸಾಲ ಕೊಡುತ್ತೀರಾ?, ಅವರು repayment ಸರಿಯಾಗಿ ಮಾಡುತ್ತಾರಾ, repaymentಗೆ source ಏನು ಇದೆಯಾ? 10 ವರ್ಷ ಆದರೂ ಸಾಲ ಕಟ್ಟಿರುವುದಿಲ್ಲ ಮತ್ತು ಸಾಲಕ್ಕಿಂತ ಬಡ್ಡಿ ಜಾಸ್ತಿ ಆಗುವವರೆಗೂ ಬಿಡುತ್ತೀರಾ ಎಂದು ಹೇಳಿದರು. ನಂತರ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ತಮ್ಮ ಸಲಹೆಯನ್ನು ತೆಗೆದುಕೊಳ್ಳುತ್ತೇವೆ ಎಂದಾಗ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಹಾರಿಕೆ ಉತ್ತರ ಬರುತ್ತಿದೆ, ನನಗೆ ಸಲಹೆ ಬೇಡ, ನಮ್ಮ ಬ್ಯಾಂಕಿಗೆ ಅನ್ಯಾಯ ಆಗುತ್ತದೆ ಅದನ್ನು ಸರಿಯಾಗಿ ನಡೆಸಿ ಎಂದು ಸಲಹೆಯನ್ನು ನೀಡಿದರು. ARCIL ಗೆ ರೂ.32.00 ಕೋಟಿ ಖರ್ಚು ಹಾಕಿದ್ದೀರಾ, ಈ ಹಿಂದೆನೇ ಖರ್ಚು ಹಾಕುವುದಕ್ಕೆ ಬರುವುದಿಲ್ಲ, ಅದನ್ನು provision ನಲ್ಲಿ ತೋರಿಸಬೇಕು ಎಂದು ಹೇಳಿದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಆ ಪುಟ ಸಂಖ್ಯೆ ಬಂದಾಗ ಮಾತನಾಡಿ, ಕಾರ್ಯಕಾರಿ ಮಂಡಳಿಯವರನ್ನು demote ಮಾಡಬೇಡಿ, ತಾವು ಹೇಳಿದ ಹಾಗೆ ಕೋವಿಡ್ ಬಂದಾಗಿನಿಂದಲೂ ಎನ್ ಪಿ ಎ ಜಾಸ್ತಿ ಇದೆ ವಿನ: ಇವತ್ತಿನ ಪರಿಸ್ಥಿತಿಯಲ್ಲಿ ಯಾವುದೇ ಎನ್ ಪಿ ಎ ಜಾಸ್ತಿಯಾಗಿಲ್ಲ, ಎನ್ ಪಿ ಎ ಆಗುವವರೆಗೂ 3 ರಿಂದ 4 ವರ್ಷ prompt ಆಗಿ repayment ಮಾಡಿದ್ದಾರೆ. ಕೋವಿಡ್ ಅವಧಿಯಲ್ಲಿ ಮಾತ್ರ ಅವರ ವ್ಯವಹಾರಗಳು ಏರುಪೇರು ಆಗಿದ್ದರಿಂದ ಎನ್ ಪಿ ಎ ಆಗಿದೆ ಹೊರತು ಕೋವಿಡ್ ನಂತರ ನೀಡಿರುವ ಸಾಲಗಳು ಎನ್ ಪಿ ಎ ಆಗಿರುವುದಿಲ್ಲ ಎಂದು ಹೇಳಿದಾಗ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಮಾತನಾಡಿ ನಿಮ್ಮ ಉತ್ತರವನ್ನು ಒಪ್ಪುವುದಿಲ್ಲ, ಈ ಹಿಂದೆ ಬಹಳಷ್ಟು ವರ್ಷ ಹೇಳಿದ್ದೇನೆ, ಈ ವರ್ಷವು ಸಹ ಹೇಳುತ್ತಿದ್ದೇನೆ, ದಯಮಾಡಿ ಬರೆದುಕೊಳ್ಳಿ, ನೀವು 10 ರಿಂದ 15 ಜನ ಸಮಾನ ಮನಸ್ಕರರು ಮತ್ತು ಅನುಭವವಿರುವ ಹಿರಿಯ ವ್ಯಾಪಾರಸ್ಥರನ್ನು ಕರೆಸಿ ಕೂರಿಸಿಕೊಂಡು ಈ ವರ್ಷದ Balance sheet ಮೇಲೆ ಏನೇನು ನ್ಯೂನತೆಗಳಿವೆ ಎಂದು ಕೇಳಿ ತಪ್ಪು ಅಥವಾ ಸರಿ ಇದ್ದರೆ defend ಮಾಡಿಕೊಳ್ಳಬೇಕು. ಸಾಮಾನ್ಯ ಸಭೆಯಲ್ಲಿ detail ಆಗಿ ಚರ್ಚೆ ಮಾಡಲು ಆಗುವುದಿಲ್ಲ, ನೀವು ಹೇಳುವ ಅಂಕಿ ಅಂಶಗಳನ್ನು ಒಪ್ಪುವುದಿಲ್ಲ ಏಕೆಂದರೆ ಕೋವಿಡ್‌ನ ಮುಂಚೆ ಸರಿಯಾಗಿತ್ತು, ಕೋವಿಡ್ ಆದ ಮೇಲೆ ತೊಂದರೆ ಆಯಿತು ಎಂದು ಹೇಳುವುದು ತಪ್ಪು. ನೀವು advance ಮಾಡಿರುವ ಕ್ರಮ ಸರಿ ಇರುವುದಿಲ್ಲ, ಬೆಂಗಳೂರಿಗೆ ಹೋಗಿ ಕಣ್ಣುಮುಚ್ಚಿಕೊಂಡು ಸಾಲ ನೀಡಿ 10 ವರ್ಷ ಆದರೂ ಅವರ ಹತ್ತಿರ ಹೋಗಿರುವುದಿಲ್ಲ ಎಂದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಯವುದೋ ಒಂದು ಕೇಸನ್ನು ಹೇಳಬೇಡಿ ಎಂದಾಗ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಮಾತನಾಡಿ ನಾನು ಏನೇ ಮಾತನಾಡಿದರು ಸಹ ಅದು ನಾಲ್ಕು ಗೋಡೆ ಮಧ್ಯ ಮಾತನಾಡುತ್ತೇನೆ ನಮ್ಮ ಬ್ಯಾಂಕಿನ ಸಣ್ಣ ತಪ್ಪುಗಳು ಹೊರಗಡೆ ಹೋಗಬಾರದು ಎಂದು ಹೇಳಿದಾಗ ಸಭೆಯಲ್ಲಿ ಸದಸ್ಯರಲ್ಲೇ ಗದ್ದಲ ಶುರುವಾದಾಗ ಸದಸ್ಯರುಗಳೂ ಯಾರೂ harsh ಆಗಿ ಮಾತನಾಡಬೇಡಿ, ಬ್ಯಾಂಕನ್ನು ಸರಿಪಡಿಸಲು ಮಾತನಾಡಿರುವುದಾಗಿ ತಿಳಿಸಿ ನನ್ನ ಕಳಕಳಿಯನ್ನು ಹಾಳು ಮಾಡಬೇಡಿ, ಈ ರೀತಿ ಮಾಡಿದರೆ ನನಗೆ ಸ್ಫೂರ್ತಿ ಹೋಗಿಬಿಡುತ್ತದೆ, ಏನು ಮಾಡುವುದು, ಏನಾದರೂ ಪರವಾಗಿಲ್ಲ ಎಂದು ಸಭೆಯಲ್ಲಿ ನೆರೆದಿದ್ದ ಸದಸ್ಯರಲ್ಲಿ ಮನವಿ ಮಾಡಿಕೊಂಡರು. ನಾನು 3 ವರ್ಷದಿಂದ ಹತ್ತಾರು ಕೋಟಿ Deposit withdraw ಆಗುವುದನ್ನು ತಡೆ ಹಿಡಿಸಿದ್ದೇನೆ ಕಾರಣವೇನೆಂದರೆ ಬ್ಯಾಂಕ್ ಮೇಲೆ ಇರುವ ಅಭಿಮಾನ ಎಂದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಶ್ರೀ ಕೆ ಜಿ ಮುನಿಗಂಗಪ್ಪನವರಿಗೆ ಧನ್ಯವಾದಗಳನ್ನು ತಿಳಿಸಿದರು. ಮುಂದುವರೆದು ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಮಾತನಾಡಿ ನಮ್ಮ ಬ್ಯಾಂಕಿನ ನಿರ್ದೇಶಕರು ಹಾಗೂ ನಮ್ಮ ಹತ್ತಾರು ಜನ ಸಂಬಂಧಿಕರು, ರೂ. 15 ರಿಂದ ರೂ 20.00 ಲಕ್ಷ retirement benefits ನ ಹಣವನ್ನು ಬ್ಯಾಂಕಿನಲ್ಲಿ ಇಟ್ಟಿದ್ದಾರೆ, ನಮ್ಮ ಬ್ಯಾಂಕಿನ ದುಡ್ಡು ಹೊರಹೋಗುವುದಿಲ್ಲ, ಯಾರು ಭಯ ಪಡುವ ಅಗತ್ಯವಿಲ್ಲ ಎಂದು ಹೇಳಿರುವುದಾಗಿ ಸಭೆಗೆ ತಿಳಿಸಿದರು.

ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮುಂದುವರೆಸಿ ಪುಟ ಸಂಖ್ಯೆ ಹೇಳುತ್ತೇನೆ ಯಾವುದಾದರೂ ಪ್ರಶ್ನೆ ಇದ್ದರೆ ಕೇಳಿ ಎಂದು ಹೇಳಿ ಪುಟ ಸಂಖ್ಯೆ 1,2,3,4,5,6,7,8,9 ಎಂದು ಹೇಳುತ್ತಾ ಹೋದಾಗ ಸದಸ್ಯರಾದ ಶ್ರೀ ಆರ್ ಎಸ್ ಪ್ರಭು (ಮೆ ನಂ 1973) ರವರು ಮಾತನಾಡಿ ನಮ್ಮ ಬ್ಯಾಂಕಿನ ಎಲ್ಲ ನಿರ್ದೇಶಕರುಗಳಿಗೆ, ಸದಸ್ಯರುಗಳಿಗೆ, ಸಿಬ್ಬಂದಿ ವರ್ಗದವರಿಗೆ ಹಾಗೂ ಎಲ್ಲ ಹಿತೈಷಿಗಳಿಗೆ ನಮಸ್ಕಾರಗಳನ್ನು ತಿಳಿಸುತ್ತಾ ಪುಟ ಸಂಖ್ಯೆ 8 ರಲ್ಲಿ ಕ್ರಮ ಸಂಖ್ಯೆ 3 ರಲ್ಲಿ 4 ಕೆಲವು ಶಾಖೆಗಳಲ್ಲಿ ಗ್ರಾಹಕರು ಪಡೆದುಕೊಂಡಿರುವ ಕೆಲವು ಪೇ– ಆರ್ಡರ್‌ಗಳು ನಗದೀಕರಿಸಲ್ಪಟ್ಟಿರುವುದಿಲ್ಲ, ಗಮನಹರಿಸಲು ಸೂಚಿಸಿದ್ದು, ಪೇ–ಆರ್ಡರ್‌ಗಳು ಏಕೆ ನಗದೀಕರಣ ಆಗಿರುವುದಿಲ್ಲ, ಬ್ಯಾಂಕಿನಲ್ಲಿ ಎಷ್ಟು ಪೇ– ಆರ್ಡರ್‌ಗಳು pending ಇದೆ? ಎಷ್ಟು ವರ್ಷದ ತನಕ ವಾಯಿದೆ ಇರುತ್ತದೆ? ಇದರ ಬಗ್ಗೆ ಮಾಹಿತಿ ಕೊಡಿ ಎಂದು ಕೇಳಿದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಕೆಲವರು ಪೇ–ಆರ್ಡರ್‌ಗಳು ಆರ್ ಟಿ ಓ ಕಛೇರಿಗೆ submit ಮಾಡುವುದಕ್ಕೆ ತೆಗೆದುಕೊಂಡು ಅದನ್ನು encash ಮಾಡಿಕೊಂಡಿರುವುದಿಲ್ಲ ಮತ್ತು present ಆಗಿರುವುದಿಲ್ಲ ಎಂದು ಉತ್ತರಿಸಿದಾಗ ಸದಸ್ಯರಾದ ಶ್ರೀ ಆರ್ ಎಸ್ ಪ್ರಭುರವರು ಮಾತನಾಡಿ ಬ್ಯಾಂಕಿನಲ್ಲಿ ಈ amount ಎಲ್ಲಿ ಇರುತ್ತದೆ? ಯಾವ ಖಾತೆಗೆ ಹೋಗಿರುತ್ತದೆ? ಎಂದು ಕೇಳಿದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ liabilities ನಲ್ಲಿ ಇರುತ್ತದೆ ಎಂದು ಉತ್ತರಿಸಿದರು. ನಂತರ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಮಾರ್ಚ್ ಅಂತ್ಯದಲ್ಲಿ ರೂ.4,97,57,910/-ಗಳ ಪೇ–ಆರ್ಡರ್‌ಗಳಿದ್ದು ಇದರಲ್ಲಿ ರೂ.4,37,06,329/-ಗಳ ಒಂದು ಪೇ–ಆರ್ಡರ್ ಕ್ಲೋಸ್ ಆಯಿತು, ಇನ್ನು 3 ವರ್ಷಗಳು ಆದ ಮೇಲೆ encash ಆಗದೆ ಇರುವ ರೂ.46,62,156/-ಗಳ 2698 ಪೇ ಆರ್ಡರ್‌ಗಳು ನಮ್ಮಲ್ಲಿಯೇ ಉಳಿದಿದ್ದು 10 ವರ್ಷಗಳಾದ ಮೇಲೆ ಆರ್ ಬಿ ಐ ಖಾತೆಗೆ ವರ್ಗಾವಣೆ ಮಾಡುತ್ತೇವೆ. ರೂ. 46,62,156/-ಗಳ ಮೊತ್ತವನ್ನು 3 ವರ್ಷ ಆದ ಮೇಲೆ ಯಾವಾಗಲಾದರೂ claim ಗೆ ಬಂದರು ಸಹ ವಾಪಸ್ಸು ಮಾಡಬಹುದು ಎಂದು ಉತ್ತರಿಸಿದರು.

ಸದಸ್ಯರಾದ ಶ್ರೀ ಆರ್ ಎಸ್ ಪ್ರಭುರವರು ಮಾತನಾಡಿ ಪುಟ ಸಂಖ್ಯೆ 9 ರಲ್ಲಿ ನಮ್ಮ ಹಿರಿಯ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪ ನವರು ಈಗಾಗಲೇ ಮಾತನಾಡಿ 5 ಅಕೌಂಟ್‌ಗಳು ಕಳೆದ 11 ವರ್ಷದಿಂದ backlog ಆಗಿದೆ, ಕಳೆದ ಸಾಲಿನಲ್ಲಿ ಸಹ ಪ್ರಶ್ನೆ ಕೇಳಿದ್ದು ಇಲ್ಲಿಯವರೆಗೂ ಏನು ತಿದ್ದಿಕೊಂಡಿಲ್ಲವೆಂದು ಹೇಳಿದ್ದಾರೆ. ಆದರೆ ಆಡಿಟ್ ವರದಿ ಸಾಲಿನ ಲೆಕ್ಕಪರಿಶೋಧನಾ ವೇಳೆಯಲ್ಲಿ ಯಾವುದೇ ಗುರುತರ ವಂಚನೆ ಪ್ರಕರಣಗಳು ಇರುವುದಿಲ್ಲ, ಯಾವುದೇ ಸಲಹೆ ಕೊಟ್ಟರು ಸಹ ಬ್ಯಾಂಕಿನವರು ತಿದ್ದಿಕೊಳ್ಳುತ್ತಿಲ್ಲ ಎಂದು ಹೇಳಿದ್ದು, ಆದರೆ ಗುರುತರ ವಂಚನೆ ಆರೋಪ ಯಾವುದು ಬಂದಿರುವುದಿಲ್ಲ ಎಂದು ಹೇಳಿ ಎಲ್ಲ ನಿರ್ದೇಶಕರುಗಳಿಗೆ ಧನ್ಯವಾದಗಳನ್ನು ತಿಳಿಸಿದರು, ಇದೆಲ್ಲಾ 7 ರಿಂದ 12 ವರ್ಷಗಳ ಹಳೆಯ ಸಾಲಗಳು ಈ ವರದಿ ವರ್ಷದಲ್ಲಿ ಯಾವುದೇ ಗುರುತರ ವಂಚನೆ ಪ್ರಕರಣಗಳು ಬಂದಿಲ್ಲವಾದ್ದರಿಂದ ಬ್ಯಾಂಕಿನ ಸಿಬ್ಬಂದಿಗಳು ಹಾಗೂ ನಿರ್ದೇಶಕರುಗಳು ಈಗಾಗಲೇ ಎಚ್ಚೆತ್ತು ಕೊಂಡಿದ್ದಾರೆ ಎಂದು ಹೇಳಿ ಮತ್ತೊಮ್ಮೆ ಧನ್ಯವಾದಗಳನ್ನು ತಿಳಿಸಿದರು.

ಸದಸ್ಯರಾದ ಶ್ರೀ ಜಿ ಎಂ ದಿನೇಶ್‌ರವರು ಮಾತನಾಡಿ ಈ ಬ್ಯಾಂಕಿನಲ್ಲಿ 2013 ರಲ್ಲಿ ಸಾಲವನ್ನು ಚುಕ್ತಾ ಮಾಡಿ ತುಂಬಾ ವರ್ಷಗಳೆ ಆಗಿದೆ. ಆದರೂ ಸಹ CIBIL score ನಲ್ಲಿ Active ಇದ್ದು TGMC Bank ನಲ್ಲಿ ಸಾಲ ಇದೆ ಎಂದು ಬರುತ್ತಿದೆ, ಬೇರೆ ಯಾವುದೇ ಬ್ಯಾಂಕಿಗೆ ಸಾಲವನ್ನು ಪಡೆಯಲು ಹೋದಾಗ ನೀವು ಇನ್ನೂ ಸಾಲಗಾರರಾಗಿಯೇ ಇದ್ದಿರಾ? CIBIL ನಲ್ಲಿ active ಇದೆ. ನಿಮಗೆ ಸಾಲವನ್ನು ಹೇಗೆ ಕೊಡುವುದು ಎಂದು ಹೇಳುತ್ತಾರೆ. ನನಗೆ ತುಂಬಾ ನೋವಾಗಿದೆ. ಈಗಾಗಲೇ ಬ್ಯಾಂಕಿಗೆ intimation ಕೊಟ್ಟಿದ್ದು, ಇಲ್ಲಿಯವರೆಗೂ ಯಾವುದೇ clarity ಬಂದಿರುವುದಿಲ್ಲ, ದಯವಿಟ್ಟು ಈ ರೀತಿ ಯಾವ ಸದಸ್ಯರಿಗೆ ಆಗದ ಹಾಗೆ ನೋಡಿಕೊಳ್ಳಬೇಕು ಎಂದು ಹೇಳಿದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ದಯವಿಟ್ಟು ಸದಸ್ಯರು ತಿಳಿದುಕೊಳ್ಳಬೇಕು ನಾವು CIBIL ಗೆ update ಮಾಡಿರುತ್ತೇವೆ ಎಂದು ಹೇಳಿದಾಗ, ಸದಸ್ಯರಾದ ಶ್ರೀ ಜಿ ಎಂ ದಿನೇಶ್‌ರವರು ಮಾತನಾಡಿ ನೀವು update ಮಾಡಿದ್ದರೆ ಇನ್ನು TGMC Bank ಎಂದು ತೋರಿಸುತ್ತಿದೆ? ಎಂದು ಪ್ರಶ್ನಿಸಿದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಸಿಬಿಲ್ ನವರು update ಮಾಡದೆ ಇದ್ದರೆ ಅದು ತಪ್ಪಾಗುವುದಿಲ್ಲ ಎಂದಾಗ ಸದಸ್ಯರಾದ ಶ್ರೀ ಜಿ ಎಂ ದಿನೇಶ್‌ರವರು ಮಾತನಾಡಿ ಇದನ್ನು ಯಾರ ಹತ್ತಿರ ಮಾಡಿಸಬೇಕು? ಯಾರನ್ನ ಕೇಳಬೇಕು? ಎಂದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಸಿಬಿಲ್ ಅವರನ್ನು ಕೇಳಬೇಕು ಎಂದು ತಿಳಿಸಿದರು. ಅದಕ್ಕೆ ಸದಸ್ಯರಾದ ಶ್ರೀ ಜಿ ಎಂ ದಿನೇಶ್‌ರವರು ಮಾತನಾಡಿ ಸಾಲವು ಚುಕ್ತಾ ಆಗಿರುವುದನ್ನು ಬ್ಯಾಂಕಿನವರು ಹೇಳಬೇಕು. ಸಿಬಿಲ್‌ನವರು ಅಲ್ಲ ಎಂದಾಗ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ technical ಆಗಿ ಏನು ಆಗಿದೆ ಎನ್ನುವುದಕ್ಕೆ ಉತ್ತರ ನೀಡುತ್ತೇವೆ ಎಂದು ಹೇಳಿದರು, ನಂತರ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ 15 ದಿನಕ್ಕೆ ಒಂದು ಬಾರಿ report update ಮಾಡುತ್ತೇವೆ, ನೀವು Application ನೀಡಿ CIBIL ನವರ ಗಮನಕ್ಕೆ ತಂದು ಸರಿಪಡಿಸುವುದಾಗಿ ತಿಳಿಸಿದಾಗ ಸದಸ್ಯರಾದ ಶ್ರೀ ಜಿ ಎಂ ದಿನೇಶ್‌ರವರು ಮಾತನಾಡಿ ಈಗಾಗಲೇ ಅದರ ಬಗ್ಗೆ ಪತ್ರವನ್ನು ನೀಡಿದ್ದು ಏನು ಆಗಿಲ್ಲದ ಕಾರಣ ದಯವಿಟ್ಟು ಸರಿಪಡಿಸಬೇಕು ಎಂದು ಕೇಳಿಕೊಂಡರು. ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಅದರ ಮಾಹಿತಿಯನ್ನು ಪರಿಶೀಲಿಸುವುದಾಗಿ ತಿಳಿಸಿದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ತಮ್ಮ problem raise ಮಾಡಿ CIBIL ನಿಂದ 48 ಗಂಟೆಯ ಒಳಗಾಗಿ ಸರಿಪಡಿಸಿಕೊಡುತ್ತೇವೆ ಎಂದು ಉತ್ತರಿಸಿದರು.

ಸದಸ್ಯರಾದ ಶ್ರೀ ಸಿ ಎಸ್ ನೀಲಕಂಠರವರು ಮಾತನಾಡಿ ನಮಸ್ಕಾರಗಳನ್ನು ತಿಳಿಸುತ್ತಾ, ಸಭೆಯಲ್ಲಿ ಗಮನಿಸಿದಾಗ ಒಬ್ಬ ಹಿರಿಯ ನಿರ್ದೇಶಕರು ಗೈರು ಹಾಜರಾಗಿದ್ದಾರಾ, ಅವರು permission ತೆಗೆದುಕೊಂಡಿದ್ದಾರಾ? ಅಥವಾ ಹಾಗೇ ಗೈರು ಹಾಜರಾಗಿರುವುದನ್ನು ತಿಳಿಸಿ ಎಂದರು ಹಾಗೂ ಎರಡನೆಯದು ಪುಟ ಸಂಖ್ಯೆ 8ರಲ್ಲಿ ಅನೇಕ ಶಾಖೆಗಳಲ್ಲಿ ಲಾಕರ್‌ಗಳು ಖಾಲಿ ಇದ್ದು ಅದನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಂಡಿಲ್ಲವೆಂದು Audit ವರದಿಯಲ್ಲಿ ಏಕೆ objection ಆಗಿದೆ ಎಂದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಹೌದು, ಅದು ಅನೇಕ ಲಾಕರ್‌ಗಳು ಖಾಲಿ ಇದೆ ಅಂದರೆ ಜನಕ್ಕೆ ದೊಡ್ಡ ಲಾಕರ್‌ಗಳು ಬೇಕು, ದೊಡ್ಡ ಲಾಕರ್‌ಗಳು fill up ಆಗಿದೆ, ಚಿಕ್ಕ ಲಾಕರ್‌ಗಳಿಗೆ demand ಇಲ್ಲ ಆದ್ದರಿಂದ ಭರ್ತಿ ಆಗಿರುವುದಿಲ್ಲ, marketing ಮಾಡುತ್ತಿರುವುದರಿಂದ ಈಗ ಸ್ವಲ್ಪ ಖಾಲಿ ಆಗುತ್ತಿದೆ ಎಂದು ಹೇಳಿದರು. ಸದಸ್ಯರಾದ ಶ್ರೀ ಸಿ ಎಸ್ ನೀಲಕಂಠರವರು ಮಾತನಾಡಿ ಯಾವುದೇ size ಇರುವ ಎಲ್ಲಾ ಲಾಕರ್‌ಗಳಿಗೆ ರೂ.15000/-ಗಳ Locker deposit ಇದೆ, ಅಷ್ಟು ಮೊತ್ತ ಎಲ್ಲರಿಗೂ ಹೆಚ್ಚಾಗುತ್ತದೆ ಎಂದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಎಲ್ಲರಿಗೂ same fee ಇರುವುದಿಲ್ಲ, ಬೇರೆ ಬೇರೆ slab ಇದೆ ಎಂದು ಹೇಳಿದಾಗ ಸದಸ್ಯರಾದ ಶ್ರೀ ಸಿ ಎಸ್ ನೀಲಕಂಠರವರು ಮಾತನಾಡಿ ಬ್ಯಾಂಕಿನ ಸಿಬ್ಬಂದಿ ರೂ.15000/– ಎಂದು ಮಾಹಿತಿ ಕೊಟ್ಟಿದ್ದಾರೆ ಎಂದು ಹೇಳಿದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಡೆಪಾಸಿಟ್ ಕೊಡಬೇಕು ಎಂದು ಕೇಳಿರುತ್ತಾರೆ ಎಂದಾಗ ಸದಸ್ಯರಾದ ಶ್ರೀ ಸಿ ಎಸ್ ನೀಲಕಂಠರವರು ಮಾತನಾಡಿ ಲಾಕರ್ ಡೆಪಾಸಿಟ್ ರೂ.15000/– fixed deposit ಬಗ್ಗೆ ಹೇಳಿದರು. ನಂತರ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಬೇರೆ ಬೇರೆ size ಲಾಕರ್‌ಗಳಿಗೆ ಬೇರೆ ಬೇರೆ ರೀತಿಯ slab ಇದೆ. ಡೆಪಾಸಿಟ್ ತೆಗೆದುಕೊಳ್ಳುವುದಕ್ಕೆ ಕಾರಣ ಅದರಲ್ಲಿ ಬರುವ ಬಡ್ಡಿಯನ್ನು locker rent ಗೆ adjust ಮಾಡಿಕೊಳ್ಳಲು ಅನುಕೂಲವಾಗುತ್ತದೆ ಎಂದಾಗ ಸದಸ್ಯರಾದ ಶ್ರೀ ಸಿ ಎಸ್ ನೀಲಕಂಠರವರು ಮಾತನಾಡಿ ಲಾಕರ್ ಖಾಲಿ ಇಟ್ಟುಕೊಂಡರೆ ಏನು ಪ್ರಯೋಜನ? ಎಂದು ಕೇಳಿ ಲಾಕರ್‌ಗಳ slab rate ಬಗ್ಗೆ ನಿಮಗೆ ಮಾಹಿತಿ ಇದೆ, ಆದರೆ ಬ್ಯಾಂಕಿನ ಸಿಬ್ಬಂದಿಯವರಿಗೆ ಮಾಹಿತಿ ಇಲ್ಲ, ಬ್ಯಾಂಕ್‌ಗೆ ಬಂದು ಕೇಳಿದರೆ ಒಂದು ಲಾಕರ್‌ಗೆ ರೂ.15000/- FD ಎಂದು ಹೇಳುತ್ತಾರೆ, locker rent ಗೆ ಏಕೆ deposit ತೆಗೆದುಕೊಳ್ಳುವುದು ಎನ್ನುವುದು ತಮ್ಮ ಪ್ರಶ್ನೆಯಾ? ಎಂದು ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಕೇಳಿದಾಗ ಸದಸ್ಯರಾದ ಶ್ರೀ ಸಿ ಎಸ್ ನೀಲಕಂಠರವರು ಹೌದು ಎಂದರು. ಅಧ್ಯಕ್ಷರಾದ ಶ್ರೀ ಹೆಚ್ ಎಂ

ದಿವ್ಯಾನಂದಮೂರ್ತಿರವರು ಮಾತನಾಡಿ ಒಬ್ಬ ಲಾಕರ್ ತೆಗೆದುಕೊಂಡು 3 ವರ್ಷ ಆದರೂ ಸಹ ಬಾಡಿಗೆ ಕಟ್ಟದಿದ್ದರೆ ಲಾಕರ್ breakopen ಮಾಡಬೇಕು ಅದನ್ನು ಮಾಡುವುದಕ್ಕೆ ರೂ.4000/–ಗಳು ಖರ್ಚಾಗುತ್ತದೆ ಮತ್ತು 3 ವರ್ಷದ ಲಾಕರ್ ಬಾಡಿಗೆ ವಸೂಲಿಗೆ ಪತ್ರವನ್ನು ಕಳುಹಿಸಿದರೆ customer identification ಇಲ್ಲವೆಂದು ವಾಪಸ್ಸು ಬರುತ್ತದೆ, ಅದಕ್ಕಾಗಿ deposit ನಿಂದ ಬರುವ ಬಡ್ಡಿಯಲ್ಲಿ locker rent ಗೆ ತೆಗೆದುಕೊಳ್ಳುತ್ತೇವೆ. ಈ ತರಹದ ಘಟನೆ ನಮ್ಮಲ್ಲಿ ಆಗಿರುವುದರಿಂದ ಮತ್ತು ಆರ್ ಬಿ ಐ ನಿಂದ ಲಾಕರ್ ಬಗ್ಗೆಯೆ ಒಂದು circular ಇದೆ. locker breakopen ಮಾಡುವುದಕ್ಕೆ ಖರ್ಚು ಹೆಚ್ಚಾಗುತ್ತದೆ. ಆದ್ದರಿಂದ ಆ ಮೊತ್ತವನ್ನು ಗ್ರಾಹಕರಿಂದ ವಸೂಲಿ ಮಾಡಿಕೊಳ್ಳಬೇಕು ಹಾಗಾಗಿ ಲಾಕರ್‌ಗೆ ಡೆಪಾಸಿಟ್ ಮಾಡಿದಾಗ ಅದಕ್ಕೆ ಬಡ್ಡಿ ಬರುತ್ತದೆ, ಆ ಬಡ್ಡಿಯನ್ನು rent ಗೆ ಎಷ್ಟು ಬೇಕಾಗುತ್ತದೆ ಅಷ್ಟು ತೆಗೆದುಕೊಳ್ಳುತ್ತೇವೆ. ಆದುದರಿಂದ ಡೆಪಾಸಿಟ್ ಕೇಳುತ್ತೇವೆ ಇದರಿಂದ ಬ್ಯಾಂಕಿಗೆ ಯಾವುದೇ ರೀತಿಯ ಆದಾಯವಿರುವುದಿಲ್ಲ. ಗ್ರಾಹಕರಿಗೂ ಸಹ ಅನುಕೂಲವಾಗುತ್ತದೆ, ಹೊರದೇಶದಲ್ಲಿ ಇದ್ದರೂ ಸಹ ಬಾಡಿಗೆಗೆ ತೊಂದರೆ ಆಗುವುದಿಲ್ಲ. ಆರ್‌ಬಿಐ ನಿಂದ ಹೊರಡಿಸಿರುವ 8 ಪುಟಗಳ circular ನಲ್ಲಿ instructions & procedure ಇದೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಸಿ ಎಸ್ ನೀಲಕಂಠರವರು ಮಾತನಾಡಿ 10 ಹಸುವಿನಲ್ಲಿ ಒಂದು ಹಸು ಒದೆಯುತ್ತದೆ, ಒಬ್ಬ ಮಾಡುತ್ತಾನೆ ಎಂದು ಇನ್ನು ಉಳಿದ 9 ಜನಕ್ಕೆ ಏಕೆ ಹಾಗೆ ಮಾಡುತ್ತೀರಾ? ರೂ.15000/-ಗಳನ್ನು Invest ಮಾಡಿದರೆ ನಮಗೆ ಆದ locker ತೆಗೆದುಕೊಳ್ಳಬಹುದು ಎಂದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಅದು safety ಇರುವುದಿಲ್ಲವೆಂದರು. ಆಗ ಸದಸ್ಯರಾದ ಶ್ರೀ ಸಿ ಎಸ್ ನೀಲಕಂಠರವರು ಮಾತನಾಡಿ ಹಿರಿಯ ನಿರ್ದೇಶಕರೊಬ್ಬರು ಈ ಸಭೆಗೆ ಗೈರು ಹಾಜರಾಗಿದ್ದಾರೆ ವಿವರಣೆ ನೀಡಿ ಎಂದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಈ ವಿಷಯವನ್ನು ಆಮೇಲೆ ಮಾತನಾಡೋಣ ಎಂದು ಮುಂದುವರೆಯುತ್ತ ಪುಟ ಸಂಖ್ಯೆ 10 ಎಂದಾಗ, ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಮಾತನಾಡಿ ಪುಟ ಸಂಖ್ಯೆ 9, 10 ಮತ್ತು 11 ರಲ್ಲಿ 5 ಕೇಸ್ ಇದ್ದು ಅದರಲ್ಲಿ ಕೆಲವೊಂದು ಷರಾ ಬರೆದಿದ್ದು ಆರ್ ಬಿ ಐ ಗೆ ವರದಿ ಸಲ್ಲಿಸಿರುವುದಾಗಿ ಹಾಗೂ ಸಾಲದ ಬಾಕಿಯ ಸಂಪೂರ್ಣ ಮೊತ್ತಕ್ಕೆ ಅವಕಾಶ ಕಲ್ಪಿಸಲಾಗಿದೆ, ಇದು provision ಮಾಡಿಕೊಂಡರೆ ಆಗುವುದಿಲ್ಲ, ಸದಸ್ಯರ ಪರವಾಗಿ ಕೇಳುತ್ತೇನೆ ಆ ಸಾಲಗಳನ್ನು ವಸೂಲಿ ಮಾಡಲೇ ಬೇಕು, Secured loan ಕೊಟ್ಟಿರುವುದು, ಯಾವುದೇ ಕಾರಣಕ್ಕೂ ರೈಟ್ ಆಫ್ ಮಾಡುವುದಕ್ಕೆ ಬರುವುದಿಲ್ಲ. ಯಾರು ಕಾಣದೆ ಇರುವವರಿಗೆ ವಾಹನ ಸಾಲ ಕೊಡುವುದಕ್ಕೆ ಯಾರು ಹೇಳಿದರು? ಜಾಮೀನುದಾರರನ್ನು ಹಾಕಿಸಬೇಕಾದರೆ ಗೊತ್ತಿರುವವರನ್ನು ಹಾಕಿಸಬೇಕು, ಇವನಿಗೆ ಅವನು surety, ಅವನಿಗೆ ಇವನು surety ಕಣ್ಣುಮುಚ್ಚಿಕೊಂಡು ಸಾಲ ಕೊಟ್ಟೀದ್ದೀರ ಅದು fake documents, property loan ಕೊಡುವುದಕ್ಕೆ ಜಾಮೀನುದಾರರನ್ನು ತೆಗೆದುಕೊಳ್ಳುತ್ತೀರಾ? ಎಂದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಜಾಮೀನುದಾರರನ್ನು ಹಾಕಿಸಿಕೊಂಡಿರುತ್ತೇವೆ, ಅವರನ್ನು ಸಹ enquiry ಮಾಡಿದ್ದಾರೆ, ಸಾಲಗಾರರು ಮತ್ತು ಜಾಮೀನುದಾರರ ವಿರುದ್ದ ಬ್ಯಾಂಕಿನಿಂದ ವಂಚನೆ ಪ್ರಕರಣ ದಾಖಲಿಸಲಾಗಿದ್ದು ಎಫ್‌ಐಆರ್ ಆದೇಶದ ಮೇರೆಗೆ ಸಿಐಡಿ ಪೊಲೀಸ್ ಉನ್ನತಾಧಿಕಾರಿಯವರ ನೇತೃತ್ವದಲ್ಲಿ ಸದರಿ ಪ್ರಕರಣದ ತನಿಖೆಯು ಪ್ರಗತಿಯಲ್ಲಿದೆ. ಇದಲ್ಲದೆ ಸಾಲಗಾರರ ವಿರುದ್ದ ಬ್ಯಾಂಕಿನಿಂದ ದಾಖಲಿಸಲಾಗಿರುವ ಚೆಕ್ ಬೌನ್ಸ್ ಕೇಸಿನ ವಿಚಾರವಾಗಿ ನ್ಯಾಯಾಲಯದ ಆದೇಶವನ್ನು ನಿರೀಕ್ಷಿಸಲಾಗುತ್ತಿದೆ ಮತ್ತು ವಸೂಲಾತಿಗಾಗಿ ಸಾಲಗಾರರ ಇತರೆ ಆಸ್ತಿಯ ಪತ್ತೆಗಾಗಿ ಕ್ರಮ ಜಾರಿಯಲ್ಲಿದೆ. ಅವರಿಗೆ waive off ಮಾಡಿರುವುದಿಲ್ಲ ವಸೂಲಿ ಮಾಡುವುದಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ, fraud ಆಗಿದೆ ಎಂದು ಗೊತ್ತಾದ ತಕ್ಷಣ ಸಿಐಡಿ ಗೆ report ಮಾಡಿದ್ದೇವೆ. ಅವರು ಸಹ enquiry ಮಾಡುತ್ತಿದ್ದಾರೆ ಎಂದು ತಿಳಿಸಿದರು. ಮುಂದುವರೆದು ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಮಾತನಾಡಿ ಸಾಲ ಕೊಟ್ಟು ಹತ್ತಾರು ವರ್ಷ ಆಗಿದೆ, ಬೇರೆ ಆಸ್ತಿಯನ್ನು ಇನ್ನು ಹುಡುಕುತ್ತೀದ್ದೀರಾ? ಎಂದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಬೇರೆ ಆಸ್ತಿಯನ್ನು ಹುಡುಕುತ್ತಿರುವುದಾಗಿ ತಿಳಿಸಿ 10 ವರ್ಷದ ಹಿಂದೆ ಕೊಟ್ಟಿರುವುದಿಲ್ಲ, ಸಾಲವನ್ನು 2017 ರಲ್ಲಿ ಕೊಟ್ಟಿದ್ದು 2022 ರವರೆಗೆ ಸಾಲವನ್ನು Repayment ಮಾಡಿದ್ದಾರೆ, 2022 ರ ನಂತರ ಸಾಲದ ಹಣವನ್ನು ಪಾವತಿಸದೆ ಇದ್ದಾಗ fraud ಎಂದು ಗೊತ್ತಾಗಿದೆ ಎಂದು ಹೇಳಿದರು. ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಮಾತನಾಡಿ 2014 ರಲ್ಲಿ ಒಂದು, 2017 ರಲ್ಲಿ ಒಂದು ಬಂದಿದೆ, secured loan ಪೂರ ವಸೂಲಿ ಆಗಬೇಕು, ರೈಟ್ ಆಫ್ ಮಾಡುವ ಪ್ರಶ್ನೆ ಬರಬಾರದು, ಅದಕ್ಕೆ ವಿರೋಧವಿದೆ ಎಂದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಆಗಬಹುದು ಎಂದರು.

ನಂತರ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಪುಟ ಸಂಖ್ಯೆಗಳನ್ನು ಮುಂದುವರೆಸುತ್ತಿದ್ದಾಗ ಸದಸ್ಯರಾದ ಶ್ರೀ ಆರ್ ಸಿದ್ದಪ್ಪರವರು ಮಾತನಾಡಿ ಪುಟ ಸಂಖ್ಯೆ 9 ರಲ್ಲಿ ಕೆ ಆರ್ ಮೊಹಲ್ಲಾ ಶಾಖೆ, ಮೈಸೂರು ಖಾತೆ ಸಂಖ್ಯೆ 30303904953 ರ ಸಾಲಗಾರರಾದ ಶ್ರೀ ಹರೀಶ್ ಎಲ್ ಬಿ ಮತ್ತು ಜ್ಯೋತಿರವರು ದಿನಾಂಕ 16/05/2017 ರಂದು ರೂ.4,00,00,000/-ಗಳ ಆಸ್ತಿ ಅಡಮಾನ ಸಾಲವನ್ನು ಕಾಂಟ್ರಾಕ್ಟ್ ಕಾಮಗಾರಿಗಳನ್ನು ಪೂರ್ಣಗೊಳಿಸುವ ಉದ್ದೇಶಕ್ಕಾಗಿ ಪಡೆದಿದ್ದು, ಸಾಲ ಸರಿಯಾಗಿ ಮರುಪಾವತಿಸದೆ ಕಂತುಗಳು ಸುಸ್ತಿಯಾಗಿ ಸಾಲವು ನಿಷ್ಕ್ರಿಯ ಆಸ್ತಿಯಾಗಿ ಮಾರ್ಪಟ್ಟ ಕಾರಣ, ಅವರು ನೀಡಿದ್ದ ಚೆಕ್‌ಗಳು ನಗದಾಗದೆ ಹಲವಾರು ಬಾರಿ ವಾಪಸ್ಸಾಗಿದ್ದರಿಂದ ಮತ್ತು ಬ್ಯಾಂಕಿಗೆ ಈಡು ಮಾಡಿದ್ದ ಸ್ವತ್ತಿನ ಬಳಿ ಹೋದಾಗ ಅನೇಕ ಬಾರಿ ಸಾಲಗಾರರು ಲಭ್ಯವಿಲ್ಲದ ಕಾರಣ ಅನುಮಾನ ಮೂಡಿ, ಸ್ವತ್ತಿನ ಸರ್ಚ್ ರಿಪೋರ್ಟ್ ತೆಗೆಸಿ ನೋಡಿದಾಗ ಸ್ವತ್ತಿನ ದಾಖಲಾತಿಗಳು ನಕಲಿ ಎಂದು ತಿಳಿದು ಉದ್ದೇಶಪೂರ್ವಕವಾಗಿ ಬ್ಯಾಂಕಿಗೆ ವಂಚನೆ ಮಾಡಿದ್ದಾರೆಂದು ತಿಳಿದು ಬಂದಿದೆ ಈ ಬಗ್ಗೆ ಕಾರ್ಯಕಾರಿ ಮಂಡಳಿ ಸಭೆಯ ಅನುಮತಿ ಮೇರೆಗೆ ಎಫ್ ಐ ಆರ್ ದಾಖಲಿಸಿ ದಿನಾಂಕ 17/10/2022 ರಂದು FMR-I ಮುಖಾಂತರ ಆರ್ ಬಿ ಐ ಗೆ ವರದಿ ಸಲ್ಲಿಸಿರುತ್ತಾರೆ ಹಾಗೂ ಸಾಲದ ಬಾಕಿಯ ಮೊತ್ತಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದು ಕೇಳಿದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ 2022 ರಿಂದ ಮರುಪಾವತಿ ನಿಲ್ಲಿಸಿದಾಗ ಹೋಗಿ ನೋಡಿದಾಗ ಆಸ್ತಿ ಇಲ್ಲ ಎಂದು ಗೊತ್ತಾದ ಮೇಲೆ

police complaint ಕೊಟ್ಟು enquiry ಮಾಡಿ ನಂತರ ಸಿಐಡಿ ಗೂ ಸಹ complaint ಕೊಟ್ಟಿದ್ದು, ತನಿಖೆ ನಡೆಯುತ್ತಿದ್ದು ತನಿಖೆಯ report ಬಂದ ಮೇಲೆ ಅದನ್ನು ಜಾರಿ ಮಾಡುತ್ತೇವೆ ಎಂದು ಹೇಳಿದರು. ಅದಕ್ಕೆ ಸದಸ್ಯರಾದ ಶ್ರೀ ಆರ್ ಸಿದ್ದಪ್ಪರವರು ಮಾತನಾಡಿ ಯಾರು ಸಾಲ ಕೊಟ್ಟಿರುವುದು? ಹೇಗೆ ಸಾಲ ಕೊಟ್ಟಿರುವುದು ಎಂದು ಕೇಳಿದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಅದು legal opinion ನಲ್ಲಿ ಸರಿಯಾಗಿದೆ ಎಂದು ಬಂದ ಮೇಲೆ ಸಾಲವನ್ನು ಕೊಟ್ಟಿರುವುದು ಎಂದು ತಿಳಿಸಿದರು. ಸದಸ್ಯರಾದ ಶ್ರೀ ಆರ್ ಸಿದ್ದಪ್ಪರವರು ಮಾತನಾಡಿ ಸಂಬಂಧಿತ ವಕೀಲರ ಮೇಲೆ ಹಾಗೂ ಆಡಳಿತ ಮಂಡಳಿಗೆ ಮೇಲೆ ಏಕೆ ಜವಾಬ್ದಾರಿಯನ್ನು fix ಮಾಡಲಿಲ್ಲ? ಚೆಕ್ ಬೌನ್ಸ್ ಆದ ಮೇಲೆ ಆ ಚೆಕ್ ಬೌನ್ಸ್ ಕೇಸನ್ನು ಕೋರ್ಟ್‌ಗೆ ಹಾಕಬೇಕಾಗಿತ್ತು ಎಂದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ case ಹಾಕಿದ್ದೇವೆ ಎಂದಾಗ ಸದಸ್ಯರಾದ ಶ್ರೀ ಆರ್ ಸಿದ್ದಪ್ಪರವರು ಮಾತನಾಡಿ, ಕೇಸ್ ಹಾಕಿದ್ದೀರಾ ಸರಿ, ಈ ವಿಚಾರವಾಗಿ ಸಂಬಂಧಿತ ಅಧಿಕಾರಿಯ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಾ? COD ಕೊಟ್ಟಿದ್ದೀರಾ? ಇನ್ನು 10 ವರ್ಷವಾದರೂ ಸಹ enquiry ಮಾಡುತ್ತಿರುತ್ತಾರೆ ನಂತರ ಎಲ್ಲರೂ ಮರೆಯುತ್ತಾರೆ ಎಂದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಬೇರೆ route ಇಲ್ಲ ಎಂದಾಗ ಸದಸ್ಯರಾದ ಶ್ರೀ ಆರ್ ಸಿದ್ದಪ್ಪರವರು ಮಾತನಾಡಿ ಈ ಸಾಲವನ್ನು ಶಿಫಾರಸ್ಸು ಮಾಡಿದ ಅಧಿಕಾರಿಯವರಿಗೆ ನಮ್ಮ ಬ್ಯಾಂಕಿನ ಆಡಳಿತ ಮಂಡಳಿಯವರು, ಏನು ಕ್ರಮ ತೆಗೆದುಕೊಂಡಿದ್ದೀರಾ ಎಂದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಈ ಕೇಸ್ ಬಗ್ಗೆ ಮೈಸೂರಿನಲ್ಲಿ fraud ಆಗಿರುವುದು ಖಚಿತವಾದ ಮೇಲೆ police complaint ಕೊಟ್ಟಿದ್ದೇವೆ, ಪೋಲಿಸಿನವರು ಅವರನ್ನು ಹುಡುಕಿಕೊಂಡು ಬಂದು ಕೇಸ್ lodge ಮಾಡಿ enquiry ಮಾಡುತ್ತಿದ್ದು, ಆ ಅವಧಿಯಲ್ಲಿ ವಸೂಲಿ ಕ್ರಮಮಾಡಿ ರೂ.50 ಲಕ್ಷದ 3 ಚೆಕ್ ತಂದಿದ್ದೇವೆ, ಆ Cheque dishonor ಆದ ಮೇಲೆ ಆ ಫೈಲ್ ಸಿ.ಓ.ಡಿ ಗೆ refer ಆಯಿತು, ಸಿ.ಓ.ಡಿರವರು ನಮ್ಮನ್ನೆಲ್ಲ ಕರೆಸಿ ತನಿಖೆ ಮಾಡಿ ಯಾವ ರೀತಿಯಲ್ಲಿ fraud ಆಯಿತು ಎಂದು ತನಿಖೆ ಮಾಡಿ ಆದ ಮೇಲೆ ಸಾಲಗಾರನನ್ನು ಜೈಲಿಗೆ ಹಾಕಿದ್ದರು, ಒಂದು ವಾರ ಜೈಲಿನಲ್ಲಿ ಇದ್ದು ಜಾಮೀನಿನ ಮೇಲೆ ಹೊರ ಬಂದರು. ಇವತ್ತು ಸಹ Cheque dishonour ಕೇಸನ್ನು ಕೋರ್ಟ್‌ನಲ್ಲಿ ಹಾಕಿದ್ದೇವೆ. ಕೇಸ್ ನಡೆಯುತ್ತಿದೆ, ಕೋರ್ಟ್‌ಗೆ ಹಾಜರಾಗಿ ಹಣ ಕೊಡುತ್ತೇನೆ ಎಂದು ಹೇಳುತ್ತಿದ್ದಾನೆ ಎಂದು ತಿಳಿಸಿದರು. ಸದಸ್ಯರಾದ ಶ್ರೀ ಆರ್ ಸಿದ್ದಪ್ಪರವರು ಮಾತನಾಡಿ ಮೊದಲು ಸಾಲ ಕೊಟ್ಟಿರುವವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಾ? ಎಂದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಎಲ್ಲಾರನ್ನು ಕರೆದು enquiry ಮಾಡಿದ್ದಾರೆ ಎಂದಾಗ ಸದಸ್ಯರಾದ ಶ್ರೀ ಆರ್ ಸಿದ್ದಪ್ಪರವರು ಮಾತನಾಡಿ ಪೊಲೀಸಿನವರು ತನಿಖೆ ಮಾಡುವುದಲ್ಲ, ಸಾಲವನ್ನು ನೀಡುವುದಕ್ಕೆ ಶಿಫಾರಸ್ಸು ಮಾಡಿದ Board of Directors ಯಾರು? ಯಾವ Manager ಸಾಲವನ್ನು ಕೊಟ್ಟಿರುವುದು? ನೀವು ಕೊಟ್ಟಿರುವುದು ಎಂದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಹೌದು, ನಾವೇ ಕೊಟ್ಟಿರುವುದು ಎಂದು ಹೇಳಿ ನೀವು ಪ್ರಶ್ನೆಯನ್ನು ಕೇಳಿ ಯಾರೋ ಹೇಳಿದರು ಎಂದು ಕೇಳಬೇಡಿ ಎಂದಾಗ ಸದಸ್ಯರಾದ ಶ್ರೀ ಆರ್ ಸಿದ್ದಪ್ಪರವರು ಮಾತನಾಡಿ ಲೆಕ್ಕಪರಿಶೋಧನಾ ವರದಿಯನ್ನು ಇನ್ನು ಮುಂಚಿತವಾಗಿ ನೀಡಬೇಕು, ಈ ಒಂದು ಬ್ಯಾಂಕಿನ ಮೇಲೆ ಕೆಟ್ಟ ಹೆಸರು ಬರುತ್ತಿದೆ ದಯಮಾಡಿ ಅದಕ್ಕೆ ಅವಕಾಶ ಬರದ ಹಾಗೆ ನೋಡಿಕೊಳ್ಳಿ ಮತ್ತು ಸಾಲವನ್ನು ಯಾರು ಮಂಜೂರು ಮಾಡಿದವರು? ಅವರ ವಿರುದ್ಧ ಏನು ಕ್ರಮ ತೆಗೆದುಕೊಂಡಿದ್ದೀರಾ? ಎಂದು ಮತ್ತೊಮ್ಮೆ ಕೇಳಿದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಪೋಲೀಸ್‌ನವರು ಯಾರು ಅಪರಾಧಿ ಎನ್ನುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದರು. ಮುಂದುವರೆದು ಸದಸ್ಯರಾದ ಶ್ರೀ ಆರ್ ಸಿದ್ದಪ್ಪರವರು ಮಾತನಾಡಿ ಪುನ: ಅದೇ ಪ್ರಶ್ನೆಯನ್ನು ಕೇಳಿದಾಗ ಆಡಳಿತ ಮಂಡಳಿಯವರಲ್ಲಿ ಶಿಫಾರಸ್ಸು ಮಾಡಿದ ನಿರ್ದೇಶಕರು ಯಾರು? ಸಿಬ್ಬಂದಿ ಯಾರು? ಏನು action ತೆಗೆದುಕೊಂಡಿದ್ದೀರಾ ಅದನ್ನು ಹೇಳಿ ಎಂದು ಕೇಳಿದರು. ಅದಕ್ಕೆ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಈಗಾಗಲೇ ಹೇಳಿರುವುದನ್ನು ಕೇಳಿಸಿಕೊಂಡಿಲ್ಲವೇ? ಎಂದರು ಮುಂದುವರೆದು ಸದಸ್ಯರಾದ ಶ್ರೀ ಆರ್ ಸಿದ್ದಪ್ಪರವರು ಮಾತನಾಡಿ ನೀವು ಹೇಳಿರುವುದನ್ನು ಕೇಳಿಸಿಕೊಂಡಿದ್ದೇನೆ, ಅದಕ್ಕೆ ಉತ್ತರವನ್ನು ಹೇಳಿ ಎಂದರು. ಆಗಸ್ಟ್ 5 ರಂದು ಶಿರಾಗೇಟ್‌ನಲ್ಲಿ IDSMT ಸರ್ಕಾರಿ ಜಾಗಕ್ಕೆ ರೂ.4,00,00,000/- ಸಾಲ ಕೊಟ್ಟಿದ್ದೀರಾ ಎಂದು ಮೇಸೇಜ್ ಬಂದಿದೆ, ಇದು ನಿಜವಾ ಅಥವಾ ಸುಳ್ಳ ಹೇಳಿ ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಇದು overall ಆಗಿ ಒಬ್ಬ ಮ್ಯಾನೇಜರ್, ಇನ್ನೊಬ್ಬ director ಅಥವಾ ಯಾರೋ clerk ತಪ್ಪು ಮಾಡಿದ್ದಾರೆ ಎಂದು ಅಲ್ಲ. valuation report ನ ಆಧಾರದ ಮೇಲೆ, legal advisor ನೀಡಿರುವ legal ರಿಪೋರ್ಟ್ ಸಂಪೂರ್ಣವಾಗಿ ವಿವೇಚನೆಗೆ ಸರಿಯಾಗಿದೆ ಅನ್ನಿಸಿದ ಮೇಲೆ ಸಾಲವನ್ನು ನೀಡಲಾಗಿದೆ ಎಂದಾಗ ತಕ್ಷಣವೇ ಸದಸ್ಯರಾದ ಶ್ರೀ ಆರ್ ಸಿದ್ದಪ್ಪನವರು ಕತೆಯನ್ನು ಹೇಳಬೇಡಿ ನೀವು ಫೋನ್ ಇಟ್ಟುಕೊಂಡು ಮನಸ್ಸಿಗೆ ಬಂದ ಹಾಗೆ ಮಾತನಾಡ ಬೇಡಿ ಎಂದರು. ಅದಕ್ಕೆ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಏನು ಹೇಳಿ ಎಂದಾಗ ಮತ್ತೊಮ್ಮೆ ಸದಸ್ಯರಾದ ಶ್ರೀ ಆರ್ ಸಿದ್ದಪ್ಪ ನವರು ಮನಸ್ಸಿಗೆ ಬಂದ ಹಾಗೆ ಮಾತನಾಡ ಬೇಡಿ ಎಂದು ಹೇಳಿದಾಗ ಅದಕ್ಕೆ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ನಾವು ಇರುವುದನ್ನೇ ಹೇಳುತ್ತಿರುವುದು, ಮನಸ್ಸಿಗೆ ಬಂದ ಹಾಗೆ ಮಾತನಾಡಿಲ್ಲ ಎಂದು ಹೇಳಿದರು. ನಂತರ ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್‌ರವರು ಮಾತನಾಡಿ ಪ್ರಶ್ನೆಯನ್ನು ಕೇಳುತ್ತಿದ್ದು ತಾಳ್ಮೆಯಿಂದ ಉತ್ತರವನ್ನು ನೀಡುತ್ತಿದ್ದಾರೆ ಎಂದು ಹೇಳಿದರು.

ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಸಭೆಯು ಚೆನ್ನಾಗಿ ನಡೆಯುತ್ತಿದ್ದು, ನಡೆಯಲು ಅನುಕೂಲ ಮಾಡಿಕೊಡಿ ಎಂದಾಗ ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್‌ರವರು ಮಾತನಾಡಿ ಆಡಳಿತ ಮಂಡಳಿಯಲ್ಲಿ ಕೇಳಿಕೊಳ್ಳುವುದೇನೆಂದರೆ ಅದು ತನಿಖಾ ಹಂತದಲ್ಲಿದ್ದು, ತನಿಖಾ ಮುಗಿದ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು. ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ದಯಮಾಡಿ ಸಭೆಗೆ ಗೌರವವಾಗಿ ನಡೆದುಕೊಳ್ಳಬೇಕೆಂದು ಸದಸ್ಯರಲ್ಲಿ ವಿನಂತಿಸಿದರು. ನಂತರ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ದಯವಿಟ್ಟು ಸದಸ್ಯರು ಕುಳಿತುಕೊಳ್ಳಬೇಕು ಕಾನೂನು ಪ್ರಕಾರ ಕ್ರಮವನ್ನು

ಜರುಗಿಸಲಾಗಿದೆ ಎಂದು ಹೇಳಿ, ಪುಟ ಸಂಖ್ಯೆಗಳನ್ನು ಮುಂದುವರೆಸುತ್ತಿರುವಾಗ ಸಭೆಯಲ್ಲಿ ಗೊಂದಲದ ವಾತಾವರಣ ಸೃಷ್ಟಿಯಾಯಿತು.

ನಂತರ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಪುಟ ಸಂಖ್ಯೆಗಳನ್ನು ಮುಂದುವರೆಸುತ್ತಿದ್ದಾಗ ಸದಸ್ಯರಾದ ಶ್ರೀ ಜಿನ್ನಪ್ಪ ಹೊಸಮನಿಯವರು ಮಾತನಾಡಿ ಪುಟ ಸಂಖ್ಯೆ 9 ಮತ್ತು 10 ರಲ್ಲಿ Bad debts provision ತೋರಿಸಿದ್ದು ಅವಧಿ ನಂತರ Administrative at the point of giving loan who has contact how made action putting ಕೇಸ್ ಆಗಿದ್ದು ಮುಂದೆ procedure ಪ್ರಕಾರ ಆಗುತ್ತದೆ, ಆ procedure ಪ್ರಕಾರ ಕ್ರಮ ತೆಗೆದುಕೊಳ್ಳುತ್ತೀರಾ? ಎಂದು ಕೇಳಿದಾಗ ಸಭೆಯಲ್ಲಿದ್ದ ಸದಸ್ಯರುಗಳಲ್ಲಿ ಗದ್ದಲ ಶುರುವಾಗ ತೊಡಗಿತು. ನಂತರ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಪುಟ ಸಂಖ್ಯೆಗಳನ್ನು ಮುಂದುವರೆಸುತ್ತಿದ್ದಾಗ ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್‌ರವರು ಮಾತನಾಡಿ ಕಾರ್ಯಕಾರಿ ಮಂಡಳಿಯವರು honorary ಕೆಲಸ ಮಾಡುವುದಕ್ಕೆ ಕುಳಿತುಕೊಂಡಿರುವುದು ಯಾರು ಸಂಬಳ ತೆಗೆದುಕೊಂಡು ಸುಮ್ಮನೆ ಕುಳಿತುಕೊಂಡಿರುವುದಿಲ್ಲ, ತನಿಖಾ ಹಂತದಲ್ಲಿದೆ, ತನಿಖೆ prove ಆದ ಮೇಲೆ ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕೋ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಹೇಳಿದರು.

ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಮುಂದುವರೆದು ಪುಟ ಸಂಖ್ಯೆ 22 ಎಂದು ಹೇಳುತ್ತಿದ್ದಾಗ ಸದಸ್ಯರಾದ ಜಿನ್ನಪ್ಪ ಹೊಸಮನಿಯವರು ಮಾತನಾಡಿ ಇದು ಈಗಾಗಲೇ ಕೇಸ್ ಆಗಿದೆ ರಿಪೋರ್ಟ್ ಬರಬೇಕು ಅದರ ಪ್ರಕಾರ action ಆಗುತ್ತದೆ, ಆದರೆ ಅವರು ಹೇಳುತ್ತಿರುವುದು ಆ position ನಲ್ಲಿ ಕ್ರಮ ತೆಗೆದುಕೊಳ್ಳಬೇಕಿತ್ತು ಅವರು ಕೇಳಿರುವ ಪ್ರಶ್ನೆ ಸರಿ ಇದೆ, ಇನ್ನು ಮುಂದಾದರೂ ಇಂತಹ ಕೇಸ್‌ನಲ್ಲಿ preliminary ಆಗಿ ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸಬೇಕು ಎಂದು ಹೇಳಿದರು. ಅದಕ್ಕೆ ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್‌ರವರು ಮಾತನಾಡಿ ಇದು ತನಿಖಾ ಹಂತದಲ್ಲಿದೆ ತನಿಖೆ ಹಂತ ಮುಗಿದ ಮೇಲೆ ಯಾರೆಂದು prove ಆದ ಮೇಲೆ ನೀವು ಹೇಳಿದ ಹಾಗೆ ಕ್ರಮ ಜರುಗಿಸುತ್ತಾರೆ ಎಂದು ಹೇಳಿದರು. ನಂತರ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಇದರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದು ಹೇಳಿದಾಗ ನಂತರ ಸದಸ್ಯರಾದ ಶ್ರೀ ಪಿ ಸದಾಶಿವಯ್ಯ ನವರು ಮಾತನಾಡಿ ಈ ವಿಚಾರವಾಗಿ ಅವತ್ತಿನಿಂದಲೇ ಇದರ ಬಗ್ಗೆ ಪರಿಶೀಲನೆಗೆ ಕೊಟ್ಟಿದ್ದೀರಾ? ಆಮೇಲೆ Recovery ಆಗಿದೆ. ಆನಂತರ Fraud ಎಂದು ಗೊತ್ತಾಯಿತು, ಕಾನೂನು ಕ್ರಮ ಜರುಗಿಸಿದ್ದೀರಾ? Overall ಆಗಿ ಕಾನೂನು ಕ್ರಮ ಏನು ಹೇಳುತ್ತದೆಯೋ ಅದರಲ್ಲಿ ಯಾರೇ ತಪ್ಪು ಮಾಡಿದ್ದರು ಕಾನೂನು ತನಿಖೆಗೆ ಬರುತ್ತದೆ ಎಂದು ಹೇಳಿದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಇದೆಲ್ಲಾ ಪೊಲೀಸ್ ತನಿಖೆಯಲ್ಲಿ ಬರುತ್ತದೆ ಎಂದು ಹೇಳಿದಾಗ ಸಭೆಯಲ್ಲಿ ಗೊಂದಲದ ವಾತಾವರಣ ಸೃಷ್ಟಿಯಾಯಿತು. ಮುಂದುವರೆದು ಸದಸ್ಯರಾದ ಶ್ರೀ ಜಿ ಎಸ್ ಬಸವರಾಜುರವರು ಮಾತನಾಡಿ ಮಾನ್ಯ ಸದಸ್ಯರು ಏನು ಪ್ರಶ್ನೆ ಮಾಡುತ್ತಿದ್ದಾರೆ ಅಥವಾ ಏನು ಕೇಳುತ್ತೀದ್ದಾರೇ ಅದು ಕಾನೂನು ಬದ್ಧವಾಗಿದೆ ಎಂದು ಹೇಳಿದಾಗ ನಿರ್ದೇಶಕರಾದ ಶ್ರೀ ಟಿ ಎಸ್ ರೇವಂತ್ ಮಾತನಾಡಿ ಕಾನೂನು ಬದ್ಧವಾಗಿದೆ, ಮಾತನಾಡುವ ಮಧ್ಯೆ ಸದಸ್ಯರಾದ ಶ್ರೀ ಕೆ ಎಸ್ ದಯಾನಂದರವರು ಮಾತನಾಡಲು ಬಂದಾಗ ಸದಸ್ಯರಾದ ಶ್ರೀ ಜಿ ಎಸ್ ಬಸವರಾಜುರವರು ಒಂದು ನಿಮಿಷ ನಾವು ಮಾತಾನಾಡುವುದಕ್ಕೆ ಮುಂಚೆ ಮಾತಾನಾಡಬಾರದು ಎಂದರು. ಆಗ ನಿರ್ದೇಶಕರಾದ ಶ್ರೀ ಟಿ ಎಸ್ ರೇವಂತ್‌ರವರು ಮಾತನಾಡಿ ಶ್ರೀ ಕೆ ಎಸ್ ದಯಾನಂದರವರೇ ಕುಳಿತುಕೊಳ್ಳಿ, ಮಧ್ಯದಲ್ಲಿ ಮಾತನಾಡಲು ಬರಬೇಡಿ, ಶ್ರೀ ಜಿ ಎಸ್ ಬಸವರಾಜ್ ರವರೇ ಪ್ರಶ್ನೆಯನ್ನು ಪ್ರಶ್ನೆ ರೀತಿಯಲ್ಲಿ ಕೇಳಬೇಕು, ಅದನ್ನು ಬಿಟ್ಟು ನಿಮ್ಮ ಇಷ್ಟದಂತೆ ಮಾತನಾಡಬೇಡಿ ದಯವಿಟ್ಟು ಕುಳಿತುಕೊಳ್ಳಿ ಎಂದಾಗ, ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ನಿಮ್ಮ ಪ್ರಶ್ನೆ ಬಂದಾಗ ಉತ್ತರ ಹೇಳುವುದು ಎಂದು ಸದಸ್ಯರಾದ ಶ್ರೀ ಜಿ ಎಸ್ ಬಸವರಾಜು ರವರಿಗೆ ಹೇಳಿದರು. ನಂತರ ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್‌ರವರು ಮಾತನಾಡಿ ಮೊದಲು ಬೇರೆಯವರಿಗೆ ಚಾನ್ಸ್ ಕೊಡುವುದನ್ನು ಕಲಿತುಕೊಳ್ಳಿ, ಬ್ಯಾಂಕ್ ಇರುವುದು ಮೂರು ನಾಲ್ಕು ಜನಗಳಿಗೋಸ್ಕರ ಅಲ್ಲ ಎಂದು ಹೇಳಿದರು. ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಆ ಸದಸ್ಯರು ಕೇಳಿರುವುದಕ್ಕೆ ಪೊಲೀಸ್ ಡಿಪಾರ್ಟ್‌ಮೆಂಟ್ ನಲ್ಲಿ ತನಿಖೆ ನಡೆಯುತ್ತಿದ್ದು, ಪೊಲೀಸಿನವರು ತನಿಖೆ ನಡೆಸಿದ ನಂತರ ಯಾರು ತಪ್ಪಿತಸ್ಥರು ಎಂದು ತೀರ್ಮಾನವಾಗುತ್ತದೆ ಅವರ ಮೇಲೆ action ತೆಗೆದುಕೊಳ್ಳುತ್ತೇವೆ. ದಯವಿಟ್ಟು ಕುಳಿತುಕೊಳ್ಳಿ ಎಂದರು.

ನಂತರ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಪುಟ ಸಂಖ್ಯೆಯನ್ನು ಮುಂದುವರೆಸುತ್ತಾ ಹೋದಾಗ ಸದಸ್ಯರಾದ ಶ್ರೀ ಜಿ ಎಸ್ ಬಸವರಾಜುರವರು ಮಾತನಾಡಿ ಮಾನ್ಯ ಸದಸ್ಯರು ಏನು ಪ್ರಶ್ನೆಯನ್ನು ಕೇಳಿದ್ದಾರೆ, ಅದು ಸಮಂಜಸವಾದ ಪ್ರಶ್ನೆ ಎಂದು ಹೇಳಿದಾಗ ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್‌ರವರು ಮಾತನಾಡಿ ಪ್ರಶ್ನೆಯನ್ನು ಪ್ರಶ್ನೆ ತರ ಕೇಳಿ ಎಂದಾಗ ಶ್ರೀ ಜಿ ಎಸ್ ಬಸವರಾಜುರವರು ಮಾತನಾಡಿ ನಾನು ಮಾತನಾಡುವವರೆಗೂ ಮಾತನಾಡಬೇಡಿ, ಸದಸ್ಯರು ಏನು ಹೇಳಿದ್ದಾರೆ ಎಂದರೆ responsibility fix ಮಾಡಿ, ಈಗಾಗಲೇ ಸೆಕ್ಷನ್ 64 ಆಡಿಟ್ ವರದಿಯಲ್ಲಿ ತನಿಖೆ ನಡೆದು ಸಂಪೂರ್ಣವಾಗಿ ಆಡಳಿತ ಮಂಡಳಿಯವರು ತಪ್ಪು ಮಾಡಿದ್ದಾರೆ ಎಂದು report ಇದೆ ಎಂದು ಹೇಳಿದರು. ಇದಕ್ಕೆ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಎಲ್ಲಿದೆ ಎಂದಾಗ, ಸದಸ್ಯರಾದ ಶ್ರೀ ಜಿ ಎಸ್ ಬಸವರಾಜುರವರು ಮಾತನಾಡಿ ಹೊಣೆಗಾರರಿಗೆ ಹೊಣೆಗಾರಿಕೆಯನ್ನು fix ಮಾಡಿದ್ದಾರೆ, ದಯವಿಟ್ಟು ನಾನು ಮಾತನಾಡುವವರೆಗೂ ಮಾತನಾಡಬೇಡಿ, ಸೆಕ್ಷನ್ 64 ಅಡಿಯಲ್ಲಿ ತಮ್ಮ ಮೇಲೆ ಚಾರ್ಜ್ ಮಾಡಿ ಎಂದು ರಿಪೋರ್ಟ್ ಇದೆ. ತಾವು ಏನು ಹೇಳಿದ್ದೀರ? ಸಾಲ ಕೊಡುವ ಮುಂಚೆ ಸರ್ಚ್ ರಿಪೋರ್ಟ್ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದು ಸರ್ಚ್ ರಿಪೋರ್ಟ್ ಯಾವಾಗ ತೆಗೆದುಕೊಳ್ಳಬೇಕು? ಸಾಲ ಕೊಟ್ಟ ನಂತರ ಫ್ರಾಡ್ ನಡೆದಿದೆ ಎಂದು ಗೊತ್ತಾದ ಮೇಲೆ ಸರ್ಚ್ ರಿಪೋರ್ಟ್ ತೆಗೆದುಕೊಳ್ಳಬೇಕಾ, ತಾವು ಸಾಲ ಕೊಡುವುದಕ್ಕೆ ಮುಂಚೆಯೇ ಸರ್ಚ್ ರಿಪೋರ್ಟ್ ತೆಗೆದುಕೊಂಡಿದ್ದರೆ ಈ ಲೋಪವೇ ಆಗುತ್ತಿರಲಿಲ್ಲ ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ

ಬಸವರಾಜುರವರೇ ತಾವೇ ಲೋಕಾಯುಕ್ತಕ್ಕೆ complaint ಮಾಡಿದ್ದೀರಾ, ಲೋಕಾಯುಕ್ತದವರು 64 ಆಡಿಟ್ ತನಿಖೆಗೆ ಕಳುಹಿಸಿದ್ದು, ನೀವು ಏನೇನು ಮಾಡಿದ್ದೀರಾ ಎಂದು ಸಭೆಗೂ ಗೊತ್ತಾಗಲಿ ಎಂದು ಹೇಳಿದಾಗ ಸದಸ್ಯರಾದ ಶ್ರೀ ಜಿ ಎಸ್ ಬಸವರಾಜು ರವರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಸಭೆಯಲ್ಲಿ ಗೊಂದಲದ ವಾತಾವರಣ ಸೃಷ್ಟಿಯಾಯಿತು. ನಂತರ ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್‌ರವರು ಮಾತನಾಡಿ ತನಿಖಾ ಹಂತದಲ್ಲಿದೆ, ತನಿಖೆ ನಡೆಯಲಿ ಎಂದಾಗ ಸದಸ್ಯರಾದ ಶ್ರೀ ಜಿ ಎಸ್ ಬಸವರಾಜುರವರು ಇದು ದೌರ್ಜನ್ಯ ಎಂದಾಗ ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್‌ರವರು ಮಾತನಾಡಿ ಯಾವುದು ದೌರ್ಜನ್ಯ, ನೀವು ದೌರ್ಜನ್ಯ ಮಾಡುತ್ತಿರುವುದು, ಹೊರಗಡೆನೂ ದೌರ್ಜನ್ಯ, ಒಳಗಡೆನೂ ದೌರ್ಜನ್ಯ ಎಂದು ಹೇಳಿದರು. ನಂತರ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಎಫ್ ಐ ಆರ್ ಏಕೆ ಮಾಡಿಸಿದ್ದೀರಾ? ಎಂದು ಸಭೆಗೆ ತಿಳಿಸಿ ಎಂದು ಹೇಳಿದರು, ಆಗ ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್ ರವರು ಮಾತನಾಡಿ ತನಿಖಾ ಹಂತದಲ್ಲಿ ಇರುವುದರಿಂದ ಯಾವುದೇ ಉತ್ತರ ಕೊಡುವ ಅಗತ್ಯವಿಲ್ಲವೆಂದು ಹೇಳಿದರು. ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಮಾನ್ಯ ಸದಸ್ಯರೆಲ್ಲರೂ ಸಮಾಧಾನವಾಗಿ ಕುಳಿತುಕೊಳ್ಳಬೇಕು ಎಂದು ಹೇಳಿದರು.

ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ 64 ಆಡಿಟ್ ನಡೆಯುತ್ತಿದೆ. ಅದಕ್ಕೆ ಪೂರಕವಾಗಿ ಎಲ್ಲ ದಾಖಲೆಗಳನ್ನು ಕೊಡುತ್ತಿದ್ದೇವೆ. ಸೆಕ್ಷನ್ 64 ಆಡಿಟ್ ನಡೆಯುವಾಗ DR ಮೇಲೆ ಸಹ FIR ಮಾಡಿಸಿದ್ದೀರಾ? ಎಲ್ಲರನ್ನೂ ಬೆದರಿಸುತ್ತೀರಾ? ಬೆದರಿಕೆ ಹಾಕಿ ಸೆಕ್ಷನ್ 64 ಆಡಿಟ್ ಮಾಡಿಸಿದ್ದೀರಾ? ನೀವು ಮಾಡಿರುವ ಕೆಲಸ ಈ ಸಭೆಗೂ ಗೊತ್ತಾಗಬೇಕು ಎಂದು ಹೇಳಿದರು.

ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್‌ರವರು ಮಾತನಾಡಿ ಸದಸ್ಯರು ಯಾರು ಗಲಾಟೆ ಮಾಡಬಾರದು ಎಂದು ಕೇಳಿ ಕೊಂಡರು. ನಂತರ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ದಯವಿಟ್ಟು ಸದಸ್ಯರು ಸಮಾಧಾನವಾಗಿ ಕುಳಿತುಕೊಳ್ಳಬೇಕು ಎಂದು ಕೇಳಿಕೊಂಡರು.

ನಂತರ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಈ ರೀತಿ ಕೇಳಬಾರದ ಪ್ರಶ್ನೆಯನ್ನು ಕೇಳಿ ನನ್ನ ಮೇಲೆ ಮಾರಣಾಂತಿಕ ಹಲ್ಲೆ ನಡೆಯುತ್ತಿದೆ ಎಂದು Complaint ಕೊಟ್ಟಿದ್ದಿರಾ? ಎಂದು ಕೇಳಿ, ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಪುಟ ಸಂಖ್ಯೆಯನ್ನು ಮುಂದುವರೆಸುತ್ತಿದ್ದಾಗ ಸದಸ್ಯರಾದ ಶ್ರೀ ಟಿ ಎಸ್ ರವಿಕುಮಾರ್‌ರವರು ಮಾತನಾಡಿ ಈಗ ಪ್ರಶ್ನೆಯನ್ನು ಕೇಳುತ್ತಿರುವವರಿಗೆ ಆಡಳಿತ ಮಂಡಲಿಯವರು ಅವಕಾಶಮಾಡಿಕೊಡಬೇಕು, ಅದು ಮಾಡಿದ್ದೀರೋ ಅಥವಾ ಮಾಡಿಲ್ಲವೋ ಎಂದು ಹೇಳಿ Close ಮಾಡಿ, ಪ್ರಶ್ನೆ ಕೇಳಿದಾಗ ಕ್ರಮ ಕೈಗೊಂಡಿದ್ದೀರಾ? ಕೈಗೊಂಡಿಲ್ಲವೋ ಮುಂದಕ್ಕೆ ಹೋದರೆ ಉತ್ತರ ಸಿಗುತ್ತದೆ ಎಂದು ತಿಳಿಸಿದರು. ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಅದನ್ನೇ ಹೇಳುತ್ತಿರುವುದು ಎಂದು ಹೇಳಿದರು. ನಂತರ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಸಭೆ ಸೂಸುತ್ರವಾಗಿ ನಡೆಯುತ್ತಿದೆ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ನೀಡುತ್ತಿದ್ದು ಅದನ್ನು ಸರಿಯಾಗಿ ಕೇಳುವ ತಾಳ್ಮೆಯು ಇರಬೇಕಲ್ಲವಾ? ಎಂದು ಪ್ರಶ್ನಿಸಿದರು. ನಂತರ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಎಲ್ಲಾ ಎನ್ ಪಿ ಎ ಖಾತೆಗಳು ಪುಸ್ತಕದಲ್ಲಿ ಇದೆ, ಅದರ ಪ್ರಕಾರ Action ತೆಗೆದುಕೊಳ್ಳುತ್ತೇವೆ ಸದಸ್ಯರು ಯೋಚನೆ ಮಾಡುವ ಅವಶ್ಯಕತೆ ಇಲ್ಲ ಎಂದು ತಿಳಿಸಿದರು. ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಮಾತನಾಡಿ ಒಂದು ನಿಮಿಷ ಎಂದು ಹೇಳಿದರು ನಂತರ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ನಂತರ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಅದನ್ನೆ ಹೇಳುತ್ತಿರುವುದು ಎಂದು ಹೇಳಿದರು. ನಂತರ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಸಭೆ ಸೂಸುತ್ರವಾಗಿ ನಡೆಯುತ್ತಿದೆ ಅವರು ಕೇಳಿದ ಪ್ರಶ್ನೆಗೆ ಉತ್ತರ ಕೊಡುತಿದ್ದು ಅದನ್ನು ಸರಿಯಾಗಿ ಕೇಳುವ ತಾಳ್ಮೆಯು ಇರಬೇಕಲ್ಲವಾ? ಎಂದು ಪ್ರಶ್ನಿಸಿದರು. ನಂತರ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಎಲ್ಲಾ NPA Account ಗಳು ಪುಸ್ತಕದಲ್ಲಿ ಇದೆ, ಅದರ ಪ್ರಕಾರ Action ತೆಗೆದುಕೊಳ್ಳುತ್ತೇವೆ ಸದಸ್ಯರು ಏನು ಯೋಚನೆ ಮಾಡುವ ಅವಶ್ಯಕತೆ ಇಲ್ಲ ಎಂದು ಹೇಳಿದರು. ನಂತರ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಮಾತನಾಡಿ ಒಂದು ನಿಮಿಷ ಎಂದು ಹೇಳಿದರು ನಂತರ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ತಾವು ಕೇಳಿರುವ ಪ್ರಶ್ನೆಗಳಿಗೆ ಸಂಪೂರ್ಣವಾಗಿ ಉತ್ತರವನ್ನು ಕೊಡುತ್ತೇವೆ, ನೀವು ಈಗಾಗಲೇ ಸಭೆಗೆ ಪ್ರಶ್ನೆ ಕೇಳಿರುವುದಕ್ಕೆ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಶ್ನೆಗಳು ಬರುತ್ತದೆ ಅದಕ್ಕೆ ಸಂಪೂರ್ಣವಾಗಿ ಉತ್ತರ ಕೊಡುವುದಾಗಿ ತಿಳಿಸಿದರು ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಮಾತನಾಡಿ ದಯಮಾಡಿ ಸದಸ್ಯರು ಒಬ್ಬರಿಗೊಬ್ಬರು ಮಾತನಾಡಬೇಡಿ, ಒಬ್ಬರು ಮಾತನಾಡಿದರೆ 4 ಜನ ಕೂಗುವುದು ಬೇಡ ಮತ್ತು ಕೈ ತೋರಿಸುವುದು ಬೇಡ, ಸಮಾಧಾನವಾಗಿ ಉತ್ತರ ಕೊಡಿ ಎಂದು ಹೇಳಿ, ನಮ್ಮ ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್‌ರವರು ಹೇಳಿದ್ದಾರೆ ತನಿಖೆ ನಡೆಯುತ್ತಿದೆ, ತಪ್ಪಿತಸ್ಥರಿಗೆ ಶಿಕ್ಷೆ ಆಗುತ್ತದೆ. ಆಗಿಲ್ಲವೆಂದರೆ ಜವಾಬ್ದಾರಿ ಇವರ ಮೇಲೆ ಬರುತ್ತದೆ. ಎಂದು ಹೇಳಿ ಒಪ್ಪಿಗೆ ಅನ್ನುವುದಾದರೆ ಮುಂದುವರೆಯಬಹುದು ಎಂದು ಹೇಳಿದರು. ಉಪಾಧ್ಯಕ್ಷರಾದ ಶ್ರೀ. ಸಿ ಆರ್ ನಟರಾಜ್‌ರವರು ಮಾತನಾಡಿ Police Enquiry ನಡೆಯುತ್ತಿದೆ report ಬರದೇ ಇದ್ದಾಗ ಏನು Decision ತೆಗೆದುಕೊಳ್ಳುತ್ತೀರಾ? ಎಂದಾಗ ತಕ್ಷಣ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಮಾತನಾಡಿ Police ರವರದು ವಾರಕ್ಕೊಂದು, ವರ್ಷಕ್ಕೊಂದು, ತಿಂಗಳಿಗೊಂದು ನಡೆಯುತ್ತದೆ ಅದು Depend upon the pressure, ಸ್ವತಃ ನಾವೇ ಹೋಗಿ Handle ಮಾಡಿದರೆ 1 ತಿಂಗಳಲ್ಲಿ ಮುಗಿಯುತ್ತದೆ ಇಲ್ಲ ಅಂದರೆ 1 ವರ್ಷ ಆಗುತ್ತದೆ, 5 ವರ್ಷನೂ ಆಗುತ್ತದೆ ಎಂದು ಹೇಳಿದರು. ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಅದು ನಮ್ಮ ಕೈಯಲ್ಲಿ ಇಲ್ಲವೆಂದು ಹೇಳಿದಾಗ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ತಾವು ಈಗ ಇಲ್ಲವೆಂದು ಹೇಳುವುದಕ್ಕೆ ಹೋಗಬೇಡಿ ಯಾಕೆಂದರೆ ತಾವೇ Complaint ಕೊಟ್ಟಿರುವುದು ಎಂದು ಹೇಳಿದರು. ನಂತರ ನಿರ್ದೇಶಕರಾದ ಶ್ರೀ ಬಲರಾಮ ಶೆಟ್ಟಿರವರು ಮಾತನಾಡಿ ಏನು ಆಗಿಲ್ಲ ತಾವು ಅಂದುಕೊಂಡ ಹಾಗೆ ಎಂದು ಹೇಳಿದಾಗ ಅದಕ್ಕೆ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು

ಮಾತನಾಡಿ ಏನಾಗಿಲ್ಲ, 10 ವರ್ಷದಿಂದ ಬಾಕಿ ಇದೆ ಏನಾಗಿಲ್ಲ ಅಂತ ಹೇಳುತ್ತಿದ್ದೀರಲ್ಲ ಎಂದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಅದನ್ನೇ ಹೇಳುತ್ತೀರುವುದು, ಎಲ್ಲ NPA Accounts ಗಳು Enquiry ಯಲ್ಲಿ ಇದೆ, ಅದರ Report ಬಂದ ಮೇಲೆ ಆ ಪ್ರಕಾರ Action ತೆಗೆದುಕೊಳ್ಳುತ್ತೇವೆಂದು ಹೇಳಿದರು, ನಂತರ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ತಾವು ಲಿಖಿತವಾಗಿ ಏನು ಪ್ರಶ್ನೆಗಳನ್ನು ಕೇಳಿದ್ದೀರಾ ಎಂದಾಗ ತಕ್ಷಣ ಸದಸ್ಯರಾದ ಶ್ರಿ ಕೆ ಜಿ ಮುನಿಗಂಗಪ್ಪನವರು ಮಾತನಾಡಿ Enquiry Process ನಲ್ಲಿ ಇದೆ ಅದನ್ನು ಮಾಡಿ, ಆದಷ್ಟು ಯಾವುದನ್ನು ರೈಟ್ ಆಫ್ ಮಾಡಬೇಡಿ, ವಸೂಲಿ ಮಾಡಿ ಎಂದು ಮನವಿ ಮಾಡಿದರು. ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಪ್ರಯತ್ನ ಮಾಡುವುದಾಗಿ ತಿಳಿಸಿದರು.

ಮತ್ತೆ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಮಾತನಾಡಿ ಯಾವ ಸದಸ್ಯರು ಗಟ್ಟಿಯಾಗಿ ಕೂಗಾಡಿ ಜಗಳವಾಡ ಬೇಡಿ, ಬ್ಯಾಂಕು ಮಾಡಿರುವ ತಪ್ಪನ್ನು ತಿದ್ದಿ ಸರಿಯಾಗಿ ನಡೆಸುವುದಕ್ಕೆ ಇಲ್ಲಿ ಸಭೆ ಸೇರಿದ್ದೇವೆ, ಅಷ್ಟಕ್ಕೆ ಮಾತ್ರ ಸೀಮಿತವಾಗಿ ಮಾತನಾಡಿ, ಯವುದೇ ಬೇರೆ ಉದ್ದೇಶ ಇಟ್ಟುಕೊಂಡು ಸುಮ್ಮನೆ ಮಾತನಾಡುವುದು ಅನಾವಶ್ಯಕವೆಂದು ತಿಳಿಸಿದರು.

ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಪುಟ ಸಂಖ್ಯೆಯನ್ನು 32,33 ಎಂದು ಮುಂದುವರೆಸುತ್ತಿದ್ದಾಗ ಸದಸ್ಯರಾದ ಶ್ರೀ.ಟಿ ಎಸ್ ರವಿಕುಮಾರ್‌ರವರು ಮಾತನಾಡಿ 20 ವರ್ಷದ ಜಿದ್ದು ಇಟ್ಟುಕೊಂಡು ಮಾತನಾಡುತ್ತಿದ್ದಾರೆ, ನಮ್ಮ ಹಿರಿಯ ವರ್ತಕರು ನಮ್ಮ ವರ್ತಕರಿಗೆ ಅನುಕೂಲವಾಗಲಿ ಎಂದು ಬ್ಯಾಂಕನ್ನು ಸ್ಥಾಪನೆ ಮಾಡಿರುವುದು, ಆದರೆ ಇಂದು ಎ ಶಾಸನವನ್ನು ಬಿ ಶಾಸನವನ್ನಾಗಿ ಮಾಡಿ ಬ್ಯಾಂಕ್ ಅನ್ನು ಕುಗ್ಗಿಸಬೇಕೆಂದು ಹೋರಾಟ ಮಾಡುತ್ತಿದ್ದಾರೆ. ಅದಕ್ಕೆ ನಾವುಗಳು ಅವಕಾಶವನ್ನು ಕೊಡುವುದಿಲ್ಲ, 20 ವರ್ಷದಿಂದ ಇದೇ ಜಿದ್ದು ಸಾಧಿಸುತ್ತಿದ್ದು, ಇಷ್ಟು ಮಾತನಾಡುತ್ತಿದ್ದಾರಲ್ಲ ಇವರಿಂದ ಬ್ಯಾಂಕಿಗೆ ಏನಾದರೂ ಅನುಕೂಲವಾಗಿದೆಯಾ? ಎಷ್ಟು ಕೋಟಿ ಸಾಲ ಕೊಡಿಸಿದ್ದಾರೆ, ಎಷ್ಟು ಕೋಟಿ Deposit ಮಾಡಿಸಿದ್ದಾರೆ. ಎಷ್ಟು ಕೋಟಿ ಸಾಲ ವಸೂಲಿ ಮಾಡಿಕೊಟ್ಟಿದ್ದಾರೆ, ಐದು ಪೈಸೆ ಅವರ ಕಡೆಯಿಂದ ಬ್ಯಾಂಕಿಗೆ ಏನೂ ಆದಾಯ ಇಲ್ಲ, 20 ವರ್ಷದಿಂದ ನಾವು GBM ಗೆ ಬರುತ್ತಿದ್ದೇವೆ, ಜಗಳ ಮಾಡಿ, ಮರ್ಯಾದೆ ಕಳೆಯುತ್ತಿದ್ದಾರೆ. FaceBook ಮತ್ತು Whatsapp ಗೆ ಹಾಕಿ ಬ್ಯಾಂಕಿನ ಮರ್ಯಾದೆಯನ್ನು ಕಳೆಯುತ್ತಿದ್ದಾರೆ ಎಂದು ಸಭೆಗೆ ತಿಳಿಸಿದರು.

ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಒಳ್ಳೆಯ ಪ್ರಶ್ನೆ ಕೇಳುತ್ತೀದ್ದಿರಾ ಅದಕ್ಕೆ ಉತ್ತರ ಕೊಡುವುದಕ್ಕೆ ಹೇಳಿ ಎಂದಾಗ ಸದಸ್ಯರಾದ ಶ್ರೀ. ಟಿ ಎಸ್ ರವಿಕುಮಾರ್ ಮಾತನಾಡಿ ದಯವಿಟ್ಟು ಅವರ ಸದಸ್ಯತ್ವವನ್ನು ತೆಗೆದುಕೊಳ್ಳಬೇಡಿ ಎಂದು ಸಭೆಗೆ ಹೇಳುತ್ತೇವೆ ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಸಾಲಗಾರರ ಹತ್ತಿರ ಹೋಗಿ ಸಾಲ ಕಟ್ಟಬೇಡಿ ಎಂದು ತಾಕೀತು ಮಾಡುತ್ತಾರೆ, ಎಂದು ಹೇಳಿದಾಗ ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್‌ರವರು ಮಾತನಾಡಿ ಇವರು ಹೊರಗಡೆ ನಿಂತುಕೊಂಡು ಮಗುವನ್ನು ಚಿವುಟುವುದು, ಒಳಗೆ ಬಂದು ತೊಟ್ಟಿಲು ತೂಗುವ ಕೆಲಸವನ್ನು ಮಾಡುತ್ತಿರುತ್ತಾರೆ, ಇದನ್ನು ಆವತ್ತಿನಿಂದಲೂ ಮಾಡುತ್ತಿರುವುದು, ಬ್ಯಾಂಕಿನಲ್ಲಿ ಯಾವುದೇ Deposit ಇಲ್ಲ, ಒಂದು ಸಾಲ ತೆಗೆದುಕೊಂಡಿರುವುದಿಲ್ಲ, ಒಂದು ಸಾಲ ಕೊಡಿಸಿರುವುದಿಲ್ಲ, ಒಂದು ಸಾಲ Recovery ಮಾಡಿಸಿ ಕೊಟ್ಟಿರುವುದಿಲ್ಲ, ಇಲ್ಲಿ ಬಂದು ಬೊಬ್ಬೆ ಹೊಡೆಯುತ್ತಾರೆ ನಮ್ಮಲ್ಲಿ ಯಾರು ಸಾಲ ತೆಗೆದುಕೊಂಡು ಕಟ್ಟುವುದಕ್ಕೆ ಆಗದೇ Defaulter ಇದ್ದಾರೆ ಅಂತಹವರ ಜೊತೆಗೆ RCS ಗೆ ಹೋಗುವುದು DR ಹತ್ತಿರ ಹೋಗುವುದು, ಅವರ ತಲೆಯನ್ನು ಕೆಡಿಸಿ ಬ್ಯಾಂಕಿನ ವಿರುದ್ಧ ಹೇಳಿಕೆ ಕೊಡಿಸುವುದು, ಈ ಕೆಲಸ ಬಿಟ್ಟರೆ ಇವತ್ತಿನವರೆಗೂ ಬ್ಯಾಂಕಿಗೆ ಒಂದು ರೂಪಾಯಿಯ ಉಪಯೋಗವಿಲ್ಲ. ಇಂತಹವರಿಗೆ ತಾವು ಯಾರು ತಲೆ ಕೆಡಿಸಿಕೊಳ್ಳಬೇಡಿ ಜಿ ಎಸ್ ಬಸವರಾಜುರವರು ಆಡಳಿತ ಮಂಡಳಿಗೆ ಮತ್ತು ಸಭೆಗೆ ಗೌರವ ಕೊಡಬೇಕು, ಇವರಿಗೆಲ್ಲ ಕೈ ತೋರಿಸಿಕೊಂಡು ಮಾತನಾಡುವುದು, ಇವರೆಲ್ಲ Honorary ಕೆಲಸ ಮಾಡುತ್ತಿರುವುದು, ಇವರು ಯಾರು ಸಹ ಸಂಬಳವನ್ನು ತೆಗೆದುಕೊಂಡು ಇಲ್ಲಿ ದುಡಿಯುವುದಕ್ಕೆ ಬಂದಿಲ್ಲ, ನಿಮ್ಮ ಆರೋಪವನ್ನು ಜನ ಒಪ್ಪಿಲ್ಲ, ನಿಮ್ಮಿಂದ ಯಾವ ಅನೂಕೂಲನೂ ಬ್ಯಾಂಕಿಗೆ ಇಲ್ಲ ಮುಂದಕ್ಕೂ ಇರುವುದಿಲ್ಲ, ಇದನ್ನು ಗಮನದಲ್ಲಿ ಇಟ್ಟುಕೊಂಡು ಆಡಳಿತ ಮಂಡಳಿಯವರು ಒಳ್ಳೆಯ ಕೆಲಸ ಮಾಡುತ್ತೀದ್ದಿರಾ, ಒಳ್ಳೆಯ ಸಾಲ ಮತ್ತು ಸೌಲಭ್ಯವನ್ನು ಕೊಡುತ್ತಿದ್ದಿರಾ, ಎಲ್ಲಾ ಸದಸ್ಯರ ಬೆಂಬಲ ಇದೆ ಎಂದು ಹೇಳಲು ಇಷ್ಟ ಪಡುತ್ತೇನೆ ಎಂದು ಸಭೆಗೆ ತಿಳಿಸಿದರು.

ಸದಸ್ಯರಾದ ಶ್ರೀ ಟಿ ಎಸ್ ರವಿಕುಮಾರ್ ಮಾತನಾಡಿ ಸುಸ್ತಿದಾರರ ಮನೆ ಬಾಗಿಲಿಗೆ ಹೋಗಿ ದುಡ್ಡು ಕಟ್ಟಬೇಡಿ ಎಂದು ಹೇಳಿ ಕೊಡುತ್ತಾರೆ. ಅವರು ಎಷ್ಟು ಬ್ಯಾಂಕಿಗೆ ದ್ರೋಹ ಬಗಿಯುತ್ತೀದ್ದಾರೆ, ಸಭೆಯಲ್ಲಿ ಇದ್ದುಕೊಂಡು ಏಕೆ ವಸೂಲಿ ಮಾಡಿರುವುದಿಲ್ಲ ಎಂದು ಪ್ರಶ್ನೆ ಮಾಡುತ್ತಾರೆ, ಇದಕ್ಕೆ ಅವರಿಗೆ ಉತ್ತರ ನೀಡಬೇಕಾ, ಎಂದು ಒಂದು Genaral Body ಸಭೆ ಮಾಡಿಬಿಡಿ Defaulter ನ್ನು ಜೊತೆಯಲ್ಲಿ ಕರೆದುಕೊಂಡು ಓಡಾಡುತ್ತಾರೆ, ಬ್ಯಾಂಕಿನ ಹಿತ ಬಯಸುವವರು ಬ್ಯಾಂಕಿಗೆ ತೊಂದರೆ ಆಗುತ್ತದೆ ಸಾಲವನ್ನು ಕಟ್ಟಿ ಎಂದು ಹೇಳಬೇಕು, ಆದರೆ ಕಟ್ಟಬೇಡಿ ಎಂದು ಹೇಳಿ ಕೊಡುತ್ತಾರೆ, ಇವರು ಬ್ಯಾಂಕಿನ ಏಳಿಗೆಯನ್ನು ಬಯಸುತ್ತಿಲ್ಲ, 25 ವರ್ಷದಿಂದ ಜಿದ್ದು ಮಾಡಿ ಬ್ಯಾಂಕ್ ಅನ್ನು ಮುಗಿಸುವುದಕ್ಕೆ ಹೊರಟಿದ್ದಾರೆ ದಯವಿಟ್ಟು ಯಾವುದೇ ಕಾರಣಕ್ಕೂ ಅವಕಾಶ ಕೊಡುವುದಿಲ್ಲ ಎಂದಾಗ ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್‌ರವರು ಮಾತನಾಡಿ ಅವಕಾಶ ಕೊಡಬಾರದು ಎಂದು ಸಭೆಗೆ ತಿಳಿಸಿದರು.

ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್ ಮಾತನಾಡಿ ನಮ್ಮ ಹಿರಿಯ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಹಲವಾರು ಪ್ರಶ್ನೆಗಳನ್ನು ಕೇಳಿದ್ದಾರೆ ಅದು ಬ್ಯಾಂಕಿಗೆ ಪೂರಕವಾಗಿ ಇದೆ ಅವರು ಕೊಡುವ ಸಲಹೆಗಳನ್ನು ನಾವು ಸ್ವೀಕಾರ ಮಾಡುತ್ತೇವೆ, ಹಾಗೆಯೆ ಸದಸ್ಯರಾದ ಶ್ರೀ ಜಿ ಎಸ್ ಬಸವರಾಜುರವರು ಪ್ರಶ್ನೆಗಳನ್ನು ಕೇಳಿದ್ದಾರೆ ಅದನ್ನು ಸಭೆಯ ಗಮನಕ್ಕೆ ತರಬೇಕು ಏಕೆಂದರೆ ಇದು

ಮುಂದುವರೆಯಬಾರದು, ಅವರು ಕೇಳಿರುವ ಪ್ರಶ್ನೆಗಳಿಗೆ ಉತ್ತರ ಕೊಡುವುದಾಗಿ ತಿಳಿಸಿ ಸದಸ್ಯರ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಸರ್ವ ಸದಸ್ಯರ ಸಭೆ ನಡೆಸುವುದು ಎಂದು ಸಭೆಗೆ ತಿಳಿಸಿದರು.

ಸದಸ್ಯರಾದ ಶ್ರೀ ಟಿ ಎಸ್ ರವಿಕುಮಾರ್‌ರವರು ಮಾತನಾಡಿ RBI ಇದೆ RBI ಗೆ Complaint ಕೊಡಲಿ ಪೋಲೀಸ್ ಸ್ಟೇಷನ್‌ಗೆ ಏಕೆ Complaint ಕೊಟ್ಟರು? ಇವರು ಪೋಲೀಸ್ ಸ್ಟೇಷನ್‌ಗೆ Complaint ಕೊಟ್ಟು ನಿಮ್ಮೆಲ್ಲರನ್ನೂ ಒಳಗಡೆ ಹಾಕಿಸಬೇಕು ಎಂದು ಪಾಪ ಹೆಣ್ಣು ಮಕ್ಕಳು ಏನು ಮಾಡಿದ್ದಾರೆ? ಅವರನ್ನು ಪೋಲೀಸ್ ಸ್ಟೇಷನ್ ಮೆಟ್ಟಿಲು ಹತ್ತಿಸಿದ್ದಾರೆ. ಇವರು ಅಕ್ಕ ತಂಗಿಯರ ಜೊತೆ ಬೆಳೆದಿಲ್ಲವ? ಇವರು ನಮ್ಮ ಬ್ಯಾಂಕನ್ನು ಏನು ಮಾಡಬೇಕು ಎಂದಿದ್ದಾರೆ? ನಮ್ಮ ಬ್ಯಾಂಕನ್ನು ವರ್ತಕರು ಸ್ಥಾಪನೆ ಮಾಡಿದವರು, ನಮ್ಮ ಬ್ಯಾಂಕ್ ಅನ್ನು stop ಮಾಡುವುದಕ್ಕೆ ನಾವು ವರ್ತಕರು ಇದ್ದೇವೆ, ನಾವೇನು ಸತ್ತು ಹೋಗಿಲ್ಲ, ಬ್ಯಾಂಕನ್ನು ಕಾಪಾಡುಕೊಳ್ಳುತ್ತೇವೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಟಿ ಎನ್ ಚಂದ್ರಶೇಖರ್‌ರವರು ಮಾತನಾಡಿ 62ನೇ ವಾರ್ಷಿಕ ಸಾಮಾನ್ಯ ಸಭೆಯು ಬಹಳ ಚೆನ್ನಾಗಿ ನಡೆಯುತ್ತಿದೆ. ಮುಂದೆ ನಡೆಯುವುದಕ್ಕೆ ಅಡ್ಡಗಾಲು ಹಾಕುವುದುಬೇಡ ಎಂದು ಹೇಳಿದರು.

ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಸದಸ್ಯರಾದ ಶ್ರೀ ಸಿ ಎಸ್ ನೀಲಕಂಠರವರು ಮಾತನಾಡಲು ಮುಂದಾದಾಗ ಆಮೇಲೆ ಮಾತನಾಡಿ ಎಂದು ಹೇಳುತ್ತಾ ಪುಟ ಸಂಖ್ಯೆಯನ್ನು ಮುಂದುವರೆಸಿದರು.

ಸದಸ್ಯರಾದ ಶ್ರೀ ಕೆ ಎಸ್ ದಯಾನಂದರವರು ಮಾತನಾಡಿ ಸದಸ್ಯರಾದ ಕೆ ಎನ್ ಪ್ರವೀಣ್‌ರವರು ಹೇಳುತ್ತಿದ್ದರು, Deposit ಏನು ತಂದಿದ್ದೇವೆ ಎಂದು ಅವರು Co-Operative ನಲ್ಲಿ Director ಆಗಿದ್ದಾನೆ ಎಂದು ಹೇಳಿದಾಗ ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್‌ರವರು ಮಾತನಾಡಿ ನಾವು ಇಲ್ಲಿ ವೈಯಕ್ತಿಕವಾಗಿ ಮಾತನಾಡುವುದಕ್ಕೆ ಬಂದಿರುವುದಿಲ್ಲ, ಬ್ಯಾಂಕಿನ ಅಭಿವೃದ್ಧಿಯ ವಿಚಾರವಾಗಿ ಮಾತನಾಡುವುದಕ್ಕೆ ಬಂದಿದ್ದೇವೆ. ಹೊರಗಡೆ ಕುಳಿತುಕೊಂಡು ಸಾಮಾಜಿಕ ಜಾಲತಾಣದಲ್ಲಿ ಬ್ಯಾಂಕಿನ ವಿಷಯಗಳನ್ನು ಹಾಕುತ್ತೀರಲ್ಲಾ, ಯಾವತ್ತಾದರೂ ಬ್ಯಾಂಕಿನ ಪರವಾಗಿ ಹಾಕಿದ್ದೀರಾ ಎಂದು ಕೇಳಿದರು.

ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಬಸವರಾಜುರವರು 10 ಪ್ರಶ್ನೆಯನ್ನು ಕೇಳಿದ್ದಾರೆ ಇದನ್ನು ಸಭೆಯ ಗಮನಕ್ಕೆ ತರಬೇಕು ಎಂದು ಹೇಳುತ್ತಿರುವಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜರವರು ಪುಟ ಸಂಖ್ಯೆಯನ್ನು ಮುಂದುವರೆಸುತ್ತ ಹೋದಾಗ ಸಭೆಯಲ್ಲಿ ಗೊಂದಲ ಸೃಷ್ಟಿ ಉಂಟಾಯಿತು.

ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಮಾತನಾಡಿ ಪುಟ ಸಂಖ್ಯೆ 45 ರಲ್ಲಿ ARCIL ರೂ.75.00 ಕೋಟಿ settle ಆಗಿದೆ ಎಂದು ಕೇಳಿದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಕೆಲವು ಸದಸ್ಯರು ಕೇಳಿರುವ ಪ್ರಶ್ನೆಯನ್ನು ಪದೇ ಪದೇ ಕೇಳಬೇಡಿ. ಸಭೆಯನ್ನು ಮುಂದುವರೆಯಲು ಅವಕಾಶ ಮಾಡಿಕೊಡಿ ಎಂದು ತಿಳಿಸಿದರು.

ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ತಾವು ಲಿಖಿತವಾಗಿ ಪ್ರಶ್ನೆಯನ್ನು ಕೇಳಿದ್ದೀರಾ, ಅದಕ್ಕೆಲ್ಲ ಉತ್ತರವನ್ನು ಈಗಲೇ ಪಡೆದುಕೊಳ್ಳುತ್ತೀರಾ? ಎಂದು ಕೇಳಿದಾಗ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಮಾತನಾಡಿ ಸಭೆಯನ್ನು ಜಗಳ ಮಾಡುವುದಕ್ಕೆ ಕರೆದ್ದಿದ್ದಿರಾ? ಒಬ್ಬರು 2-3 ಪ್ರಶ್ನೆಯನ್ನು ಕೇಳಬಾರದಾ? ತಾವು ಇಲ್ಲವೆಂದು ಹೇಳಿದರೆ ನಾವು ಎದ್ದು ಹೋಗುತ್ತೇವೆ, ಎಂದಾಗ ಸದಸ್ಯರಾದ ಶ್ರೀ ಸಿ ಎಸ್ ನೀಲಕಂಠರವರು ಮಾತನಾಡಿ ಆಡಳಿತ ಮಂಡಳಿಯವರು ಬಹಳ ತಾಳ್ಮೆಯಿಂದ ವರ್ತಿಸಬೇಕು, ಈ ರೀತಿ tention ಮಾಡಿಕೊಳ್ಳುವುದು ಬೇಡ, ಯಾವ ಸದಸ್ಯರು ಪ್ರಶ್ನೆಯನ್ನು ಕೇಳುತ್ತಾರೆ ಅವರಿಗೆ ಉತ್ತರವನ್ನು ನೀಡಿ 10 ಅಲ್ಲ 20 ಪ್ರಶ್ನೆಯನ್ನು ಕೇಳಲಿ ತಾವು ಸಮಾಧಾನವಾಗಿ ಉತ್ತರವನ್ನು ನೀಡಬೇಕು ಎಂದು ಹೇಳಿದರು. ಇದಕ್ಕೆ ಉತ್ತರವಾಗಿ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್ ಆಗಬಹುದು ಎಂದು ಹೇಳಿದರು. ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಉತ್ತರವನ್ನು ಒಪ್ಪಿಕೊಂಡವರು ಕುಳಿತುಕೊಳ್ಳಬೇಕು, argue ಮಾಡುವವರಿಗೆ ಪ್ರಶ್ನೆ ಇರುವುದಿಲ್ಲ, ಅವರಿಗೆ ಉತ್ತರ Satisfy ಆಗಿಲ್ಲವೆಂದರೆ higher authority ಗೆ ಕೇಳುವಂತೆ ಹೇಳಿದರು.

ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಮಾತನಾಡಿ ARCIL ಷೇರು ರೂ.73 ಕೋಟಿಯ ಬಾಂಡ್ ಕೊಟ್ಟಿದ್ದು, ರೂ.15 ಕೋಟಿ ಹಣವನ್ನು ನೀಡಿದ್ದಾರೆ. ಉಳಿದ ರೂ.32.00 ಕೋಟಿ ಹಿಂದಿನ ವರ್ಷವೇ ಖರ್ಚು ಹಾಕಿದ್ದೀರಾ, ಅದು ತಪ್ಪು ಎಂದು ಅಂದೇ ಹೇಳಿದ್ದು ಅದನ್ನು Receivable ನಲ್ಲಿ ಇಟ್ಟುಕೊಳ್ಳಬೇಕಿತ್ತು. Auditor ತಪ್ಪು ಮಾಡಿದ್ದಾರೆ ಆದರೆ ಅದು ಬೇಡದ ವಿಚಾರ. ಈ ವರ್ಷ ಆ ಸಾಲದ ಖಾತೆಯನ್ನು ಚುಕ್ತ ಮಾಡಿಕೊಂಡಿರುತ್ತಾರೆ ಎಂದು Audit note ನಲ್ಲಿ ಬರೆದಿರುತ್ತಾರೆ. ಸಾಲದ ಮೊತ್ತ ಚುಕ್ತಾ ಆಗಿದೆಯಾ? ARCIL ನಲ್ಲಿ ರೂ.91.00 ಕೋಟಿ ಒಪ್ಪಂದ ಆಗಿದೆ ಅದು ಅಷ್ಟೇನಾ ಬರುವುದು, ನಿಮ್ಮ ಪ್ರಕಾರ ಇನ್ನು ಏನೂ ಬರುವುದಿಲ್ಲವೆಂದು ಆಯಿತು. ಸಾಲದ ಖಾತೆ ಹೇಗೆ ಚುಕ್ತ ಆಗಿದೆ? ಎಂದು ಪ್ರಶ್ನಿಸಿದರು.

ಬ್ಯಾಂಕಿನ ನಿರ್ದೇಶಕರಾದ ಶ್ರೀ ಎಸ್ ವಿಶ್ವನಾಥ್‌ರವರು ಮಾತನಾಡಿ ARCIL ನವರಿಗೆ ಎರಡು Group Company ಒಟ್ಟು ರೂ. 123.50 ಕೋಟಿ ಸಾಲ ವಸೂಲಿ ಮಾಡುವುದಕ್ಕೆ assign ಮಾಡಿದ್ದು, ಸಾಲ ಕೊಡಬೇಕಾದರೆ ಆಸ್ತಿಯ ಮೌಲ್ಯ ರೂ. 256 ಕೋಟಿ

ಇದ್ದು ಸಾಲವನ್ನು ಕೊಟ್ಟಾಗ ರೂ.123.00 ಕೋಟಿ NPA ಆದಾಗ ರೂ.90.00 ಕೋಟಿ ARCIL ಗೆ ಕೊಟ್ಟಿದ್ದು, ಅದು Accounting Principle /RBI norms ಪ್ರಕಾರ ಆ ವ್ಯತ್ಯಾಸದ ಮೊತ್ತ ರೂ.32.00 ಕೋಟಿಯನ್ನು ಆ ವರ್ಷ we have transferred to profit and loss ಮಾಡಿದ್ದೇವೆ. ಅದನ್ನು RBI norms ಪ್ರಕಾರ ಮಾಡಲೇಬೇಕು. ಈ ರೂ. 90.00 ಕೋಟಿಯಲ್ಲಿ ಇದುವರೆಗೂ ರೂ.38.00 ಕೋಟಿ ವಸೂಲಿಯಾಗಿದೆ ಇನ್ನು ಬಾಕಿ ಹಣ ವಸೂಲಿ ಆಗಿ ರೂ.123.00 ಕೋಟಿವರೆಗೂ ವಸೂಲಿ ಮಾಡುತ್ತೇವೆ, ಅದರ ಜೊತೆಗೆ ಇಲ್ಲಿಯವರೆಗೂ ಬಂದಿರುವ ಬಡ್ಡಿಯನ್ನು ಸಹ ಈಗ Loss transferred to Profit and loss ಗೆ ಮಾಡಿದ್ದೇವೆ. ಇವತ್ತು ARCIL ನವರು estimate ಮಾಡಿ ಇವತ್ತಿಗೆ ರೂ.156.00 ಕೋಟಿ price fix ಮಾಡಿದ್ದಾರೆ ಎಲ್ಲ ಹಣ ವಸೂಲಿಯಾಗಿ ರೂ.28.00 ಕೋಟಿ ಬಡ್ಡಿನೂ ಸಹ ಬರುತ್ತದೆ. ಅದು Process ನಲ್ಲಿ ಇದೆ. ARCIL Specialize ಆಗಿರುವುದರಿಂದ ಅವರು ವಸೂಲಾತಿ ಮಾಡುತ್ತಿದ್ದಾರೆ The amount transferred to profit and loss account will recovred through bonds by way of Investment profit as per accounting standard procedures. Till now we have recovred amount Rs.38.20 crores. and further total assets are remain with us Rs.240.00 crores aginst the remaining recovery ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಮಾತನಾಡಿ Asset Value ಇರುವುದರಿಂದ ಖಂಡಿತ ವಸೂಲಿ ಆಗುತ್ತದೆ. ಆದರೆ ಸಾಲದ ಖಾತೆಯನ್ನು ಚುಕ್ತ ಮಾಡಿಕೊಂಡಿರುತ್ತಾರೆ ಎಂದು ಹೇಳಿದ್ದಾರೆ ಅಂದರೆ Claim ಏನು ಇಲ್ಲವಾ? ಈ Accounting system ಒಪ್ಪುವುದಿಲ್ಲ. ARCIL ನಿಂದ ಸಾಲ ವಸೂಲಿಯಾಗಿ Security Bondಗೆ interest ಬರುತ್ತದೆಯಾ? ಎಂದು ಹೇಳಿ, ಆದರೆ ನೀವು Loan Account Close ಎಂದು ತೋರಿಸುವಾಗ ಇನ್ನು ಪೇಪರ್‌ನಲ್ಲಿ ಬರಬೇಕಾಗಿರುವ ಬಾಕಿಯನ್ನು ಎಲ್ಲೂ ತೋರಿಸಿಲ್ಲ, ಇದನ್ನು ತೋರಿಸಬೇಕು ನಾವು ವ್ಯಾಪಾರಸ್ಥರು ಸಾಲ ಕೊಟ್ಟಿದ್ದು ಎಷ್ಟು ಬಾಕಿ ಇದೆ ಎಂದು ಪುಸ್ತಕದಲ್ಲಿ ಬರೆದಿಟ್ಟುಕೊಂಡಿರಬೇಕು, ಪುಸ್ತಕದಲ್ಲಿ Zero ಮಾಡಿಕೊಂಡರೆ ಹೇಗೆ ಎಂದು ಉದಾಹರಣೆ ಸಮೇತ ಸಭೆಗೆ ತಿಳಿಸಿದಾಗ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪರವರು ಮಾತನಾಡಿ Audit Report ನಲ್ಲಿ ಕೊನೆಯ ಸಾಲಿನಲ್ಲಿ ಒಟ್ಟು ಎಷ್ಟು ವಸೂಲಿಯಾಗಬೇಕು, Total Asset Value ಎಷ್ಟಿದೆ ಎಂದು detail ಆಗಿ ಬರಬೇಕಿತ್ತು ಎಂದಾಗ ನಿರ್ದೇಶಕರಾದ ಶ್ರೀ ಎಸ್ ವಿಶ್ವನಾಥ್‌ರವರು ಮಾತನಾಡಿ ಮುಂದಿನ ಸಾಲಿನಲ್ಲಿ ರೆಕಾರ್ಡ್ ಮಾಡುತ್ತೇವೆ ಎಂದು ಉತ್ತರಿಸಿದರು.

ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಮಾತನಾಡಿ Audit Report ನಲ್ಲಿ detail ಆಗಿ ಇಲ್ಲ, Balance Sheet ನಲ್ಲಿ ರೂ. 99.00 ಕೋಟಿ Deduction ಎಂದು ತೋರಿಸಿದ್ದೀರಾ, ಈ Deduction ಬಗ್ಗೆ ಯಾವುದೇ details ಇಲ್ಲ ಎಂದು ಪ್ರಶ್ನಿಸಿದರು.

ಬ್ಯಾಂಕಿನ ನಿರ್ದೇಶಕರಾದ ಶ್ರೀ ಎಸ್ ವಿಶ್ವನಾಥ್‌ರವರು ಮಾತನಾಡಿ ಆಯಾ Report Provision ನಲ್ಲಿ Reserve ಖಾತೆಯಲ್ಲಿ ಬಂದಿದೆ ಎಂದು ಉತ್ತರಿಸಿದರು.

ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಮಾತನಾಡಿ ನಾವು ಅಷ್ಟೆಲ್ಲಾ ಓದಿರುವುದಿಲ್ಲ, ಅನಕ್ಷರಸ್ಥರು ಎಂದು ಹೇಳಿದರು, ರೂ. 99 ಕೋಟಿ Deduction ಗೆ Schedule ಬೇಕು. ರೂ. 32.50 ಕೋಟಿ ಖರ್ಚುಗೆ details ತೋರಿಸಿ ಒಂದು Note ಹಾಕಬಹುದಿತ್ತು, ನಾವು ಜಗಳ ಮಾಡುವುದಕ್ಕೆ ಬಂದಿರುವುದಿಲ್ಲ. ಬ್ಯಾಂಕಿನವರು ಕೆಲವು ತಪ್ಪು ಮಾಡಿರುವುದನ್ನು ಸರಿ ಪಡಿಸಿಕೊಳ್ಳಿ ಎಂದು ಹೇಳುವುದಕ್ಕೆ ಬಂದಿದ್ದೇವೆ ಎಂದು ಸಭೆಗೆ ತಿಳಿಸಿದರು.

ಸದಸ್ಯರಾದ ಶ್ರೀ ಆರ್ ಎಸ್ ಪ್ರಭುರವರು ಮಾತನಾಡಿ ಕಳೆದ 3 ವರ್ಷಗಳಿಂದ ARCIL ಬಗ್ಗೆ ಚರ್ಚೆ ನಡೆಯುತ್ತಲೆ ಇದೆ. ಕಳೆದ ವರ್ಷ ಇದರ ಬಗ್ಗೆ clarity ಕೊಟ್ಟಿದ್ದು, 5 ವರ್ಷ Period, 5 ವರ್ಷ ಬಾಂಡ್ Close ಆಗುವುದರೊಳಗೆ ಮತ್ತೆ ಇನ್ನು ಉಳಿದ 2 ವರ್ಷನೂ ಅದೇ ಪ್ರಶ್ನೆಯನ್ನು ಕೇಳುತ್ತಿರುತ್ತಾರೆ. ಸರಿಯಾಗಿ ಉತ್ತರ ಸಿಗುವುದಕ್ಕೆ ಇನ್ನು 2ವರ್ಷ ಬೇಕಾಗುತ್ತದೆ. 5 ವರ್ಷ ಬಾಂಡ್ ಮುಗಿದ ಮೇಲೆ ಪೂರ್ತಿ ಹಣ ಬಂದಿರುತ್ತದೆ. ಬ್ಯಾಂಕಿಗೆ ಹೋಗಿ clarity ತೆಗೆದುಕೊಳ್ಳಿ ಎಂದು ಹೇಳಿದರು.

ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಮಾತನಾಡಿ ಕಳೆದ ವರ್ಷ ಚರ್ಚೆ ಮಾಡಿಲ್ಲವೆಂದು ಈ ವರ್ಷ ಚರ್ಚೆ ಮಾಡುತ್ತಿಲ್ಲ, ಕಳೆದ ವರ್ಷ ಚರ್ಚೆ ಮಾಡಿದ್ದು ರೂ.32.50 ಕೋಟಿಗೆ, ಈ ವರ್ಷ Loan Discharge ಮಾಡಿದೆ ಎನ್ನುವ ಬಗ್ಗೆ ಚರ್ಚೆ ಮಾಡುತ್ತಿರುವುದು, ಆ ರೀತಿ ತೋರಿಸಬೇಡಿ, ವಸೂಲಾತಿ ಜಾರಿಯಲ್ಲಿದೆ ಎಂದು ತಿಳಿಸಿದರು. ಅದಕ್ಕೆ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜರವರು ಮಾತನಾಡಿ ಸಲಹೆಯನ್ನು ಸ್ವೀಕರಿಸಲಾಗಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಆರ್ ಎಸ್ ಪ್ರಭುರವರು ಮಾತನಾಡಿ ಪ್ರತಿಯೊಂದು ಸಾಲ ವಸೂಲಿ ಆಗುತ್ತದೆ. ಬಾಂಡ್ ಇರುವುದಾಗಿ ತಿಳಿಸಿ ದಯವಿಟ್ಟು ಕುಳಿತುಕೊಳ್ಳಿ ಎಂದು ಹೇಳಿದರು.

ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದ ಮೂರ್ತಿರವರು ಮಾತನಾಡಿ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಸಮಂಜಸವಾದ ಪ್ರಶ್ನೆಯನ್ನು ಕೇಳುತ್ತಿದ್ದಾರೆ, Auditor ಕೊಟ್ಟಿರುವ ಉತ್ತರ ಅರ್ಥವಾಗುತ್ತಿಲ್ಲ ಎಂದು ಹೇಳಿದರು. ಆದರೆ ಅವರಿಗೆ ಅರ್ಥವಾಗಬೇಕಾದರೆ ಅವರು ಬ್ಯಾಂಕಿಗೆ ಬರಲಿ ಅಥವಾ Auditor ನ ಕರೆಸಿ ಪ್ರತಿ ಫೈಲನ್ನು scruitiny ಮಾಡಿ ಹಣ ಎಷ್ಟು ಬರಬೇಕು? ಆಸ್ತಿಯ ಬೆಲೆ ಎಷ್ಟಿದೆ? ಏನು ವಸೂಲಿ ಕ್ರಮ ತೆಗೆದುಕೊಂಡಿದ್ದೇವೆ ಎಂದು free ಮಾಡಿಕೊಂಡು ಯಾವಾಗ ಬೇಕಾದರೂ ಬ್ಯಾಂಕಿಗೆ ಬರಲಿ ಎಂದು ಹೇಳಿದರು.

ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಮಾತನಾಡಿ ಬ್ಯಾಂಕಿಗೆ ನನ್ನ ಒಬ್ಬನನ್ನು ಕರೆಯುವುದಕ್ಕಿಂತ 10 ಜನ ಹಿರಿಯ ಸದಸ್ಯರನ್ನು ಕರೆಸಿ meeting ಮಾಡಿ Balance sheet, Audit report, ಅಥವಾ Business ವಿಚಾರದಲ್ಲಿ ಮಾತನಾಡುವುದಕ್ಕೆ ಒಂದು ಅವಕಾಶ ಮಾಡಿ ಕೊಡಿ ಎಂದು ಹೇಳಿದರು. ಅದಕ್ಕೆ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಸಲಹೆಯನ್ನು ಸ್ವೀಕರಿಸುತ್ತೇವೆ ಎಂದು ಹೇಳಿದರು.

ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪರವರು ಬ್ಯಾಂಕಿನಲ್ಲಿ ಉಪಾಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿದ್ದು ಇದರ ಬಗ್ಗೆ ಅನುಮಾನ ಇದ್ದಲ್ಲಿ ಮುಂದಿನ ವಾರ ಬ್ಯಾಂಕಿಗೆ ಬಂದರೆ Auditor ಅನ್ನು ಕರೆಸುವುದಾಗಿ ಹೇಳಿದರು.

ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್‌ರವರು ಮಾತನಾಡಿ ಹಿರಿಯ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪರವರನ್ನು ಬ್ಯಾಂಕಿನ ಸಲಹಾ ಸಮಿತಿಯಲ್ಲಿ ತೊಡಗಿಸಿಕೊಳ್ಳುವಂತೆ ಮನವಿ ಮಾಡಿದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ನಮ್ಮ ಸಲಹೆಯನ್ನು ಸ್ವೀಕರಿಸುತ್ತೇವೆ ಎಂದಾಗ ಸದಸ್ಯರಾದ ಶ್ರೀ ಬಿ ಎಲ್ ಚಂದ್ರಕೀರ್ತಿರವರು ಮಾತನಾಡಿ ಸಲಹಾ ಸಮಿತಿ ಮಾಡುವುದಕ್ಕೆ ಇದು Individual Bank, ಸಲಹಾ ಸಮಿತಿ ರಚಿಸುವ ಅಗತ್ಯವಿಲ್ಲ, 10 ಹಿರಿಯ ಸದಸ್ಯರ ಜೊತೆಗೆ ಅಸೋಸಿಯೆಷನ್ ಅಧ್ಯಕ್ಷರು, ಉಪಾಧ್ಯಕ್ಷರು, ಆಡಿಟರ್ ಅವರನ್ನು ಕರೆಸುತ್ತೇವೆ. ಚರ್ಚೆ ಮಾಡಿ ಅದಕ್ಕೆ ಏನು ಸಹಕಾರ ಬೇಕು ಕೊಡುತ್ತೇವೆ ಎಂದು ಹೇಳಿದರು.

ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಪುಟ ಸಂಖ್ಯೆಯನ್ನು ಮುಂದುವರೆಸುತ್ತಿದ್ದಾಗ ಸದಸ್ಯರಾದ ಶ್ರೀ ಜಿನ್ನಪ್ಪ ಹೊಸಮನಿರವರು ಪುಟ ಸಂಖ್ಯೆ.59 ರಲ್ಲಿ ಹಾಲಿ ಇರುವ ಒಬ್ಬ ನಿರ್ದೇಶಕರ ಸಂಬಂಧಿಕರಿಗೆ ರೂ.10.00 ಕೋಟಿ ಸಾಲ ಇದೆ ಆದರೂ ಅವರಿಗೆ ಮುಂದುವರೆಯಲು ಅವಕಾಶ ನೀಡಿದ್ದೀರಾ, ಈ ರೂ.10.00 ಕೋಟಿ ಸಾಲ ನಮ್ಮ ಬ್ಯಾಂಕಿನಿಂದ ತೆಗೆದುಕೊಂಡಿದ್ದಾರ? ಬೇರೆ ಬ್ಯಾಂಕಿನಿಂದ ತೆಗೆದುಕೊಂಡಿದ್ದಾರ? Reason ಕೊಟ್ಟಿರುವುದಿಲ್ಲ ಎಂದು ಪ್ರಶ್ನಿಸಿದರು.

ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ 2025-30 ಸಾಲಿನಲ್ಲಿ ನಡೆದ ಚುನಾವಣೆಯಲ್ಲಿ ಗೆದ್ದ ಒಬ್ಬ ನಿರ್ದೇಶಕರ ಸಂಬಂಧಿ ಮತ್ತು ಇನ್ನೊಬ್ಬ ನಿರ್ದೇಶಕರ ಸಂಬಂಧಿಕರ ಆಸಕ್ತ ಸಂಸ್ಥೆಯ ಸಾಲಗಳಿದ್ದು, ಚುನಾವಣೆಗೂ ಮುನ್ನ ಪಡೆದ ಸಾಲಗಳಾಗಿರುತ್ತದೆ. ದಿನಾಂಕ: 31/03/2025 ಕ್ಕೆ ರೂ.10,26,9,051/- ಸಾಲಗಳಿದ್ದು ಯಾವುದು ಚುಕ್ತವಾಗಿರುವುದಿಲ್ಲ, ಈ ಬಗ್ಗೆ RBI ಗೆ ವರದಿ ಸಲ್ಲಿಸಿರುತ್ತಾರೆ ಎಂದು ಉತ್ತರಿಸಿದಾಗ ಸದಸ್ಯರಾದ ಶ್ರೀ ಜಿನ್ನಪ್ಪ ಹೊಸಮನಿರವರು ಮಾತನಾಡಿ ಈ ಸಾಲ ನಮ್ಮ ಬ್ಯಾಂಕಿನಿಂದ ತೆಗೆದುಕೊಂಡಿದ್ದಾರ, ಬೇರೆ ಬ್ಯಾಂಕಿನಿಂದ ತೆಗೆದುಕೊಂಡಿದ್ದಾರ? ನಮ್ಮ ಬ್ಯಾಂಕಿನಿಂದ ತೆಗೆದುಕೊಂಡಿದ್ದಾರೆ. ಇದೇ ಕಾರಣಕ್ಕಾಗಿ ನಮ್ಮ ಕೋ–ಆಪರೇಟಿವ್ ಬ್ಯಾಂಕಿನಲ್ಲಿ Badbedts ಆಗುತ್ತಿರುವುದು. ಆಧಾರ ರಹಿತ Documents ಅಥವಾ fake Documents ತೆಗೆದುಕೊಳ್ಳುವುದು ಇದರಲ್ಲಿ ಕೆಲವು ಬಾರಿ Political influence ಇರಬಹುದು. ಈಗ ಕೊಟ್ಟಿರುವ ಸಾಲದ ಎಲ್ಲ Documents ಗಳನ್ನು ಸರಿಯಾಗಿದೆಯೇ ಎಂದು ಪರಿಶೀಲಿಸಿ ಎಂದು ಹೇಳಿದಾಗ ನಿರ್ದೇಶಕರಾದ ಶ್ರೀ ಎಸ್ ವಿಶ್ವನಾಥ್‌ರವರು ಮಾತನಾಡಿ ನಮ್ಮ ಬ್ಯಾಂಕಿನಿಂದ ಈ ಸಾಲವನ್ನು ಚುನಾವಣೆಗೂ ಮುನ್ನ ಕೊಟ್ಟಿದ್ದು, Regular ಆಗಿ ಸಾಲವನ್ನು ಕಟ್ಟುತ್ತಿದ್ದಾರೆ. Documents 100% ಸರಿಯಾಗಿದ್ದು ಸಂಸ್ಥೆಯಲ್ಲಿ ಸಾಲದ ಮೊತ್ತಕ್ಕಿಂತ ಹೆಚ್ಚಿನದಾಗಿ Documents ಇದ್ದು, ಎರಡು Legal opinion ಮತ್ತು ಎರಡು Valuation ತೆಗೆದುಕೊಂಡಿದ್ದು. ಇದು ಹೆಚ್ಚಿಗೆ ಇದ್ದು ಒಂದು ಆಸ್ತಿಯನ್ನು ಮಾರಾಟ ಮಾಡಿ ಸಾಲವನ್ನು ತೀರಿಸಿದ್ದಾರೆ. ಈಗಲೂ process ನಲ್ಲಿ ಇದೆ. ಇದು ನಮ್ಮ ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆಯದು ಏನೂ ತೊಂದರೆಯಿಲ್ಲ ಎಂದು ಉತ್ತರಿಸಿದರು.

ಸದಸ್ಯರಾದ ಶ್ರೀ ಜಿನ್ನಪ್ಪ ಹೊಸಮನಿರವರು ಪುಟ ಸಂಖ್ಯೆ.60 ರಲ್ಲಿ 11ನೇ ಕಾಲಂ ನಲ್ಲಿ ಬ್ಯಾಂಕಿನ ಆಧಾರ ರಹಿತ ಸಾಲ ರೂ.66 ಲಕ್ಷ ಇದ್ದು ಬ್ಯಾಂಕಿನಲ್ಲಿ ಆಧಾರ ರಹಿತ ಸಾಲವನ್ನು ಕೊಡುವುದಕ್ಕೆ Provision ಇದೆಯಾ? ಎಂದು ಪ್ರಶ್ನಿಸಿದಾಗ
ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಆಧಾರ ರಹಿತ ಸಾಲ ಯಾವುದೆಂದರೆ ಈ ಹಿಂದಿನಿಂದಲೂ ಸದಸ್ಯರಿಗೆ ರೂ.25000/–ಗಳ ಜಂಟಿ ಸಾಲವನ್ನು ನೀಡುವುದು. ಇದರ ಜೊತೆಗೆ 2016ರಲ್ಲಿ ಕೇಂದ್ರ ಸರ್ಕಾರ ಹೊರಡಿಸಿದ ಸುತ್ತೋಲೆಯಂತೆ ಸಣ್ಣ ಸಣ್ಣ ವ್ಯಾಪಾರಸ್ಥರಿಗೆ ಸಾಲ ಕೊಡಬೇಕು ಎಂದಿದ್ದು ಅದರಲ್ಲಿ ರೂ.3 ಕೋಟಿ ಆದಾಯ ಕೂಡ ಬಂದಿದೆ. ಆದರೆ ಬ್ಯಾಂಕ್ SAF ನಲ್ಲಿ ಇರುವುದರಿಂದ RBI ನವರ ಆದೇಶದಂತೆ ಆಧಾರ ರಹಿತ ಸಾಲವನ್ನು ತಾತ್ಕಲಿಕವಾಗಿ ನಿಲ್ಲಿಸಿದ್ದು ಮುಂದೆ ಕೊಡುವುದಾಗಿ ಎಂದು ತಿಳಿಸಿದರು.

ಉಪಾಧ್ಯಕ್ಷರಾದ ಶ್ರಿ ಸಿ ಆರ್ ನಟರಾಜ್‌ರವರು ಪುಟ ಸಂಖ್ಯೆಯನ್ನು ಮುಂದುವರೆಸುತ್ತಿದ್ದಾಗ ಸದಸ್ಯರಾದ ಶ್ರೀ ಆರ್ ಸಿದ್ದಪ್ಪ ನವರು ಮಾತನಾಡಿ ಆಗಸ್ಟ್ 5ನೇ ತಾರೀಕು Mobile ಗೆ ಒಂದು SMS ಬಂದಿದ್ದು, ಏನೆಂದರೆ ಶಿರಾ ಗೇಟ್‌ನಲ್ಲಿರುವ Government IDSMT ನಲ್ಲಿ forgery ಮಾಡಿ ರೂ. 4.00 ಕೋಟಿ ಸಾಲ ವಿತರಣೆ ಮಾಡಿರುವ ಬಗ್ಗೆ ವಿವರಣೆ ನೀಡಬೇಕಾಗಿ ಕೇಳಿಕೊಂಡರು.

ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಸದಸ್ಯರೊಬ್ಬರು ಇದೇ ಪ್ರಶ್ನೆಯನ್ನು ಲಿಖಿತವಾಗಿ ಕೇಳಿದ್ದು, ನಂತರದಲ್ಲಿ ಉತ್ತರವನ್ನು ಕೊಡುವುದಾಗಿ ತಿಳಿಸಿದರು.

ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮತ್ತೆ ಪುಟ ಸಂಖ್ಯೆಯನ್ನು ಮುಂದುವರೆಸುತ್ತಿದ್ದಾಗ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪರವರು ಮಾತನಾಡಿ ಕಳೆದ ವರ್ಷ ಲಾಭ ಮಾಡಿರುವ ಆಧಾರದ ಮೇಲೆ RBI ನವರು relaxation ಕೊಟ್ಟಿದ್ದಾರೆ ನಮ್ಮ ವರ್ತಕರಿಗೆ ರೂ.25000/-ಗಳ ಜಂಟಿ ಸಾಲ ಕೊಡುವ ಬದಲು ಸಾಲವನ್ನು ಸರಿಯಾಗಿ ಚುಕ್ತ ಮಾಡುವವರಿಗೆ ರೂ.50000/-ಗಳ ಜಂಟಿ ಸಾಲ ಕೊಡುವಂತೆ ಮನವಿ ಮಾಡಿದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಪ್ರಯತ್ನ ಮಾಡುವುದಾಗಿ ತಿಳಿಸಿದರು.

ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಪುಟ ಸಂಖ್ಯೆಯನ್ನು ಮುಂದುವರೆಸುತ್ತಿದ್ದಾಗ ಸದಸ್ಯರಾದ ಶ್ರೀ ಸಿ ಎಸ್ ನೀಲಕಂಠರವರು ಮಾತನಾಡಿ ಪುಟ ಸಂಖ್ಯೆ.73 ರಲ್ಲಿ ಬ್ಯಾಂಕಿನ ಸದಸ್ಯತ್ವದಿಂದ ತೆಗೆದುಹಾಕಿದ ಸದಸ್ಯರೊಬ್ಬರ ವಿರುದ್ಧ ಬ್ಯಾಂಕು ಮಾನನಷ್ಟ ಮೊಕದ್ದಮೆಯನ್ನು ದಾಖಲಿಸಿದ್ದು ಈ ಸಂಬಂಧ ತುಮಕೂರು ನ್ಯಾಯಾಲಯದಲ್ಲಿ ರೂ.2,57,125.00 ಗಳ ಠೇವಣಿಯನ್ನು ಇರಿಸಿದ್ದು, ಮಾನನಷ್ಟ ಮೊಕದ್ದಮೆಯನ್ನು ಅವರ ಮೇಲೆ ಎಷ್ಟು Claim ಮಾಡಿದ್ದೀರಾ? ಎಂದು ಪ್ರಶ್ನಿಸಿದರು. ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಮಾನನಷ್ಟ ಮೊಕದ್ದಮೆಯನ್ನು ಕೋಟಿಗಟ್ಟಲೆ Claim ಮಾಡಿದ್ದು, ನಿರ್ದಿಷ್ಟ ಮೊತ್ತ ಕೇಸ್ decide ಆದ ಮೇಲೆ ಹೇಳುತ್ತೇವೆ ಎಂದು ಉತ್ತರಿಸಿದರು.

ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮತ್ತೆ ಪುಟ ಸಂಖ್ಯೆಯನ್ನು ಮುಂದುವರೆಸುತ್ತಿದ್ದಾಗ ಸದಸ್ಯರಾದ ಶ್ರೀ ಪಿ ಸದಾಶಿವಯ್ಯರವರು ಮಾತನಾಡಿ Defamation amount ಎಷ್ಟಕ್ಕೆ Claim ಮಾಡಿದ್ದೀರಾ? ಎಂದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಮಾನನಷ್ಟ ಮೊಕದ್ದಮೆಯನ್ನು ಕೋಟಿಗಟ್ಟಲೆ Claim ಮಾಡಿದ್ದು ನಿರ್ದಿಷ್ಟ ಮೊತ್ತ ಕೇಸ್ court order ಆದ ಮೇಲೆ ಹೇಳುತ್ತೇವೆ ಎಂದು ಉತ್ತರಿಸಿದಾಗ ಮುಂದುವರೆದು ಸದಸ್ಯರಾದ ಶ್ರೀ ಪಿ ಸದಾಶಿವಯ್ಯರವರು ಮಾತನಾಡಿ ಅದು ನ್ಯಾಯಾಲಯಕ್ಕೆ ಬಿಟ್ಟಿರುವುದು ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ನ್ಯಾಯಾಲಯ ಏನು ಆದೇಶ ಕೊಡುತ್ತದೆ ಅದರ ಮೇಲೆ ಮೊತ್ತ ನಿಗಧಿ ಆಗುತ್ತದೆ ಎಂದು ಹೇಳಿದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಮಾನನಷ್ಟ ಮೊಕದ್ದಮೆಯನ್ನು ಒಂದು ಕೋಟಿಗೆ ಹಾಕಿರುವುದು ಎಂದು ಹೇಳಿ ಪುಟ ಸಂಖ್ಯೆಯನ್ನು ಮುಂದುವರೆಸುತ್ತಿದ್ದಾಗ ಸದಸ್ಯರಾದ ಶ್ರೀ ಸಿ ಎಸ್ ನೀಲಕಂಠರವರು ಮಾತನಾಡಿ ಪುಟ ಸಂಖ್ಯೆ.79 ರಲ್ಲಿ 6 ಸಭೆಗಳು ನಡೆದಿದ್ದು ಒಬ್ಬರು ನಿರ್ದೇಶಕರುಗಳು 3, ಇನ್ನೊಬ್ಬರು 3, ಮತ್ತೊಬ್ಬರು 1 ಸಭೆಗೆ ಹಾಜರಾಗಿರುವುದು, ಸಾಮಾನ್ಯವಾಗಿ ಒಬ್ಬರು bank influence ನಲ್ಲಿ ಕೆಲಸ ಮಾಡಬಹುದು ಆದರೆ ಮೂರು ಜನ ಎಂದರೆ doubt ಬರುತ್ತದೆ ಎಂದು ಕೇಳಿದಾಗ ನಿರ್ದೇಶಕರಾದ ಶ್ರೀಮತಿ ರಶ್ಮಿಕಿರಣ್‌ರವರು ಮಾತನಾಡಿ ಮಗಳಿಗೆ ಮಗುವಾದ ಕಾರಣ ಸಭೆಗೆ ಹಾಜರಾಗಲು ಸಾಧ್ಯವಾಗಲಿಲ್ಲವೆಂದು ಉತ್ತರಿಸಿದರು.

ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಪುಟ ಸಂಖ್ಯೆಯನ್ನು ಮುಂದುವರೆಸುತ್ತಿದ್ದಾಗ ಸದಸ್ಯರಾದ ಶ್ರೀ ಸಿ ಎಸ್ ನೀಲಕಂಠರವರು ಮಾತನಾಡಿ ಪುಟ ಸಂಖ್ಯೆ.85 ರಲ್ಲಿ ಕ್ರಮ ಸಂಖ್ಯೆ 9 ಸಿಬ್ಬಂದಿ ಬೋನಸ್ ಪಾವತಿ ಸಹಕಾರ ಕಾಯಿದೆ ರೀತಿ ಅಥವಾ ಬೋನಸ್ ಕಾಯ್ದೆ ರೀತಿ ಮಾಡಲಾಗಿದೆಯೇ? ಇದು ಸರಿ ಇರುವ ಬಗ್ಗೆ ಧೃಢೀಕರಿಸುವುದು, ಕಳೆದ 5 ವರ್ಷಗಳಿಂದ ಸಿಬ್ಬಂದಿಗಳಿಗೆ ಬೋನಸ್ ನೀಡಿರುವುದಿಲ್ಲವೆಂದು ವರದಿ ಮಾಡಿದ್ದೀರಾ ಕಾರಣ ಏನು ಎಂದು ಕೇಳಬಹುದಾ? ಎಂದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ 5 ವರ್ಷದಿಂದ ಬ್ಯಾಂಕ್ ಲಾಭದಲ್ಲಿ ಇರುವುದಿಲ್ಲ ಸಿಬ್ಬಂದಿಗೆ ಬೋನಸ್ ಕೊಟ್ಟಿರುವುದಿಲ್ಲ, ಈ ವರ್ಷ ಡಿಎ ಕೊಟ್ಟಿದೆ, ಮುಂದಿನ ವರ್ಷ ಬೋನಸ್ ಕೊಡುತ್ತೇವೆ ಎಂದಾಗ ಸದಸ್ಯರಾದ ಶ್ರೀ ಸಿ ಎಸ್ ನೀಲಕಂಠರವರು ಮಾತನಾಡಿ ಕಳೆದ 5 ವರ್ಷದಿಂದ ನಮ್ಮ parallel ಸಂಸ್ಥೆಯಲ್ಲಿ ಸಿಬ್ಬಂದಿಗೆ ಬೋನಸ್ ಕೊಡುತ್ತೇವೆ, ಲಾಭಾದಾಯಕವಾಗಿರುವುದರಿಂದ ನಾವು ಕೊಟ್ಟಿರುತ್ತೇವೆ ಎಂದಾಗ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ನಿಮ್ಮಲ್ಲಿ ಸಿಬ್ಬಂದಿ ಕಡಿಮೆ ಇದ್ದಾರೆ, ನಮ್ಮಲ್ಲಿ ಸಿಬ್ಬಂದಿ ಜಾಸ್ತಿ ಇದ್ದು ಕೋಟಿಗಟ್ಟಲೆ ಖರ್ಚು ಬರುತ್ತದೆ, ಆದ್ದರಿಂದ ಮುಂದಿನ ವರ್ಷ ಕೊಡುವುದಕ್ಕೆ ಪ್ರಯತ್ನ ಪಡುತ್ತೇವೆ ಅದಕ್ಕೆ ಸಿಬ್ಬಂದಿಯವರು ಸಹ ಬೆಂಬಲವಾಗಿದ್ದಾರೆ ಎಂದು ತಿಳಿಸಿದರು, ಮತ್ತೆ ಪುಟ ಸಂಖ್ಯೆಯನ್ನು ಮುಂದುವರೆಸುತ್ತಾ ಇಲ್ಲಿಗೆ ಲೆಕ್ಕ ಪರಿಶೋಧಕರ ವರದಿ ಹಾಗೂ ಆಡಳಿತ ಮಂಡಳಿಯಯವರ ಸಮಾಧಾನಗಳನ್ನು ಮಂಡಿಸಿದ್ದು ಧನ್ಯವಾದಗಳನ್ನು ತಿಳಿಸಿ, ತಮ್ಮೆಲ್ಲರ ಒಪ್ಪಿಗೆ ನೀಡಬೇಕೆಂದು ಕೇಳಿಕೊಂಡಾಗ ಸದಸ್ಯರೆಲ್ಲರೂ ಒಕ್ಕೊರಲಿನಿಂದ ಒಪ್ಪಿಗೆಯನ್ನು ಸೂಚಿಸಿದರು.

ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಮಾತನಾಡಿ 2 ವರ್ಷದಿಂದ ಕೋವಿಡ್ ಸಮಯದಿಂದ ನಮ್ಮ ಆಡಳಿತ ಮಂಡಳಿ ಕೆಲಸ ಮಾಡುವುದಕ್ಕಿಂತ ನಮ್ಮ ಸಿಬ್ಬಂದಿಯವರು ವಸೂಲಾತಿ ಕಾರ್ಯದಲ್ಲಿ ಬಹಳ ಕೆಲಸ ಮಾಡಿದ್ದಾರೆ, ಕೋವಿಡ್ ಸಮಯದಲ್ಲಿ ಮನೆ ಮನೆಗೆ ಹೋಗಿ ವಸೂಲಾತಿ ಮಾಡಿದ್ದಾರೆ, ಈ ಸಂದರ್ಭದಲ್ಲಿ ಎಲ್ಲರ ಪರವಾಗಿ ಧನ್ಯವಾದಗಳನ್ನು ತಿಳಿಸಿದರು. ಮುಂದುವರೆದು

ಜೊತೆಗೆ ಡಿಎ ಕೊಟ್ಟಿದ್ದಿರಾ? ARCIL ನವರದು settle ಆದರೆ ಬೋನಸ್, Increment, Pay scale ಎಲ್ಲವನ್ನು ಕೊಡಿ, ಬ್ಯಾಂಕ್‌ಗೆ ಬಹಳ ಹೊರೆ ಮಾಡಿಕೊಂಡು ಕೊಡಬೇಕು ಎನ್ನುವುದಿಲ್ಲ ಆದರೆ reasonable ಆಗಿ ಏನು ಕೊಡಬೇಕು ಕೊಟ್ಟು ಸಿಬ್ಬಂದಿಯಿಂದ ಇನ್ನು ಹೆಚ್ಚಿನ ಸೇವೆ ಮತ್ತು ಕೆಲಸಮಾಡಿಸಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದರು.

ಸದಸ್ಯರಾದ ಶ್ರಿ ಪಿ ಸದಾಶಿವಯ್ಯನವರು ಮಾತನಾಡಿ ಹಿರಿಯರಾದ ಮುನಿಗಂಗಪ್ಪನವರ ಅಭಿಪ್ರಾಯಕ್ಕೆ ಸಹ ಮತ ಇದೆ, ಬ್ಯಾಂಕಿಗೆ ಲಾಭ ಕಡಿಮೆ ಇರುವುದರಿಂದ ಡಿಎ ಕೊಟ್ಟಿರುವುದು ಸಂತೋಷವಾಗಿದೆ, ಸಿಬ್ಬಂದಿ ವರ್ಗವು ಸಹ ಜವಾಬ್ದಾರಿಯುತವಾಗಿ ಕೆಲಸ ಮಾಡುತ್ತಿದ್ದಾರೆ, ವಸೂಲಾತಿ ಆದ ಮೇಲೆ ಮುಂದಿನ ವರ್ಷ ಸಿಬ್ಬಂದಿಯವರಿಗೆ ಬೋನಸ್‌ನ್ನು ಪರಿಗಣಿಸಿ ನೀಡಬಹುದು, ಅವರ ಅಭಿಪ್ರಾಯಕ್ಕೆ ನಮ್ಮ ಸಹ ಮತ ಇದೆ ಎಂದು ತಿಳಿಸಿದರು.

ಅಧ್ಯಕ್ಷರಾದ ಶ್ರೀ .ಹೆಚ್ ಎಂ ದಿವ್ಯಾನಂದ ಮೂರ್ತಿರವರು ಮಾತನಾಡಿ ಮುನಿಗಂಗಪ್ಪನವರು ರೈಸ್ ಮಿಲ್‌ನಲ್ಲಿ, ಸ್ಕೂಲ್‌ಗಳಲ್ಲಿ ಕೆಲಸ ನಿರ್ವಹಿಸಿದ್ದಾರೆ, ನಾವು ಮೇಲೆ ಕೂತಿರುವುದು, ಆದರೆ ಅವರು ಬಂಡವಾಳ ಹಾಕಿರುತ್ತಾರೆ, ಕಾರ್ಮಿಕರು ಕೆಲಸ ಮಾಡಿದ ಮೇಲೆ ರೈಸ್‌ಮಿಲ್ ಗೆ ಲಾಭ ಬಂದಿರುವುದು, ಹಾಗೆಯೆ ಇಲ್ಲೂ ಸಹ ಎಲ್ಲಾ ಸಿಬ್ಬಂದಿಯವರು ಕೆಲಸ ಮಾಡುತ್ತಾರೆ, ರಾತ್ರಿ 12 ಗಂಟೆಗೆ ಆದರೂ ಸಹ call ಮಾಡಿದರೆ receive ಮಾಡುತ್ತಾರೆ, ಅದಕ್ಕೆ ಸಿಬ್ಬಂದಿಯವರಿಗೆ ಧನ್ಯವಾದಗಳನ್ನು ತಿಳಿಸಿದರು. ಆಡಳಿತ ಮಂಡಳಿಯವರು ಒಂದೆರಡು ಗಂಟೆ ಬಂದು ಹೋಗುತ್ತೇವೆ, ಸಿಬ್ಬಂದಿಯವರು ಬೆಳಗ್ಗೆಯಿಂದ ಸಂಜೆವರೆಗೆ ಕೆಲಸ ಮಾಡುತ್ತಾರೆ, ಹಾಗೆಯೇ ಕೆಲವೊಂದು ಸಲಹೆಗಳನ್ನು ಸಹ ನೀಡುತ್ತಾರೆ. ಈ ತರ circular ಬಂದಿದೆ ಹೀಗೆ ಮಾಡಬೇಕು ಹಾಗೆ ಮಾಡಬೇಕು, ನಮ್ಮ ಸಿಬ್ಬಂದಿಗಳು ತುಂಬಾ ಬುದ್ಧಿವಂತರು ಇದ್ದಾರೆ, ಹಾಗಾಗಿ ಸಲಹೆಯನ್ನು ತೆಗೆದುಕೊಳ್ಳುತ್ತೇವೆ, ಮುಂದಿನ ದಿನಗಳಲ್ಲಿ ನೆರವೇರಿಸಿಕೊಡುವುದಾಗಿ ತಿಳಿಸಿದರು.

ಸದಸ್ಯರಾದ ಶ್ರೀ ಸುರೇಂದ್ರ ಷಾರವರು ಮಾತನಾಡಿ ಆಡಿಟ್‌ರವರಿಗೆ ವಾರ್ಷಿಕ ವರದಿ ಪುಟ ಸಂಖ್ಯೆ 26 ರಲ್ಲಿ e) Divergence in Asset classification and provisioning ಇದು ಪೂರ್ತಿ 2024 ರ ರಿಪೋರ್ಟ್ ಆಗಿರುವುದು, 2025ರ ರಿಪೋರ್ಟ್ ಆಗಿರುವುದಿಲ್ಲ, ಇದು ತಪ್ಪಾಗಿದಿಯಾ ಅಥವಾ ಏನಾಗಿದೆ? ಎಂದು ಪ್ರಶ್ನಿಸಿದರು. ಅದಕ್ಕೆ ನಿರ್ದೇಶಕರಾದ ಶ್ರೀ. ಎಸ್ ವಿಶ್ವನಾಥ್‌ರವರು ಮಾತನಾಡಿ NPA Clasification, RBI hierarchy Norms ಎಂದಾಗ ಸದಸ್ಯರಾದ ಶ್ರೀ ಸುರೇಂದ್ರ ಷಾರವರು ಮಾತನಾಡಿ 2024 ರದ್ದು ಬಂದಿದ್ದು, 2025 ರದ್ದು ಬಂದಿರುವುದಿಲ್ಲ ಎಂದಾಗ ನಿರ್ದೇಶಕರಾದ ಶ್ರೀ ಎಸ್ ವಿಶ್ವನಾಥ್‌ರವರು ಮಾತನಾಡಿ 2024 ರದ್ದು ಬಂದಿರುವುದು ಎಂದಾಗ ಸದಸ್ಯರಾದ ಶ್ರೀ ಸುರೇಂದ್ರ ಷಾರವರು 31/3/2024 ರದ್ದು ಪೂರ್ತಿಯಾಗಿ ಬಂದಿದೆ, 2025 ರ ಇನ್ನೂ ಬಂದಿರುವುದಿಲ್ಲ ಎಂದಾಗ ನಿರ್ದೇಶಕರಾದ ಶ್ರೀ. ಎಸ್ ವಿಶ್ವನಾಥ್‌ರವರು ಮಾತನಾಡಿ ಹೌದು, ಆರ್ ಬಿ ಐ ನವರು ಬಂದ ಮೇಲೆ ಹೇಳುತ್ತಾರೆ ಎಂದು ಉತ್ತರಿಸಿದರು.

ಸದಸ್ಯರಾದ ಶ್ರೀ ಆರ್ ಸಿದ್ದಪ್ಪನವರು ಮಾತನಾಡಿ ಒಂದು ಪ್ರಶ್ನೆ ಕೇಳಿದ್ದು ಅದರ ವಿವರ ಬೇಕಾಗಿದೆ ಎಂದು ಹೇಳಿ, ಶಿರಾಗೇಟ್ ನಲ್ಲಿ IDSMT ಯಾವುದೋ forgery ಮಾಡಿ ರೂ.4.00 ಕೋಟಿ ಸಾಲ ಕೊಟ್ಟಿರುವುದಾಗಿ ಆಗಸ್ಟ್ 5 ರಂದು ಮೆಸೇಜ್ ಬಂದಿದೆ ಎಂದಾಗ ನಿರ್ದೇಶಕರಾದ ಶ್ರೀ. ಎಂ ಪಿ ಮಹೇಶ್‌ರವರು ಮಾತನಾಡಿ ಈ ಪ್ರಶ್ನೆ ಒಬ್ಬ ಸದಸ್ಯರು ಲಿಖಿತವಾಗಿ ಕೊಟ್ಟಿದ್ದು, ಆ ಪ್ರಶ್ನೆಗೆ ಉತ್ತರ ಕೊಡುವಾಗ ನಿಮಗೂ ಉತ್ತರ ಸಿಗುತ್ತದೆ, ಲಿಖಿತವಾಗಿ ಕೊಟ್ಟಿರುವುದರಿಂದ ಅದಕ್ಕೆ ಉತ್ತರ ಅಲ್ಲಿಯೇ ಕೊಡುವುದಾಗಿ ತಿಳಿಸಿದರು. ಸದಸ್ಯರಾದ ಶ್ರೀ ಆರ್ ಸಿದ್ದಪ್ಪನವರು ಮಾತನಾಡಿ ಅದರ ವಿವರಣೆ ನೀಡಬೇಕು ಎಂದಾಗ ನಿರ್ದೇಶಕರಾದ ಶ್ರೀ. ಎಂ ಪಿ ಮಹೇಶ್‌ರವರು ಮಾತನಾಡಿ ಪೂರ್ತಿ ವಿವರಣೆ ಸಭೆಗೆ ನೀಡುವುದಾಗಿ ಹೇಳಿದರು, ಸದಸ್ಯರಾದ ಆರ್ ಸಿದ್ದಪ್ಪನವರು ಮಾತನಾಡಿ ಏನು ಉತ್ತರ ನೀಡುತ್ತೀರಾ ಅದರ ಒಂದು ಪ್ರತಿಯನ್ನು ನನಗೆ ಕೊಡಬೇಕು ಎಂದು ಹೇಳಿದಾಗ ನಿರ್ದೇಶಕರಾದ ಶ್ರೀ. ಎಂ ಪಿ ಮಹೇಶ್‌ರವರು ಮಾತನಾಡಿ ಆಗಬಹುದು ಎಂದು ತಿಳಿಸಿದರು.

**8. 2025-26 ನೇ ಸಾಲಿನ ಮುಂಗಡ ಪತ್ರವನ್ನು /ಆಯ ವ್ಯಯದ ಅಂದಾಜು ಪಟ್ಟಿಯನ್ನು ಮಂಜೂರಾತಿಗಾಗಿ ಸಭೆಗೆ ಕೋರಿರುವ ವಿಚಾರ:**

Yearly budget planning is crusial process for any organization, to manage finance security it involves such a financial goals estimating income and allocating resources to achieve objectives. Again Planned well and appropriated we have executed our budget to achieve great goals under the whole report presented here lets go to budget report by our auditor Sri.Vishwanath Sir.

ಬ್ಯಾಂಕಿನ ನಿರ್ದೇಶಕರಾದ ಶ್ರೀ ಎಸ್ ವಿಶ್ವನಾಥ್‌ರವರು ಎಲ್ಲಾ ಸದಸ್ಯರಿಗೂ ನಮಸ್ಕರಿಸುತ್ತಾ 2025-26 ನೇ ಸಾಲಿನ ಬ್ಯಾಂಕಿನ ಮುಂಗಡ ಪತ್ರವನ್ನು ಅಂಗೀಕರಿಸಲು ಸಭೆಯ ಒಪ್ಪಿಗೆಗಾಗಿ ಮಂಡಿಸಿದರು.

ಅ) ಬ್ಯಾಂಕಿನ **2024-25**ನೇ ಸಾಲಿನ ಖರ್ಚು ವೆಚ್ಚಗಳನ್ನು ಅನುಮೋದಿಸಿ **2025-26**ನೇ ಸಾಲಿನ ಬ್ಯಾಂಕಿನ ಮುಂಗಡ ಪತ್ರವನ್ನು

ಒಪ್ಪಿಗೆ ಪಡೆಯಲು ಮಂಡಿಸಿದೆ : (ರೂ. ಗಳಲ್ಲಿ)

| ಕ್ರ ಸಂ | ವಿವರಗಳು | 2024-25ನೇ ಸಾಲಿನ ಮುಂಗಡ ಪತ್ರ ಹಾಗೂ ಖರ್ಚಿನ ವಿವರಗಳು | | 2025-26ನೇ ಸಾಲಿಗೆ ಮಂಜೂರಾತಿಗಾಗಿ |
|---|---|---|---|---|
| | | ಮಂಜೂರಾಗಿದ್ದು | ಖರ್ಚಾಗಿದ್ದು | |
| 1 | ಸಿಬ್ಬಂದಿ ವೆಚ್ಚ | 30,00,00,000.00 | 27,08,77,244.50 | 32,00,00,000.00 |
| 2 | ಅ) ಅಂಚೆ<br>ಆ) ದೂರವಾಣಿ<br>ಇ) ವಿಮೆ | 2,85,00,000.00 | 3,26,787.37<br>6,35,099.49<br>1,89,89,857.21<br>**1,99,51,744.07** | 2,50,00,000.00 |
| 3 | ಶಾಖೆಗಳ ಕಟ್ಟಡದ ಬಾಡಿಗೆ | 4,50,00,000.00 | 4,21,65,848.78 | 4,25,00,000.00 |
| 4 | ಮುದ್ರಣ ಮತ್ತು ಸಲಕರಣೆ | 20,00,000.00 | 9,31,576.65 | 15,00,000.00 |
| 5 | ಅ) ಸಾದಿಲ್ವಾರು<br>ಆ) ಸೇವೆ ಮತ್ತು ನಿರ್ವಹಣೆ | 25,00,000.00<br>4,50,00,000.00 | 18,10,786.00<br>3,08,47,151.03 | 25,00,000.00<br>5,50,00,000.00 |
| 6 | ಸಭೆ, ಸೆಮಿನಾರ್, ತರಬೇತಿ ಮತ್ತು ಇತರೆ | 1,00,00,000.00 | 90,29,740.25 | 1,25,00,000.00 |
| 7 | ವಿದ್ಯುಚ್ಛಕ್ತಿ | 35,00,000.00 | 26,83,131.00 | 30,00,000.00 |
| 8 | ಲೆಕ್ಕ ಪರಿಶೋಧನಾ ವೆಚ್ಚ | 30,00,000.00 | 23,35,199.00 | 30,00,000.00 |
| 9 | ವಾರ್ಷಿಕ ಸಾಮಾನ್ಯ ಸಭೆಯ ವೆಚ್ಚ | 30,00,000.00 | 26,57,348.00 | 35,00,000.00 |
| 10 | ಜಾಹೀರಾತು | 25,00,000.00 | 13,57,660.00 | 25,00,000.00 |
| 11 | ಧಾರ್ಮಿಕ ಹಾಗೂ ಸಾಮಾಜಿಕ ಕಲ್ಯಾಣ ವೆಚ್ಚಗಳು | - | - | - |
| 12 | ಕಾನೂನು ವೆಚ್ಚ | 5,00,000.00 | -54,000.00 | 5,00,000.00 |
| 13 | **ಪ್ರಸ್ತುತವಿರುವ ಎಲ್ಲಾ ಶಾಖೆಗಳಿಗೆ ಗಣಕಯಂತ್ರ ಮತ್ತು ಇತರೆ ಪರಿಕರಗಳು, ತಂತ್ರಾಂಶ, ಯಂತ್ರಾಂಶ ಮತ್ತು ಸೈಬರ್ ಸೆಕ್ಯುರಿಟಿ ಆಳವಡಿಕೆಗೆ ಅಂದಾಜು ವೆಚ್ಚ** | 1,00,00,000.00 | - | 3,60,00,000.000 |
| | **ಒಟ್ಟು** | **44,55,00,000.00** | **38,45,93,429.28** | **47,15,00,000.00** |

**2024-25**ನೇ ಸಾಲಿನಲ್ಲಿ ಮಂಜೂರಾಗಿದ್ದ ಮೊಬಲಗಿಗಿಂತ ಯಾವುದೇ ವೆಚ್ಚಗಳು ಹೆಚ್ಚಾಗಿ ಖರ್ಚಾಗಿರುವುದಿಲ್ಲ ಎಂದು ಸಭೆಗೆ ತಿಳಿಸಿದರು.

ಆ) **2024-25ನೇ ಸಾಲಿನ ಮುಂಗಡ ಪತ್ರವನ್ನು ಅಂಗೀಕರಿಸುವ ಬಗ್ಗೆ :–** (ರೂ. ಗಳಲ್ಲಿ)

| ಕ್ರ. ಸಂ | ವಿವರಗಳು | 2024-25ನೇ ಸಾಲಿಗೆ ಸೂಚಿಸಿದ್ದು | 2024-2025ನೇ ಸಾಲಿಗೆ ಜಮಾ ಬಂದಿರುವುದು / ಖರ್ಚಾಗಿರುವುದು | 2025-26ನೇ ಸಾಲಿಗೆ ಸೂಚಿಸಿರುವುದು |
|---|---|---|---|---|
| **I** | **ಅಂದಾಜು ಆದಾಯ :** | | | |
| 1 | ಸಾಲಗಳು ಮತ್ತು ಮುಂಗಡಗಳ ಮೇಲೆ ಬಡ್ಡಿ | 162,05,00,000.00 | 89,29,81,746.05 | 125,00,00,000.00 |
| 2 | ಹೂಡಿಕೆ ಮತ್ತು ಠೇವಣಿಗಳ ಬಡ್ಡಿ | 71,00,00,000.00 | 57,29,04,271.75 | 54,00,00,000.00 |
| 3 | ದಲ್ಲಾಳಿ ಮತ್ತು ಇತರೆ | 28,50,00,000.00 | 9,89,13,730.93 | 9,00,00,000.00 |
| | **ಒಟ್ಟು** | **261,55,00,000.00** | **156,47,99,748.73** | **188,00,00,000.00** |
| **II** | **ಅಂದಾಜು ಖರ್ಚು :** | | | |
| 1 | ಅ) ನಲ್ಲಿ ವಿವರಿಸಿರುವಂತೆ | 44,55,00,000.00 | 38,45,93,429.28 | 47,15,00,000.00 |
| 2 | ಠೇವಣಿಗಳ ಮೇಲಿನ ಬಡ್ಡಿ | 105,00,00,000.00 | 89,23,40,378.22 | 97,00,00,000.00 |
| 3 | ಸದಸ್ಯರ ಕ್ಷೇಮಾಭಿವೃದ್ಧಿ ವೆಚ್ಚ | 85,00,000.00 | 64,59,425.00 | 75,00,000.00 |
| 4 | ಎ.ಆರ್.ಸಿ.ಐ.ಎಲ್ ವ್ಯವಸ್ಥಾಪನಾ ವೆಚ್ಚ | 3,00,00,000.00 | 1,63,37,491.85 | 1,45,00,000.00 |
| | **ಒಟ್ಟು** | **153,40,00,000.00** | **129,97,30,724.35** | **146,35,00,000.00** |
| **III** | **ಉಳಿತಾಯ (I-II)** | **108,15,00,000.00** | **26,50,69,024.38** | **41,65,00,000.00** |
| **IV** | **ಸವಕಳಿ** | 1,25,00,000.00 | 72,21,156.00 | 1,65,00,000.00 |
| **V** | **ಒಟ್ಟು ಲಾಭ (III-IV)** | **106,90,00,000.00** | **25,78,47,868.38** | **40,00,00,000.00** |
| **VI** | **ತೆರಿಗೆ ಮತ್ತು ಅವಕಾಶಗಳು** | 30,50,00,000.00 | 10,32,58,400.00 | 14,50,00,000.00 |
| | **ನಿವ್ವಳ ಲಾಭ (V- VI)** | **76,40,00,000.00** | **15,45,89,468.38** | **25,50,00,000.00** |

ಸಭೆಯು ಸರ್ವಾನುಮತದಿಂದ ಅನುಮೋದನೆ ಸೂಚಿಸಿತು.

**9. 2024-25 ನೇ ಸಾಲಿನ ನಿವ್ವಳ ಲಾಭದ ವಿಲೇವಾರಿ, ನಿರ್ದಿಷ್ಟ ಮೀಸಲು ಮತ್ತು ಇತರೆ ನಿಧಿಗಳನ್ನು ಸೃಜಿಸುವ ವಿಚಾರ:**

ಬ್ಯಾಂಕಿನ ನಿರ್ದೇಶಕರಾದ ಶ್ರೀ ಎನ್ ಆರ್ ಅಕ್ಷಯ್‌ರವರು ಎಲ್ಲಾ ಸದಸ್ಯರಿಗೂ ನಮಸ್ಕರಿಸುತ್ತಾ 2024-25 ನೇ ಸಾಲಿನ ನಿವ್ವಳ ಲಾಭದ ವಿಲೇವಾರಿ, ನಿರ್ದಿಷ್ಟ ಮೀಸಲು ಮತ್ತು ಇತರೆ ನಿಧಿಗಳನ್ನು ಸೃಜಿಸುವ ವಿಚಾರವನ್ನು ಸಭೆಯ ಅನುಮೋದನೆಗೆ ಮಂಡಿಸಿದರು. ಕಾರ್ಯಕಾರಿ ಮಂಡಳಿಯವರು 2024-25 ನೇ ಸಾಲಿನ ನಿವ್ವಳ ಲಾಭವನ್ನು ಹಂಚಿಕೆ ಮಾಡಲು ಶಿಫಾರಸ್ಸು ಮಾಡಿರುತ್ತಾರೆ. ಬ್ಯಾಂಕು ವರದಿ ವರ್ಷದಲ್ಲಿ ರೂ.15.46 ಕೋಟಿ ಲಾಭ ಗಳಿಸಿದ್ದು ಲಾಭ ಹಂಚಿಕೆಯ ವಿವರ ಈ ಕೆಳಕಂಡಂತಿರುತ್ತದೆ ಎಂದು ಸಭೆಗೆ ಮಂಡಿಸಿದರು. **(ಮೊಬಲಗು ರೂ. ಗಳಲ್ಲಿ)**

| ಕ್ರ ಸಂ | ವಿವರಗಳು | 31-03-2025ಕ್ಕೆ ಇದ್ದ ನಿಧಿಗಳು | ದರ ಶೇ. (%) | 2024-25 ರ ಲಾಭಾಂಶ ಹಂಚಿಕೆಗೆ ಸೂಚಿಸಿರುವುದು | ಲಾಭಾಂಶ ಹಂಚಿಕೆಯಾದ ನಂತರ |
|---|---|---|---|---|---|
| 1 | ಮೀಸಲು / ಆಪದ್ಧನ ನಿಧಿ (ರಿಸರ್ವ್ ಫಂಡ್) | 103,56,55,546.58 | 25 | 3,86,47,367.00 | 1,07,43,02,913.58 |
| 2 | ಸಹಕಾರ ಶಿಕ್ಷಣ ನಿಧಿ | - | 2 | 23,18,842.00 | - |
| 3 | ಕ.ರಾ.ಸ.ಪ.ಬ್ಯಾ.ಮ. ನಿ., ನಿಧಿ | - | 1 | 11,59,421.00 | - |
| 4 | ಕಟ್ಟಡದ ನಿಧಿ | 25,49,26,972.93 | 10 | 1,12,46,384.00 | 26,61,73,356.93 |
| 5 | ಡಿವಿಡೆಂಡ್ * | - | | 3,10,00,000.00 | - |
| 6 | ಸದಸ್ಯರ ಕ್ಷೇಮ ನಿಧಿ | 11,79,67,078.86 | 5 | 56,23,192.00 | 12,35,90,270.86 |
| 7 | ಹೂಡಿಕೆಗಳ ಏರಿಳಿತದ ನಿಧಿ | 20,62,32,205.00 | 10 | 1,12,46,384.00 | 21,74,78,589.00 |

| | | | | | |
|---|---|---|---|---|---|
| 8 | ವಜ್ರ ಮಹೋತ್ಸವ ನಿಧಿ | 53,43,331.27 | 3 | 33,73,915.00 | 87,17,246.27 |
| 9 | ಧರ್ಮದ ನಿಧಿ | 45,50,046.27 | 3 | 33,73,915.00 | 79,23,961.27 |
| 10 | ಪ್ರಚಾರ ನಿಧಿ | 93,55,412.08 | 4 | 44,98,554.00 | 1,38,53,966.08 |
| 11 | ವಿಶೇಷ ಕ್ಷೇತ್ರಕ್ಕಾಗಿ ಕಾಯ್ದಿರಿಸಿದ ನಿಧಿ | 15,15,03,379.00 | – | ಲಾಭ–ನಷ್ಟ ತ:ಖ್ತೆಯಲ್ಲಿ ಅವಕಾಶ | 15,15,03,379.00 |
| 12 | ಮೀಸಲು / ಆಪದ್ಧನ ನಿಧಿ (ಉಳಿದ ಮೊಬಲಗು) | 0.00 | – | 4,21,01,494.38 | 4,21,01,494.38 |
| 13 | ಮರು ಮೌಲ್ಯಮಾಪನ ನಿಧಿ (ನಿವೇಶನ ಮತ್ತು ಕಟ್ಟಡ) | 23,66,52,250.00 | – | - | 23,66,52,250.00 |
| | **ಒಟ್ಟು** | **202,21,86,221.99** | **–** | **15,45,89,468.38** | **214,22,97,427.37** |

* ಡಿವಿಡೆಂಡ್ 10% ಆರ್. ಬಿ. ಐ ಅನುಮೋದನೆಗೆ ಒಳಪಟ್ಟು.

ಸಭೆಯ ಸರ್ವ ಸದಸ್ಯರೂ ಸರ್ವಾನುಮತದಿಂದ ನಿವ್ವಳ ಲಾಭದ ವಿಲೇವಾರಿ, ನಿರ್ದಿಷ್ಟ ಮೀಸಲುಗಳನ್ನು ಅಂಗೀಕರಿಸಿ 2024-25 ನೇ ಸಾಲಿನ ಲಾಭ ವಿಂಗಡನೆಗೆ ಅನುಮೋದನೆಯನ್ನು ನೀಡಿದರು.

## 10. ಉಪವಿಧಿಗಳ ತಿದ್ದುಪಡಿ:–

ಬ್ಯಾಂಕಿನ ನಿರ್ದೇಶಕರಾದ ಶ್ರೀ ಎಂ ದೀಪಕ್‌ರವರು ಸಭೆಗೆ ನಮಸ್ಕರಿಸುತ್ತಾ ಬ್ಯಾಂಕಿನ ಆರ್ಥಿಕ ಪರಿಸ್ಥಿತಿಗೆ ಹಾಗೂ ಬ್ಯಾಂಕಿನ ಹಿತದೃಷ್ಟಿಯಿಂದ ಬೈಲಾ ಕಂಡಿಕೆಗಳನ್ನು ತಿದ್ದುಪಡಿಗೆ ಸಹಕಾರ ಸಂಘಗಳ ನಿಬಂಧಕರಿಗೆ ಮಂಡಿಸುವ ವಿಚಾರವನ್ನು ಸಭೆಯ ಅನುಮೋದನೆಗೆ ಮಂಡಿಸಿದರು.

| ಕ್ರಮ ಸಂಖ್ಯೆ | ಹಾಲಿ ಉಪ ವಿಧಿಗಳ ಸಂಖ್ಯೆ | ಹಾಲಿ ಇರುವುದು | ತಿದ್ದುಪಡಿಗೆ ಸೂಚಿಸಿರುವುದು | ತಿದ್ದುಪಡಿಗೆ ಕಾರಣ |
|---|---|---|---|---|
| **1** | **18** (ಐ) | **ಸದಸ್ಯತ್ವ ಅಂತ್ಯವಾಗುವಿಕೆ** **ಹೊಸ ಸೇರ್ಪಡೆ** | **ಸದಸ್ಯತ್ವ ಅಂತ್ಯವಾಗುವಿಕೆ** (ಐ) ಬ್ಯಾಂಕಿನ ಹಿತಾಸಕ್ತಿಗೆ, ಘನತೆಗೆ ಹಾಗೂ ಗೌರವಕ್ಕೆ ಧಕ್ಕೆ ತರುವಂತಹ ಮತ್ತು ನಷ್ಟ ಉಂಟುಮಾಡುವಂತಹ ಯಾವುದೇ ಚಟುವಟಿಕೆಗಳಲ್ಲಿ ತೊಡಗುವ ಯಾವುದೇ ಸದಸ್ಯನ ಸದಸ್ಯತ್ವವನ್ನು, ಸದಸ್ಯನಿಂದ ಸೂಕ್ತ ಕಾರಣ ಕೇಳಿ ನೋಟೀಸ್ ನೀಡಿ, ಸದಸ್ಯನು ಸಮಂಜಸವಾದ ಕಾರಣ ನೀಡದಿದ್ದಲ್ಲಿ ಸದಸ್ಯತ್ವವನ್ನು ಅಂತ್ಯಗೊಳಿಸುವ ತೀರ್ಮಾನವನ್ನು ಆಡಳಿತ ಮಂಡಳಿಯು ನಿರ್ಧರಿಸತಕ್ಕದ್ದು. | ಬ್ಯಾಂಕಿನ ಹಿತದೃಷ್ಟಿಗಾಗಿ |
| **2** | **22.5** | ಕಿಡ್ನಿ, ಹೃದಯ, ಕ್ಯಾನ್ಸರ್, Liver transplantation, Knee joint replacement ಇವುಗಳ Major ಶಸ್ತ್ರಚಿಕಿತ್ಸೆಗಳಿಗೆ ಒಳಪಟ್ಟಿರುವ ಬ್ಯಾಂಕಿನ ಸದಸ್ಯರು ಮತ್ತು ಸಿಬ್ಬಂದಿಗಳಿಗೆ ರೂ.5,000/-ಗಳಿಂದ ರೂ.50,000/–ಗಳಿಗೆ ಮೀರದಂತೆ, ಕನಿಷ್ಠ 50 ಷೇರುಗಳನ್ನು ಹೊಂದಿರುವ ಹಾಗೂ ಶಸ್ತ್ರ ಚಿಕಿತ್ಸೆಯಾಗಿ ಆರು ತಿಂಗಳ ಒಳಗೆ ದಾಖಲೆಗಳನ್ನು ಸಲ್ಲಿಸುವ ಸದಸ್ಯರಿಗೆ, ಸದಸ್ಯರ ಹಾಗೂ ಸಿಬ್ಬಂದಿ ವರ್ಗದವರ ಕ್ಷೇಮನಿಧಿಯಿಂದ ಅಥವಾ ಬ್ಯಾಂಕಿನ ಲಾಭ–ನಷ್ಟದ ಖಾತೆಗೆ ಖರ್ಚು ಹಾಕಿ ಖಾಯಿಲೆಯ ತೀವ್ರತೆ ಮತ್ತು ವೈದ್ಯಕೀಯ ದೃಢೀಕರಣ ಪತ್ರವನ್ನು | ಕಿಡ್ನಿ, ಹೃದಯ, ಕ್ಯಾನ್ಸರ್, Liver transplantation, Knee Joint replacement ಇವುಗಳ Major ಶಸ್ತ್ರ ಚಿಕಿತ್ಸೆಗಳಿಗೆ ಒಳಪಟ್ಟಿರುವ ಬ್ಯಾಂಕಿನ ಸದಸ್ಯರು ಮತ್ತು ಸಿಬ್ಬಂದಿಗಳಿಗೆ ರೂ.5,000/-ಗಳಿಂದ ರೂ.50,000/-ಗಳಿಗೆ ಮೀರದಂತೆ, ಕನಿಷ್ಠ 50 ಷೇರುಗಳನ್ನು ಹೊಂದಿರುವ, ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ನಿಯಮಿತವಾಗಿ ವ್ಯವಹಾರಗಳನ್ನು ಮಾಡಿರುವ ಹಾಗೂ ಶಸ್ತ್ರ ಚಿಕಿತ್ಸೆಯಾಗಿ ಆರು ತಿಂಗಳ ಒಳಗೆ ದಾಖಲೆಗಳನ್ನು ಸಲ್ಲಿಸುವ ಸದಸ್ಯರು ತಮ್ಮ ಸದಸ್ಯತ್ವದ ಅವಧಿಯಲ್ಲಿ ಒಂದು ಬಾರಿ ಮಾತ್ರ ಸಹಾಯಧನ ಪಡೆಯಲು ಅವಕಾಶವಿದ್ದು, ಸದಸ್ಯರ ಹಾಗೂ ಸಿಬ್ಬಂದಿ | ಬ್ಯಾಂಕಿನ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ |

| | | | | |
|---|---|---|---|---|
| | | ಪರಿಗಣಿಸಿ ಸಹಾಯಧನ ನೀಡಬಹುದು. | ವರ್ಗದವರ ಕ್ಷೇಮನಿಧಿಯಿಂದ ಅಥವಾ ಬ್ಯಾಂಕಿನ ಲಾಭ-ನಷ್ಟದ ಖಾತೆಗೆ ಖರ್ಚು ಹಾಕಿ ಖಾಯಿಲೆಯ ತೀವ್ರತೆ ಮತ್ತು ವೈದ್ಯಕೀಯ ದೃಢೀಕರಣ ಪತ್ರವನ್ನು ಪರಿಗಣಿಸಿ ಸಹಾಯಧನ ನೀಡಬಹುದು. | |
| **3** | **78**<br><br>**78.1**<br><br>**78.2** | **ಪಡೆಯುವ ಸಾಲಕ್ಕೆ ಷೇರುಗಳ ಜೋಡಣೆ ಪ್ರಮಾಣ:**<br><br>ಸದಸ್ಯನಾದವನು ಸಾಲವನ್ನು ಪಡೆಯುವಲ್ಲಿ ಈ ಕೆಳಗೆ ಕಂಡಂತೆ ಷೇರುಗಳನ್ನು ಅಗತ್ಯವಾಗಿ ಪಡೆದಿರಲೇಬೇಕು.<br><br>ಆಧಾರರಹಿತ ಸಾಲಗಳಾದ ಮೀರೆಳೆತ ಸಾಲ, ನಗದುದ್ದರಿ ಸಾಲ, ಜಾಮೀನಿನ ಮೇಲೆ ಪಡೆದ ಸಾಲ, ಬಿಲ್ಲುಗಳ ಮತ್ತು ಚೆಕ್ಕುಗಳ ಖರೀದಿ ಅಥವಾ ವಟಾವಣೆ ಮಾಡಿ ಸಾಲವನ್ನು ಪಡೆಯುವವರು ಸಾಲದ ಮೊಬಲಗಿನ ಶೇಕಡಾ 5 ರಷ್ಟು ಷೇರುಗಳನ್ನು ಪಡೆದಿರಬೇಕು.<br><br>ವಾಸ್ತವಿಕ ಭದ್ರತೆಯ ಮೇಲೆ ಸಾಲ ಪಡೆಯುವವರು ಆ ಸಾಲದ ಶೇಕಡಾ ಎರಡೂವರೆಯಷ್ಟು ಷೇರುಗಳನ್ನು ಪಡೆದಿರಬೇಕು.<br><br>(ಟಿಪ್ಪಣಿ : ಸಾಲಗಳ ಮೇಲೆ ಷೇರು ಜೋಡಣೆ ಹೊಂದಬೇಕೆಂಬ ಈ ನಿರ್ಬಂಧವು ನಾಮಮಾತ್ರ ಸದಸ್ಯರಿಗೆ ಅನ್ವಯಿಸುವುದಿಲ್ಲ) | **ಪಡೆಯುವ ಸಾಲಕ್ಕೆ ಷೇರುಗಳ ಜೋಡಣೆ ಪ್ರಮಾಣ:**<br><br>ಸದಸ್ಯನಾದವನು ಸಾಲವನ್ನು ಪಡೆಯುವಲ್ಲಿ ಈ ಕೆಳಗೆ ಕಂಡಂತೆ ಷೇರುಗಳನ್ನು ಅಗತ್ಯವಾಗಿ ಪಡೆದಿರಲೇಬೇಕು.<br><br>ಆಧಾರರಹಿತ ಸಾಲಗಳಾದ ಮೀರೆಳೆತ ಸಾಲ, ನಗದುದ್ದರಿ ಸಾಲ, ಜಾಮೀನಿನ ಮೇಲೆ ಪಡೆದ ಸಾಲ, ಬಿಲ್ಲುಗಳ ಮತ್ತು ಚೆಕ್ಕುಗಳ ಖರೀದಿ ಅಥವಾ ವಟಾವಣೆ ಮಾಡಿ ಸಾಲವನ್ನು ಪಡೆಯುವವರು ಸಾಲದ ಮೊಬಲಗಿನ ಶೇಕಡಾ 5 ರಷ್ಟು ಷೇರುಗಳನ್ನು ಪಡೆದಿರಬೇಕು.<br><br>ವಾಸ್ತವಿಕ ಭದ್ರತೆಯ ಮೇಲೆ ಸಾಲ ಪಡೆಯುವವರು ಆ ಸಾಲದ ಶೇಕಡಾ ಎರಡೂವರೆಯಷ್ಟು ಷೇರುಗಳನ್ನು ಪಡೆದಿರಬೇಕು.<br><br>(ಟಿಪ್ಪಣಿ : ಸಾಲಗಳ ಮೇಲೆ ಷೇರು ಜೋಡಣೆ ಹೊಂದಬೇಕೆಂಬ ಈ ನಿರ್ಬಂಧವು ನಾಮಮಾತ್ರ ಸದಸ್ಯರಿಗೆ ಅನ್ವಯಿಸುವುದಿಲ್ಲ ಹಾಗೂ ಷೇರು ಜೋಡಣೆಯ ಪ್ರಮಾಣವನ್ನು ಭಾರತೀಯ ರಿಜರ್ವ್ ಬ್ಯಾಂಕ್ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆಯಂತೆ ನಿಗಧಿಪಡಿಸುವುದು) | ಬ್ಯಾಂಕಿನ ಆಡಳಿತಾತ್ಮಕ ಕಾರಣಕ್ಕಾಗಿ |

**ಇದಕ್ಕೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.**

ನಂತರ ಸದಸ್ಯರಾದ ಶ್ರೀ ಸಿ ಎಸ್ ನೀಲಕಂಠರವರು ಕ್ರಮ ಸಂಖ್ಯೆ 1 (18) ಹೊಸ ಸೇರ್ಪಡೆಯಲ್ಲಿ ಸದಸ್ಯತ್ವ ಅಂತ್ಯವಾಗುವಿಕೆಯು ಈ ಮಾಹಿತಿಯನ್ನು ತಿದ್ದುಪಡಿಮಾಡುವುದಕ್ಕೆ ಕೋ-ಆಪರೇಟಿವ್ ಸೆಕ್ಟರ್‌ನಲ್ಲಿ ಈ ಮಾಹಿತಿಯನ್ನು ಮುಂಚೆಯೇ ತೆಗೆದುಕೊಂಡು ಹೋಗಿದ್ದೀರಾ ಅಥವಾ ಇಲ್ಲವಾ? ಇದು Provision ನಲ್ಲಿ ಇದೆಯಾ ಅಥವಾ ಇಲ್ಲವಾ,? ಈಗ ವಾರ್ಷಿಕ ಸಾಮಾನ್ಯ ಸಭೆಯ ಅನುಮತಿ ತೆಗೆದುಕೊಂಡರೂ ಸಹ ನಾಳೆ ಬೆಳಗ್ಗೆ ಯಾರಾದರೂ ಕೋರ್ಟ್ ಅಥವಾ ಕಛೇರಿ ಎಂದು ಓಡಾಡುವುದು ಬೇಡ ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್ ರವರು ಮಾತನಾಡಿ ಹಿಂದಿನ ವಾರ್ಷಿಕ ಸಭೆ ಅಲ್ಲ ಅದರ ಹಿಂದಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಇಡೀ ಸಭೆಯು ಒಬ್ಬ ಸದಸ್ಯನನ್ನು ಸದಸ್ಯತ್ವದಿಂದ ವಜಾ ಮಾಡಬೇಕು ಎಂದು ಸಭೆಯು ಸೂಚಿಸಿತು. ಅದರ ಮೇರೆಗೆ ಅವರನ್ನು ಸದಸ್ಯತ್ವವನ್ನು ವಜಾ ಮಾಡಿದ್ದೇವು. ಅದರ ಮೇರೆಗೆ ಅವರು ಕರ್ನಾಟಕ ಮೇಲ್ಮವಿ ನ್ಯಾಯಾಧೀಕರಣಗೆ ಹೋಗಿ ಮತ್ತೆ ಸದಸ್ಯತ್ವನ್ನು ವಾಪಸ್ಸು ತೆಗೆದುಕೊಂಡು ಬಂದರು. ಕಳೆದ 62 ವರ್ಷಗಳಿಗೂ ಮುಂಚೆ ನಮ್ಮ ಎ ಕೆ ಪಾರ್ಶ್ವನಾಥ್‌ರವರು, ಆರ್ ಜೆ ಅನಂತರಾಜಯ್ಯರವರು, ಎನ್ ಆರ್ ಜಗದೀಶ್‌ರವರು, ಶ್ರೀನಿವಾಸ ಶೆಟ್ಟರು ನಮ್ಮ ವರ್ತಕರ ಸಮುದಾಯಕ್ಕೆ ಅನುಕೂಲವಾಗಲಿ ಎಂದು ಈ ಬ್ಯಾಂಕನ್ನು ಸ್ಥಾಪನೆ ಮಾಡಿದರು. ಒಂದು ಆಶ್ಚರ್ಯಕರ ಸಂಗತಿಯೇನೆಂದರೆ ಆಗ ಸದಸ್ಯರುಗಳನ್ನು ತೆಗೆಯುವಂತಹ ಮನೋಭಾವ ಆವತ್ತಿನ ಹಿರಿಯರಿಗೆ ಇರಲಿಲ್ಲ. ಬೈಲಾದಲ್ಲಿ Adopt ಮಾಡಿಕೊಂಡಿರಲಿಲ್ಲ. ಕಾರಣವೇನೆಂದರೆ ಒಳ್ಳೇಯ

ಸದಸ್ಯರುಗಳನ್ನು ಸೇರಿಸಿಕೊಂಡು ಅವರಿಗೆ ಅನುಕೂಲ ಮಾಡಿಕೊಡಬೇಕು, ಬ್ಯಾಂಕನ್ನು ಅಭಿವೃದ್ಧಿಗೊಳಿಸಬೇಕು ಎನ್ನುವ ಧ್ಯೇಯೋದ್ದೇಶ ನಮ್ಮ ವರ್ತಕರ ಸಮುದಾಯದಲ್ಲಿ ಇತ್ತು. ಇತ್ತೀಚೆಗೆ ಕೆಲವು ಸದಸ್ಯರು ಬ್ಯಾಂಕಿನ ಹಿತಾಸಕ್ತಿಗೆ ತೊಂದರೆ ಮಾಡುವವರು, ವ್ಯತಿರಿಕ್ತವಾಗಿ ನಡೆದುಕೊಳ್ಳುವವರು ಮತ್ತು ಬ್ಯಾಂಕಿನ ಘನತೆಗೆ ಚ್ಯುತಿ ತರುವವರನ್ನು ಸದಸ್ಯತ್ವದಿಂದ ತೆಗೆಯುವುದಕ್ಕೆ ನಮ್ಮ ಬೈಲಾದಲ್ಲಿ ತಿದ್ದುಪಡಿ ಮಾಡಿ ಆ ತಿದ್ದುಪಡಿ ಮುಖಾಂತರ ಆ ಸದಸ್ಯತ್ವವನ್ನು ವಜಾ ಮಾಡಬೇಕಾಗಿರುವುದು ಕಾನೂನು ರೀತಿಯ ಕ್ರಮ. ಹಾಗಾಗಿ ಈ ಬೈಲಾವನ್ನು ತಿದ್ದುಪಡಿಗೆ ಸೂಚಿಸಿದ್ದು, ಮಾನ್ಯ ಸದಸ್ಯರೆಲ್ಲರೂ ಸಹ ಒಪ್ಪಿಗೆಗೆ ನೀಡಬೇಕೆಂದು ಸಭೆಯಲ್ಲಿ ಕೇಳಿದರು. ಸದರಿ ತಿದ್ದುಪಡಿಯನ್ನು ಕಾನೂನು ಸಲಹೆಗಾರರಿಂದ ಸಲಹೆಯನ್ನು ಪಡೆಯಲಾಗಿದೆ ಎಂದು ತಿಳಿಸಿದಾಗ ಸದಸ್ಯರಾದ ಶ್ರೀ ಸಿ ಎಸ್ ನೀಲಕಂಠರವರು ಮಾತನಾಡಿ ಸದಸ್ಯರನ್ನು ಸದಸ್ಯತ್ವದಿಂದ ವಜಾ ಮಾಡಿದಾಗ ಅವರು ಕೋರ್ಟ್ ಅಥವಾ ಕಛೇರಿ ಹೋದಾಗ ಅದನ್ನು Avoid ಮಾಡುವುದಕ್ಕೆ ಏನು Precaution ತೆಗೆದುಕೊಂಡಿದ್ದಿರಾ? ಎಂದು ಕೇಳಿದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಪ್ರಜಾಪ್ರಭುತ್ವದ ಅಡಿಯಲ್ಲಿ ಸಂವಿಧಾನ ರಚನೆಯಾಗಿರುವುದು, ಕೋರ್ಟ್ ಅಥವಾ ಕಛೇರಿಗೆ ಹೋಗುವುದಕ್ಕೆ ಅವಕಾಶ ಇರುವುದರಿಂದ ಅದನ್ನು ಫೇಸ್ ಮಾಡಬೇಕಾಗಿರುತ್ತದೆ ಎಂದು ಬೈಲಾತಿದ್ದುಪಡಿಯ ವಿಚಾರವಾಗಿ ಸಭೆಯ ಒಪ್ಪಿಗೆಯನ್ನು ಕೇಳಿದಾಗ ಸಭೆಯು ಸರ್ವಾನುಮತದಿಂದ ಬೈಲಾ ತಿದ್ದುಪಡಿಗೆ ಒಪ್ಪಿಗೆಯನ್ನು ಸೂಚಿಸಿತು.

ನಂತರ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪರವರು ಬೈಲಾ ಸಂಖ್ಯೆ 78.1 ರಲ್ಲಿ ಆಧಾರರಹಿತ ಸಾಲಗಳಾದ ಮೀರೆಳೆತ ಸಾಲ, ನಗದುದ್ದರಿ ಸಾಲ, ಅಂದರೆ ಏನು ಎಂದು ಕೇಳಿದರು. ಅದಕ್ಕೆ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಆಧಾರ ರಹಿತ ಸಾಲ ಅಂದರೆ ಜಂಟಿ ಸಾಲ ಮತ್ತು ಎಸ್ ಬಿ ಎಲ್ ಸಾಲ ಅಂದರೆ ಪ್ರಾಪರ್ಟಿಗಳನ್ನು ತೆಗೆದುಕೊಳ್ಳದೇ ಇರುವುದು ಎಂದಾಗ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪರವರು ಮುಂದುವರೆದು ಮಾತನಾಡಿ ಆಧಾರ ರಹಿತ ಸಾಲ ಅಂದರೆ ಜಂಟಿ ಸಾಲ ಸರಿ, ಈ ಮೀರೆಳೆತ ಸಾಲ, ನಗದುದ್ದರಿ ಸಾಲ ಅಂದರೆ ಏನು, ಅದಕ್ಕೆ ಸೆಕ್ಯೂರಿಟಿ ಇಲ್ಲವಾ ಎಂದು ಕೇಳಿದಾಗ ಬ್ಯಾಂಕಿನ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಜಂಟಿಸಾಲವನ್ನು ನಮ್ಮ ಬ್ಯಾಂಕಿನ ಸದಸ್ಯರುಗಳಿಗೆ ಕೊಡುವುದು, ಜಂಟಿ ಸಾಲ ಅಲ್ಲ ಆಧಾರರಹಿತ ಸಾಲಗಳಾದ ಮೀರೆಳೆತ ಸಾಲ ಅಂದರೆ Temporary OD ಎಂದಾಗ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪರವರು ಮಾತನಾಡಿ ಅದಕ್ಕೆ ಸೆಕ್ಯೂರಿಟಿ ಇಲ್ಲವಾ ಎಂದು ಕೇಳಿದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಅದಕ್ಕೆ PL Security ಇರುತ್ತದೆ ಎಂದು ಹೇಳಿದಾಗ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪರವರು ಮಾತನಾಡಿ ಅದು ಬೈಲಾದಲ್ಲಿ ಕ್ಲಿಯರ್ ಆಗಿ ಇಲ್ಲ ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಅದನ್ನು ಸರಿಪಡಿಸಿಕೊಳ್ಳುತ್ತೇವೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಪಿ ಸದಾಶಿವಯ್ಯರವರು ಮಾತನಾಡಿ ಕಿಡ್ನಿ, ಹೃದಯ ತೊಂದರೆ, ಕ್ಯಾನ್ಸರ್, ಲಿವರ್ Transplantation ಗಳಂತಹ ಖಾಯಿಲೆಗಳಿರುವ ಸದಸ್ಯರುಗಳು ಕಡಿಮೆ ಸಂಖ್ಯೆಯಲ್ಲಿ ಬರುತ್ತಾರೆ. ದಯಮಾಡಿ ಪ್ರಾವಿಷನ್‌ನಲ್ಲಿ ಇದ್ದರೆ ರೂ.50.00 ಸಾವಿರದಿಂದ ರೂ.1.00 ಲಕ್ಷದವರೆಗೆ ಮಾಡಿದರೆ ನಮ್ಮ ಬ್ಯಾಂಕಿನ ಸದಸ್ಯರಿಗೆ ಅನುಕೂಲವಾಗುತ್ತದೆ. ಎಲ್ಲಾ ಸದಸ್ಯರುಗಳ ಹತ್ತಿರ General Insurance ಇರುವುದಿಲ್ಲವೆಂದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ತಾವು ನೀಡಿರುವ ಸಲಹೆ ಸರಿ ಇದೆ. ಇದನ್ನು ಚರ್ಚೆ ಮಾಡುತ್ತೇವೆ ಎಂದರು. ಸದಸ್ಯರಾದ ಶ್ರೀ ಪಿ ಸದಾಶಿವಯ್ಯರವರು ಮುಂದುವರೆಸಿ ಮೆಡಿಸಿನ್‌ಗೆ ಸಂಬಂಧಪಟ್ಟ ಹಾಗೇ ಸದಸ್ಯರು Minimum ರೂ.5000/- ಷೇರುಗಳನ್ನು ಹೊಂದಿರಬೇಕು ಎನ್ನುವುದು ಬೇಡ. ಒಂದು ಷೇರನ್ನು ಹೊಂದಿರುವವರು ಬ್ಯಾಂಕಿನ ಮೆಂಬರ್. ಐದು ಷೇರುಗಳನ್ನು ಹೊಂದಿರುವವರು ಸಹ ಬ್ಯಾಂಕಿನ ಮೆಂಬರ್. ಆದರೆ ಅವರಿಗೆ ವೈದ್ಯಕೀಯ ಸೌಲಭ್ಯ ಸಿಗುವ ಹಾಗೇ ಮಾಡಿ, ಇದು ನಿಮ್ಮ ಆರ್ ಬಿ ಐ ನಲ್ಲಿ ಕಾನೂನು ವ್ಯಾಪ್ತಿಗೆ ಬರುವಂತಹದಾದರೇ ಮಾಡಿ, ಕಾನೂನು ವ್ಯಾಪ್ತಿಗೆ ಮೀರಿ ಏನು ಮಾಡುವುದು ಬೇಡ ಎಂದು ಹೇಳಿದರು.

ನಂತರ ಸದಸ್ಯರಾದ ಶ್ರೀ ಜಿನ್ನಪ್ಪ ಎ ಹೊಸಮನಿ ಮಾತನಾಡಿ ಟಿಜಿಎಂಸಿ ಮೆಡಿಕಲ್ ಟ್ರಸ್ಟ್ ಓಪನ್ ಆಗಿದಾಗಿನಿಂದ ಇವತ್ತಿನವರೆಗೂ ರೂ.1500/-ಗಳ ಔಷಧಿಯನ್ನು ಕೊಡುತ್ತಿದ್ದೀರಾ? ಮೆಡಿಸಿನ್ ಬೆಲೆ ತುಂಬಾ ಜಾಸ್ತಿ ಆಗಿದೆ. ರೂ.1500/– ಇರುವುದನ್ನು ಸ್ವಲ್ಪ ಜಾಸ್ತಿ ಮಾಡಿಕೊಡಬೇಕೆಂದು ಕೇಳಿಕೊಂಡಾಗ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ತಾವು ಕೇಳುತ್ತಿರುವ ಪ್ರಶ್ನೆಯನ್ನು ಈಗಾಗಲೇ ಒಬ್ಬ ಸದಸ್ಯರು ಕೇಳಿದ್ದು ನಂತರ ಚರ್ಚೆ ಮಾಡುತ್ತೇವೆ ಎಂದಾಗ ಸದಸ್ಯರಾದ ಶ್ರೀ ಜಿನ್ನಪ್ಪ ಎ ಹೊಸಮನಿರವರು ಮುಂದುವರೆಸಿ ಧಾನ್ಯ ವರ್ತಕರು ಬ್ಯಾಂಕನ್ನು ಕಟ್ಟಿರುವುದು, ನೆನ್ನೆ ಮೊನ್ನೆ ಎಫ್ ಡಿ ಇಟ್ಟಿರುವವರು ಈ ಬ್ಯಾಂಕನ್ನು ಕಟ್ಟಿರುವುದಿಲ್ಲ, ನೀವು ಬ್ಯಾಂಕಿನ ಸಂಘದ ಸದಸ್ಯರಿಗೆ ಮೆಡಿಕಲ್ ಟ್ರಸ್ಟ್‌ನಲ್ಲಿ ರೂ.5000/-ಗಳ ಷೇರುಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದಿರಾ? ಸಂಘದ ಸದಸ್ಯರಿಗೆ ಅದನ್ನು Insist ಮಾಡಬೇಡಿ, ಇವತ್ತು ಬಂದಿರುವವರಿಗೆ ಅದು ಉತ್ತಮವಾಗಿದ್ದರೆ Insist ಮಾಡಿ. 63ನೇ ಇಸವಿಯಿಂದ ಸಂಘದ ಸದಸ್ಯರು ಬ್ಯಾಂಕನ್ನು ಕಟ್ಟಿದ್ದಾರೆ. ಕಟ್ಟಿರುವವರಿಗೆ ಪ್ರಾವಿಷನ್ ಕೊಟ್ಟು ರೂ.5000/-ಗಳ ಷೇರುಗಳನ್ನು ಕೇಳಬೇಡಿ. ಇವತ್ತು ನೆನ್ನೆ ಮೊನ್ನೆ ಎಫ್ ಡಿ ಇಟ್ಟಿರುವವರಿಗೆ ಕೇಳಿ ಅವರ ಹತ್ತಿರ ದುಡ್ಡು ಇರುತ್ತದೆ. ಅವರು ರೂ.40.00

ಲಕ್ಷ ಬಂದರೆ ರೂ.20.00 ಲಕ್ಷ ಎಫ್ ಡಿ ಇಡುತ್ತಾರೆ. ಅವರಿಗೆ ಮೆಡಿಸಿನ್ ಸಿಗುತ್ತದೆ. ಮರ್ಚೆಂಟ್ಸ್ ಮತ್ತು ಮಾರ್ಕೆಂಟ್ ವ್ಯಾಪಾರಸ್ಥರಿಗೆ ಷೇರು ಹಣವನ್ನು ಕಟ್ಟುವುದಕ್ಕೆ ಕಷ್ಟ ಆಗುತ್ತದೆ. ಆದ್ದರಿಂದ Insist ಮಾಡಬೇಡಿ ಎಂದು ಕೇಳಿಕೊಂಡರು.

ನಂತರ ಸದಸ್ಯರಾದ ಶ್ರೀ ಸಿ ಎಸ್ ನೀಲಕಂಠರವರು ಮಾತನಾಡಿ ಬೈಲಾ ತಿದ್ದುಪಡಿ ಸಂಖ್ಯೆ 22.5 ರಲ್ಲಿ ಕಿಡ್ನಿ, ಕ್ಯಾನ್ಸರ್, ಲಿವರ್ ಎನ್ನುವ ಬೈಲಾ ತಿದ್ದುಪಡಿಯಲ್ಲಿ ಒಂದು ಬಾರಿ ಮಾತ್ರ ಸಹಾಯಧನ ಪಡೆಯಲು ಅವಕಾಶ ಎನ್ನುವುದನ್ನು ತಿದ್ದುಪಡಿ ಮಾಡಲು ಸೂಚಿಸಿದ್ದು, ದೇವರು ಕೊಟ್ಟಿರುವುದು 2 ಕೈ, 2 ಕಣ್ಣು, 2 ಕಾಲು ಒಂದು ಆಪರೇಷನ್ ಆದ ಮೇಲೆ ತಾವು ಸಹಾಯಧನ ನೀಡುತ್ತೀದ್ದೀರಾ? ಎರಡನೇ ಆಪರೇಷನ್ ಆದ ಮೇಲೆ ಸಹಾಯಧನ ನೀಡುವುದಿಲ್ಲವೆಂದು ಹೇಳುತ್ತಿದ್ದಿರಾ? 2nd ಆಪರೇಷನ್ ಆದ ಮೇಲೆ ಅದರಲ್ಲಿ ಅರ್ಧ ಕೊಡಿ, ಏನು ತೊಂದರೆ ಇಲ್ಲ ಎಂದಾಗ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ನಮ್ಮಲ್ಲಿ ಈಗ 13000 ಸಾವಿರ ಮೆಂಬರ್ಸ್ ಇದ್ದಾರೆ, ಈಗಾಗಲೇ ಬ್ಯಾಂಕಿನಿಂದ ನೀಡುತ್ತಿರುವ Facilities 13000 ಜನಕ್ಕೂ ಅನ್ವಯಿಸುತ್ತದೆ. ಈಗ ಒಂದೆರಡು ಫೈಲ್ ಬಂದಿದೆ, ಬಲಗಾಲು ಮಾಡಿಸಿದ್ದೇವೆ, 3 ತಿಂಗಳ ನಂತರ ಎಡಗಾಲು ಎಂದು ಬಂದಾಗ ಒಬ್ಬರಿಗೆ ನಾವು ಅಷ್ಟೊಂದು Facilities ಕೊಡುವುದಕ್ಕೆ ನಮಗೆ ಶಕ್ತಿ ಇಲ್ಲ, ಹಾಗಾಗಿ ಈಗಾಗಲೇ ನೀಡುತ್ತಿರುವ Facilities ಎಲ್ಲಾ ಸದಸ್ಯರಿಗೆ ಸಿಗಬೇಕು ಎನ್ನುವುದು ನಮ್ಮ ಉದ್ದೇಶ. Major Operations ಗಳಿಗೆ ಒಂದು ಬಾರಿ ರೂ.5000/- ಗಳಿಂದ ರೂ.50000/-ಗಳವರೆಗೆ ನೀಡುತ್ತಿದ್ದು, ಈಗಾಗಲೇ ಸಭೆಯಲ್ಲಿ ಸದಸ್ಯರೊಬ್ಬರು ರೂ.1.00 ಲಕ್ಷದವರೆಗೆ ನೀಡಿ ಎಂದು ಕೇಳಿದರು. ಅದನ್ನು ಚರ್ಚೆ ಮಾಡಿ Department ಒಪ್ಪಿಕೊಂಡರೆ ಅದನ್ನು Enhance ಮಾಡಲು ಪ್ರಯತ್ನ ಮಾಡುತ್ತೇವೆ ಎಂದು ಹೇಳಿದಾಗ ಸದಸ್ಯರಾದ ಶ್ರೀ ಸಿ ಎಸ್ ನೀಲಕಂಠರವರು ಮಾತನಾಡಿ 2nd ಆಪರೇಷನ್‌ಗೆ ರೂ.50000/- ದಲ್ಲಿ ಅರ್ಧ ಅಂದರೆ ರೂ.25000/- ಕೊಡಿ ಎಂದು ಕೇಳಿದಾಗ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದ ಮೂರ್ತಿರವರು ಮಾತನಾಡಿ ಆ ರೀತಿ ಕೊಡುತ್ತಿಲ್ಲ, ಡಾಕ್ಟರ್ Recommend ಮಾಡಿದ ಮೇಲೆ ನೀಡುತ್ತೀದ್ದೇವೆ ಎಂದು ಉತ್ತರಿಸಿದರು.

ಮತ್ತೊಬ್ಬ ಸದಸ್ಯರಾದ ಶ್ರೀ ಎನ್ ಡಿ ವಿಜಯ್ ಪ್ರಕಾಶ್‌ರವರು ಮಾತನಾಡಿ ಬೇರೆ ಬ್ಯಾಂಕಿನ ಒಬ್ಬ ಸದಸ್ಯನಿಗೆ ಬ್ಯಾಂಕಿನಿಂದ Insurance ಮಾಡಿಸಿರುತ್ತಾರೆ. ಆ ಸದಸ್ಯನಿಗೆ Accident ಆದರೆ ಬ್ಯಾಂಕಿನಿಂದ Insurance ಕವರ್ ಆಗುತ್ತದೆ. ಅದೇ ರೀತಿ ಬ್ಯಾಂಕಿನಲ್ಲಿ Insurance ವಿಚಾರವನ್ನು ಪರಿಶೀಲನೆ ಮಾಡಿ ಎಂದು ಕೇಳಿಕೊಂಡಾಗ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಪರಿಶೀಲನೆ ಮಾಡುವುದಾಗಿ ತಿಳಿಸಿದರು.

ನಂತರ ಸದಸ್ಯರಾದ ಶ್ರೀ ಜಿ ಎಸ್ ಬಸವರಾಜು ರವರು ಮಾತನಾಡಿ ಈ ಮಹಾಸಭೆಯಲ್ಲಿ ಬೈಲಾ ತಿದ್ದುಪಡಿ ಇದೆ. ಬೈಲಾ ತಿದ್ದಿಪಡಿ ಇಟ್ಟಾಗ ಅದು Approval ಆಗಬೇಕೆಂದರೆ ಬ್ಯಾಂಕಿನ ಬೈಲಾ ಓದಿರುವ ಪ್ರಕಾರ ಸಭೆಯಲ್ಲಿ ಹಾಲಿ ಬ್ಯಾಂಕಿನ ಸದಸ್ಯರು ಇರುವ ಪೈಕಿ ಶೇಕಡಾ 10% ಇರಬೇಕು ಅಥವಾ ಒಂದು ಸಾವಿರ ಸಂಖ್ಯೆ ಕಡ್ಡಾಯವಾಗಿ ಇರಬೇಕು ಅನ್ನುವುದು ಬ್ಯಾಂಕಿನ ಬೈಲಾದಲ್ಲಿ ಇರುವಂತಹ ವಿಚಾರ. ಹಾಗಾಗಿ ಈ ಸಭೆಯಲ್ಲಿ ಮಂಡಿಸಿರುವ ಬೈಲಾ ತಿದ್ದುಪಡಿಗೆ ಬ್ಯಾಂಕಿನ ಸದಸ್ಯರೆಲ್ಲರೂ ಸಿಬ್ಬಂದಿಗಳನ್ನು ಹೊರಗಡೆ ಇರಿಸಿ ಒಂದು ಸಾವಿರ ಸಂಖ್ಯೆಯನ್ನು ಸಭೆಯಲ್ಲಿ ಕೋರಂ ತೋರಿಸಿದ ನಂತರ Approval ತೆಗೆದುಕೊಳ್ಳಬೇಕು ಎಂದು ಸಭೆಗೆ ಹೇಳಿದಾಗ ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್‌ರವರು ಮಾತನಾಡಿ ಈಗಾಗಲೇ ಸಭೆಯಲ್ಲಿ ಕೋರಂ ಇದೆ, ಸದಸ್ಯರಾದ ಶ್ರೀ ಜಿ ಸಿ ವೀರೇಶ್ ಬಾಬುರವರು ಮಾತನಾಡಿ ಸಭೆಯಲ್ಲಿ ಪೂರ್ತಿಯಾಗಿ Strength ತೋರಿಸುವುದಕ್ಕೆ ಆಗುವುದಿಲ್ಲ. ಅಲ್ಲಿ ರಿಜಿಸ್ಟರ್ ಬುಕ್‌ನಲ್ಲಿ ನೋಡಿಕೊಳ್ಳಬಹುದು ಎಂದು ಹೇಳಿದರು. ನಂತರ ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್‌ರವರು ಮಾತನಾಡಿ ಈಗಾಗಲೇ ನಮ್ಮ ಎಲ್ಲಾ ಸದಸ್ಯರೂ ಕೋರಂ ಪುಸ್ತಕಕ್ಕೆ ಸಹಿ ಮಾಡಿ ಎಲ್ಲರೂ ಸಭೆಯಲ್ಲಿ ಇದ್ದು ಕೋರಂ ಇರುತ್ತದೆ ಎಂದು ಸ್ಪಷ್ಟಪಡಿಸಿ ಸಭೆಯಲ್ಲಿದ್ದ ಸದಸ್ಯರುಗಳು ಬೈಲಾ ತಿದ್ದುಪಡಿಯನ್ನು ಸರ್ವಾನುಮತದಿಂದ ಅಂಗೀಕರಿಸಿದರು.

ಸದಸ್ಯರಾದ ಶ್ರೀ ಸುರೇಂದ್ರ ಷಾರವರು ಮಾತನಾಡಿ ಯಾವುದೇ ಸಂಸ್ಥೆಯಲ್ಲಿ Attendence Book ನಲ್ಲಿ ಎಷ್ಟು ಜನ ಸಹಿ ಮಾಡಿರುತ್ತಾರೋ ಅದೇ ಲೆಕ್ಕ, ಸದಸ್ಯರು ಬರುತ್ತಾ ಹೋಗುತ್ತಾ ಇರುತ್ತಾರೆ, ಯಾವುದೇ ಬೈಲಾವನ್ನು ತೆಗೆದುಕೊಂಡಾಗ ತಲೆ ಎಣಿಸು ಅಂತ ಎಲ್ಲೂ ಇಲ್ಲ ಎಂದು ಸ್ಪಷ್ಟಪಡಿಸಿದರು.

ಸದಸ್ಯರಾದ ಶ್ರೀ ಆರ್ ಸಿದ್ದಪ್ಪರವರು ಮಾತನಾಡಿ ಸದಸ್ಯರ ಕ್ಷೇಮ ನಿಧಿ ರೂ.1500/-ಗಳ ಔಷಧಿಗಳನ್ನು ನೀಡುತ್ತಿದ್ದು, ಅದರಲ್ಲಿ ಡಾಕ್ಟರ್ ಬರೆದು ಕೊಡುವಂತಹ ಕೆಲವೊಂದು ಔಷಧಿಗಳು ನಿಮ್ಮಲ್ಲಿ ಇರುವುದಿಲ್ಲ. ಈ ರೀತಿ ವರ್ಷದ ಕೊನೆಯಲ್ಲಿ ಕೆಲವೊಂದು ಸದಸ್ಯರುಗಳಿಗೆ ತಾವು ನೀಡುತ್ತಿರುವ ಔಷಧಿಯ ವೆಚ್ಚ Waste ಆಗುತ್ತಿದ್ದು ಅದರ ಬದಲಾಗಿ ಸದಸ್ಯರುಗಳು ಆ ವರ್ಷದಲ್ಲಿ

ಔಷಧಿಗಳನ್ನು ಪಡೆದಿರುವುದನ್ನು ಬಿಟ್ಟು ಉಳಿದಂತಹ ಹಣವನ್ನು ಅವರ ಖಾತೆಗೆ ನೀಡುವುದು ಸೂಕ್ತ ಎಂದು ಸಲಹೆಯನ್ನು ನೀಡಿದರು.

**<u>11. ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ:</u>**

ಬ್ಯಾಂಕಿನ ನಿರ್ದೇಶಕರಾದ ಶ್ರೀ ಟಿ ಎಸ್ ರೇವಂತ್‌ರವರು, ಸಭೆಗೆ ನಮಸ್ಕರಿಸುತ್ತಾ ಬ್ಯಾಂಕಿನಲ್ಲಿ 2024-25 ನೇ ಸಾಲಿನಲ್ಲಿ ಹೊಸದಾಗಿ 106 ಜನರನ್ನು ಬ್ಯಾಂಕಿನ ಸದಸ್ಯರನ್ನಾಗಿ ಸೇರಿಸಿಕೊಂಡಿದ್ದು ಹಾಗೂ 223 ಜನ ಸದಸ್ಯರನ್ನು ಸದಸ್ಯತ್ವದಿಂದ ಸಮಾಪನೆಗೊಳಿಸಿರುವುದನ್ನು ಸಭೆಯ ಒಪ್ಪಿಗೆಗೆ ಮಂಡಿಸಿದರು.

ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

ನಂತರ ನಿರ್ದೇಶಕರಾದ ಶ್ರೀಮತಿ ರಶ್ಮಿಕಿರಣ್‌ರವರು ಮಾತನಾಡಿ ಸಭೆಯ ಕೋರಂ ರಿಜಿಸ್ಟಾರ್‌ನಲ್ಲಿ 4466 ಜನ ಸದಸ್ಯರುಗಳು ಸಹಿ ಮಾಡಿರುವ ವಿಚಾರವನ್ನು ಸಭೆಗೆ ತಿಳಿಸಿ ನಂತರ ಎಲ್ಲಾ ಸದಸ್ಯರುಗಳಿಗೆ ಧನ್ಯವಾದಗಳನ್ನು ತಿಳಿಸಿದರು.

**<u>12. ಸಭಾಧ್ಯಕ್ಷರ ಅನುಮತಿಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳನ್ನು ಸಭೆಗೆ ಮಂಡಿಸುವ ವಿಚಾರ.</u>**

(ಅ) ದಿನಾಂಕ 02-07-2025 ರ ಕಾರ್ಯಕಾರಿ ಮಂಡಳಿಯ ಸಭೆಯಲ್ಲಿ 2025-26ರ ಹಣಕಾಸು ವರ್ಷಕ್ಕೆ ನಮ್ಮ ಬ್ಯಾಂಕಿನ ಶಾಸನಬದ್ಧ ಲೆಕ್ಕಪರಿಶೋಧಕರಾಗಿ ಎರಡನೇ ಅವಧಿಗೆ ಮೆ॥ ಎಂ. ವೈ. ರಮೇಶ & ಕೋ, ಮೈಸೂರು ಇವರನ್ನು ಮರು ನೇಮಕ ಮಾಡಲು ನಿರ್ಧರಿಸಿ ಇದಕ್ಕೆ ಸಂಬಂಧಿಸಿದಂತೆ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿಯನ್ನು ಆರ್‌ಬಿಐ ನ ಅನುಮತಿಗಾಗಿ ಕಳುಹಿಸಿದ ಮೇರೆಗೆ ಆರ್‌ಬಿಐ ನವರು ಅನುಮತಿ ನೀಡಿದ್ದು ಅದರಂತೆ ಮೆ॥ ಎಂ. ವೈ. ರಮೇಶ & ಕೋ, ಮೈಸೂರು ಇವರನ್ನು ಮರು ನೇಮಕಾತಿ ಮಾಡಿರುವುದನ್ನು ಬ್ಯಾಂಕಿನ ನಿರ್ದೇಶಕರಾದ ಶ್ರೀಮತಿ ನಯನ ಎಂ ರವರು ವಾರ್ಷಿಕ ಸಾಮಾನ್ಯ ಸಭೆಯ ಗಮನಕ್ಕೆ ತಂದು ಮಂಡಿಸಿದರು.

**ಸನ್ನದು ಲೆಕ್ಕಪರಿಶೋಧಕರಾಗಿ ಮೆ॥ ಎಂ. ವೈ. ರಮೇಶ & ಕೋ, ಮೈಸೂರು ಇವರನ್ನು 2025-26ನೇ ಸಾಲಿಗೆ ಮರು ನೇಮಕಾತಿ ಮಾಡಿರುವುದನ್ನು ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.**

**<u>(ಆ) ಈ ದಿನದ ಸಭೆಯಲ್ಲಿ ಚರ್ಚಿಸಲು, ಬ್ಯಾಂಕಿನ ಸದಸ್ಯರುಗಳು ಸಲ್ಲಿಸಿರುವ ಪತ್ರದ ವಿಚಾರ:–</u>**

ಸಭೆಯಲ್ಲಿ ಚರ್ಚಿಸಲು ಬಂದಿರುವ ಪತ್ರಗಳನ್ನು ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಸಭೆಗೆ ಮಂಡಿಸಿದಾಗ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪ ನವರು ಮಾತನಾಡಿ ಈ ಹಿಂದೆ ಸಭೆಯಲ್ಲಿ ಚರ್ಚಿಸಲು ಪತ್ರವನ್ನು ನೀಡಿದ್ದು ಅದರ ಬಗ್ಗೆ ಈಗಾಗಲೇ ಸಭೆಯಲ್ಲಿ ಚರ್ಚಿಸಿದ್ದು ಪುನ: ಚರ್ಚಿಸುವ ಅವಶ್ಯಕತೆ ಇರುವುದಿಲ್ಲ ಎಂದು ತಿಳಿಸಿದರು.

ನಂತರ ನಿರ್ದೇಶಕರಾದ ಎಂ ಪಿ ಮಹೇಶ್‌ರವರು ಮೊದಲನೆಯದಾಗಿ ಈ ಒಂದು ಸರ್ವ ಸದಸ್ಯರ ಸಭೆಗೆ ಆಗಮಿಸಿ ಮಾರ್ಗದರ್ಶನ ನೀಡಿರುವಂತಹ ಸದಸ್ಯರೆಲ್ಲರಿಗೂ ವಂದಿಸಿದರು.

**1. <u>ಬ್ಯಾಂಕಿನ ಸದಸ್ಯರಾದ ಶ್ರೀ ಎಂ ಪಿ ಹರಿದಾಸ್‌ರವರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಲು ನೀಡಿರುವ ಪತ್ರ :</u>**

ದಿನಾಂಕ 02-09-2025 ರ ತಮ್ಮ ಪತ್ರದಲ್ಲಿನ ವಿಷಯದ ಸಂಬಂಧವಾಗಿ ತಾವು ಕೋರಿರುವ ಮಾಹಿತಿ ಈ ಕೆಳಕಂಡಂತಿದೆ.
**ವಿಷಯ:– 62ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಂಡಿಸುವ ಪ್ರಶ್ನೆ, ಪರಿಹಾರಗಳ ಬಗ್ಗೆ.**

ಮಾನ್ಯರೇ ನಮ್ಮ ಬ್ಯಾಂಕು 2024-25 ರಲ್ಲಿ ರೂ.25.78 ಕೋಟಿ ಲಾಭ ಗಳಿಸಿದ್ದು ಸಂತೋಷದ ವಿಷಯ ಇದರ ಶ್ರೇಯಸ್ಸು ಬ್ಯಾಂಕಿನ ಅಧ್ಯಕ್ಷರು, ಕಾರ್ಯಕಾರಿ ಮಂಡಳಿ, ನಿರ್ದೇಶಕ ಮಂಡಳಿ, ಸಿಬ್ಬಂದಿ ವರ್ಗಕ್ಕೆ ಸಲ್ಲಬೇಕು. ನಿಮ್ಮೆಲ್ಲರಿಗೂ ಈ ಪರಿಶ್ರಮಕ್ಕೆ ಹೃತ್ಪೂರ್ವಕ ಅಭಿನಂದನೆಗಳು. ಮುಂದೆಯೂ ಇದೇ ರೀತಿ ನಮ್ಮ ಬ್ಯಾಂಕು ಪ್ರಗತಿ ಪಥದಲ್ಲಿ ಸಾಗಲಿ ಎಂದು ಹಾರೈಸುವೆ. ಈ ವರ್ಷದ ಸಭೆಯಲ್ಲಿ ನಾನು ಕೇಳುವ ಈ ಪ್ರಶ್ನೆಗಳಿಗೆ ನಿಮ್ಮಿಂದ ಸಮಾಧಾನ ಬಯಸುತ್ತಿರುವೆ.

**ಮಾನ್ಯ ಸದಸ್ಯರು ಬ್ಯಾಂಕು ಲಾಭ ಗಳಿಸಿರುವುದನ್ನು ಅಭಿನಂದಿಸಿರುವುದಕ್ಕೆ ಎಲ್ಲರ ಪರವಾಗಿ ಧನ್ಯವಾದಗಳನ್ನು ತಿಳಿಸುತ್ತಿದ್ದೇನೆ.**

**1.** ಕಳೆದ 3 ವರ್ಷಗಳಿಂದ ಎಷ್ಟು ಶಾಖೆಗಳು ಲಾಭ ಗಳಿಸುತ್ತಿದೆ ?
**ಸಮಾಧಾನ:-ಕಳೆದ 3 ವರ್ಷಗಳಿಂದ ಲಾಭಗಳಿಸುತ್ತಿರುವ ಶಾಖೆಗಳ ವಿವರ ಈ ಕೆಳಕಂಡಂತಿದೆ.**
**2022-23 ರಲ್ಲಿ = 23 ಶಾಖೆಗಳು**
**2023-24 ರಲ್ಲಿ = 23 ಶಾಖೆಗಳು**
**2024-25 ರಲ್ಲಿ = 18 ಶಾಖೆಗಳು**

**2.** ಎಷ್ಟು ಶಾಖೆಗಳು ನಿರಂತರವಾಗಿ ಲಾಭಗಳಿಸುತ್ತಿಲ್ಲ?
**ಸಮಾಧಾನ: ಕೇವಲ 3 ಶಾಖೆಗಳು ಮಾತ್ರ ಕಳೆದ 3 ವರ್ಷಗಳಿಂದ ನಿರಂತರವಾಗಿ ಲಾಭವನ್ನು ಗಳಿಸುತ್ತಿಲ್ಲ.**

**3.** ಈ ಲಾಭ ಗಳಿಸದ ಶಾಖೆಗಳ ವಿಲೀನಿಕರಣ ಸಮಾಪ್ತಿಯ ವಿಚಾರ ಏನಾದರೂ ನಿಮ್ಮ ಕಾರ್ಯಸೂಚಿಯಲ್ಲಿದೆಯಾ?
**ಸಮಾಧಾನ: ಬೆಂಗಳೂರಿನ ಬಿ.ವಿ.ಕೆ ಐಯ್ಯಂಗಾರ್ ರಸ್ತೆ ಶಾಖೆಯು ನಿರೀಕ್ಷಿತ ಮಟ್ಟದಲ್ಲಿ ಬೆಳವಣಿಗೆ ಕಾಣದ ಕಾರಣ ದಿನಾಂಕ 01-04-2025 ರಿಂದ ಮುಚ್ಚಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ನಷ್ಟದಲ್ಲಿರುವ ಶಾಖೆಗಳ ವ್ಯವಹಾರಗಳನ್ನು ಹೆಚ್ಚಿಸಲು ಕಾರ್ಯ ಯೋಜನೆಯನ್ನು ರೂಪಿಸಿದ್ದು, ಸದರಿ ಶಾಖೆಗಳನ್ನು ಲಾಭದತ್ತ ಮುನ್ನಡೆಸಲು ಕ್ರಮ ಕೈಗೊಳ್ಳಲಾಗಿದೆ.**

**4.** ಸತತವಾಗಿ 3 ರಿಂದ 5 ವರ್ಷ ಲಾಭಾಂಶ ಗಳಿಸದ ಶಾಖೆಗಳನ್ನು ವಿಲೀನಗೊಳಿಸಿ ಅಥವಾ ರದ್ದುಗೊಳಿಸುವುದು ಸೂಕ್ತ. ಇದರಿಂದ ಬ್ಯಾಂಕಿಗೆ ನಷ್ಟವಾಗುತ್ತದೆ. ಮುಂಬರುವ ದಿನಗಳಲ್ಲಿ ಬ್ಯಾಂಕಿಗೆ ಈ ವಿಷಯ ಮಾರಕವಾಗಬಹುದು.
**ಸಮಾಧಾನ: ಪ್ರಸಕ್ತ ಸಾಲಿನಲ್ಲಿ ಲಾಭಾಂಶ ಗಳಿಸದ ಶಾಖೆಗಳ ವ್ಯವಹಾರಗಳನ್ನು ಹೆಚ್ಚಿಸಲು ಕ್ರಮ ಕೈಗೊಂಡಿದ್ದು, ಮುಂಬರುವ ದಿನಗಳಲ್ಲಿ ಲಾಭಾಂಶ ಗಳಿಸದ ಶಾಖೆಗಳ ಭವಿಷ್ಯದ ಬಗ್ಗೆ ವಿಮರ್ಶಿಸಿ ಕ್ರಮ ಕೈಗೊಳ್ಳಲಾಗುವುದು.**

**2. <u>ಬ್ಯಾಂಕಿನ ಸದಸ್ಯರಾದ ಶ್ರೀ ಟಿ ಎಸ್ ಶೇಷಾದ್ರಿರವರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಲು ನೀಡಿರುವ ಪತ್ರ :</u>**

ಬ್ಯಾಂಕಿನ ಸದಸ್ಯರಾದ ಶ್ರೀ ಟಿ ಎಸ್ ಶೇಷಾದ್ರಿರವರು ಸಭೆಗೆ ಹಾಜರಿರದ ಕಾರಣ ಅವರ ಪತ್ರವನ್ನು ಸಭೆಯಲ್ಲಿ ಚರ್ಚಿಸದೇ ಇರಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**3. <u>ಬ್ಯಾಂಕಿನ ಸದಸ್ಯರಾದ ಶ್ರೀ ಟಿ ಎಸ್ ಗಂಗಾಧರ್ ರವರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಲು ನೀಡಿರುವ ಪತ್ರ:</u>**

ದಿನಾಂಕ 03-09-2025 ರ ತಮ್ಮ ಪತ್ರದಲ್ಲಿನ ವಿಷಯದ ಸಂಬಂಧವಾಗಿ ತಾವು ಕೋರಿರುವ ಮಾಹಿತಿ ಈ ಕೆಳಕಂಡಂತಿದೆ ಎಂದು ಸಭೆಗೆ ತಿಳಿಸಿ ಅವರು ನೀಡಿರುವ ಪತ್ರವನ್ನು ಸದಸ್ಯರೇ ಖುದ್ದಾಗಿ ಓದುತ್ತೇನೆಂದು ಅಧ್ಯಕ್ಷರಲ್ಲಿ ಮನವಿ ಮಾಡಿಕೊಂಡಿದ್ದು ಅಧ್ಯಕ್ಷರು ಒಪ್ಪಿಗೆ ನೀಡಿರುವುದರಿಂದ ಆ ಪತ್ರ.ವನ್ನು ಸಭೆಯಲ್ಲಿ ಓದಬಹುದು, ಅದಕ್ಕೆ ಉತ್ತರವನ್ನು ನಂತರ ತಿಳಿಸುತ್ತೇವೆ ಎಂದು ಸಭೆಗೆ ತಿಳಿಸಿದರು.

**ನಂತರ ಸದಸ್ಯರಾದ ಶ್ರೀ ಗಂಗಾಧರ್ ಟಿ ಎಸ್ ರವರು ಮಾತನಾಡಿ ಸನ್ಮಾನ್ಯ ಸದಸ್ಯರೇ, ನಮ್ಮ ಬ್ಯಾಂಕಿನ ಅಧ್ಯಕ್ಷರೇ, ಹಾಗೂ ಈ 62 ನೇ ಸಭೆಯ ಅಧ್ಯಕ್ಷತೆಯನ್ನು ವಹಿಸಿರುವಂತಹ ಶ್ರೀಯುತ ಹೆಚ್ ಎಂ ದಿವ್ಯಾನಂದಮೂರ್ತಿ ರವರರಿಗೆ, ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್ ರವರಿಗೆ ಹಾಗೂ ಧಾನ್ಯ ವರ್ತಕರ ಸಂಘದ ಅಧ್ಯಕ್ಷರಾದ ಶ್ರೀ ಚಂದ್ರಕೀರ್ತಿ ರವರಿಗೆ ಉಪಾಧ್ಯಕ್ಷರಾದ ಶ್ರೀ ನಂಜುಂಡಪ್ಪ ರವರು ಕಾರ್ಯದರ್ಶಿಗಳಾದ ಶ್ರೀ ಕೆ ವಿ ಬೆಟ್ಟಯ್ಯ ರವರಿಗೆ ಹಾಗೂ ಸಭೆಗೆ ಆಗಮಿಸಿರುವ ಎಲ್ಲಾ ಗೌರವನ್ವಿತ ಸದಸ್ಯರಿಗೆ ಒಬ್ಬ ಸಾಮಾನ್ಯ ಸದಸ್ಯನಾಗಿ ಈ ವಿಚಾರವನ್ನು ಸಭೆಗೆ ವ್ಯಕ್ತಪಡಿಸಬೇಕೆಂದು ಈ ಪತ್ರವನ್ನು ಬರೆದಾಗ ಮಾನ್ಯ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯವರು ಅನುಮತಿ ನೀಡಿದ್ದು ಆಡಳಿತ ಮಂಡಳಿಯವರಿಗೂ ಹಾಗೂ ಸಿಬ್ಬಂದಿಯವರಿಗೂ ನಮಸ್ಕಾರಗಳನ್ನು ತಿಳಿಸಿದರು.**

**ವಿಷಯ:- ನಮ್ಮ ಟಿ ಜಿ ಎಂ ಸಿ ಬ್ಯಾಂಕಿನ 62ನೇ ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯಲ್ಲಿ ಮಂಡಿಸಲಿಕ್ಕಾಗಿ ಬರೆದಿರುವ ಮನವಿ ಪತ್ರ ಹಾಗೂ ಅಭಿನಂದನಾ ಪತ್ರ.**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಮ್ಮ ಟಿಜಿಎಂಸಿ ಬ್ಯಾಂಕ್ ಸುದೀರ್ಘ 62 ವರ್ಷಗಳನ್ನು ಪೂರೈಸಿದೆ, ಸಹಕಾರಿ ತತ್ವದ ಆಧಾರದ ಮೇಲೆ ನಮ್ಮ ವರ್ತಕ ಸಮುದಾಯದ ಅನುಕೂಲಕ್ಕಾಗಿ ಬ್ಯಾಂಕ್ ಅನ್ನು ಸ್ಥಾಪಿಸಲಾಗಿದೆ. ಕೆಲವು ಸಂದರ್ಭದಲ್ಲಿ ನಮ್ಮ ಬ್ಯಾಂಕು ಸ್ವಲ್ಪ ಮಟ್ಟಿನ ಹಿನ್ನಡೆ ಆಗಿದ್ದರೂ ಕೂಡ ನಮ್ಮ ಬ್ಯಾಂಕಿನ ಆಡಳಿತ ಮಂಡಳಿಯವರ ಪ್ರಾಮಾಣಿಕ ಹಾಗೂ ದಕ್ಷತೆಯಿಂದ ಆಡಳಿತವನ್ನು ನಿರ್ವಹಣೆ ಮಾಡಿದ ಕಾರಣ ನಮ್ಮ ಬ್ಯಾಂಕು ಇತ್ತೀಚಿನ ದಿನಗಳಲ್ಲಿ ಉತ್ತಮ ಪ್ರಗತಿ ಕಂಡು ಲಾಭವನ್ನು ಗಳಿಸಿರುತ್ತದೆ. ನಮ್ಮ ಸದಸ್ಯರುಗಳಿಗೆ ಡಿವಿಡೆಂಡ್ ಅನ್ನು ಕೊಡುತ್ತಿರುವುದು ಸಂತೋಷದಾಯಕವಾದ ವಿಚಾರ.

ನಮ್ಮ ಬ್ಯಾಂಕಿನ ಇಂದಿನ ದಿನಗಳಲ್ಲಿ ಉತ್ತಮವಾಗಿ ಪ್ರಗತಿ ಸಾಧಿಸಲು ಮುಖ್ಯ ಕಾರಣ ಕರ್ತರಾದ ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಹೆಚ್. ಎಂ. ದಿವ್ಯಾನಂದಮೂರ್ತಿ, ಹಾಗೂ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜು, ರವರಿಗೆ ಅಭಿನಂದನೆಗಳನ್ನು ಈ ವಾರ್ಷಿಕ ಮಹಾಸಭೆಯಲ್ಲಿ ತಿಳಿಸುತ್ತೇವೆ. ಅದೇ ರೀತಿ ನಮ್ಮ ಬ್ಯಾಂಕು ಕೆಲ ಸಮಯದಲ್ಲಿ ಎದುರಿಸಿದ ಹಿನ್ನೆಡೆಯ ಸಂದರ್ಭದಲ್ಲಿ ಅಧ್ಯಕ್ಷರಿಗೆ ಬೆಂಬಲವಾಗಿ ನಿಂತು ಸಹಕಾರ ನೀಡಿಕೊಂಡು ಬರುತ್ತಿರುವ ನಮ್ಮ ಬ್ಯಾಂಕಿನ ಹಿರಿಯ ಗೌರವಾನ್ವಿತ ನಿರ್ದೇಶಕರುಗಳಾದ ಶ್ರೀ ಆರ್. ಎ. ಸುರೇಶ್ ಕುಮಾರ್, ಶ್ರೀ ಎಂ ಪಿ ಮಹೇಶ್, ಶ್ರೀ ಬಲರಾಮ ಶೆಟ್ಟಿ, ಶ್ರೀ ಕೆ ರಾಮಯ್ಯ, ಶ್ರೀ ಎಂ ದೀಪಕ್, ಶ್ರೀಮತಿ ರಶ್ಮಿಕಿರಣ್, ಶ್ರೀಮತಿ ಎಂ ನಯನರವರುಗಳಿಗೆ ಈ ಸಂದರ್ಭದಲ್ಲಿ ಒಬ್ಬ ಸಾಮಾನ್ಯ ಸದಸ್ಯನಾಗಿ ಅಭಿನಂದನೆಗಳನ್ನು ತಿಳಿಸುತ್ತೇನೆ.

ನಮ್ಮ ಬ್ಯಾಂಕ್ ಇತ್ತೀಚಿನ ದಿನಗಳಲ್ಲಿ ಲಾಭಗಳಿಸಲು ಮುಖ್ಯ ಕಾರಣ ಕರ್ತರಾದಂತಹ ನಮ್ಮ ಬ್ಯಾಂಕಿನ ಗೌರವಾನ್ವಿತ ಸದಸ್ಯರುಗಳು ಹಾಗೂ ಸಹ ಸದಸ್ಯರುಗಳು ನಮ್ಮ ಬ್ಯಾಂಕಿನಲ್ಲಿ ಡಿಪಾಸಿಟ್ ಇಟ್ಟಿರುವಂತಹ ಡಿಪಾಸಿಟ್‌ದಾರರು, ಗ್ರಾಹಕ ಬಂಧುಗಳು, ಎಸ್ ಬಿ ಅಕೌಂಟ್ ಹಾಗೂ ಕರೆಂಟ್ ಅಕೌಂಟ್ ಖಾತೆದಾರರುಗಳಿಗೆ ಅಭಿನಂದನೆಗಳು, ಕಾರಣ ಯಾವುದೇ ಅಪಪ್ರಚಾರಗಳಿಗೆ ಕಿವಿಗೊಡದೆ ನಮ್ಮ ಬ್ಯಾಂಕಿನಲ್ಲಿ ವ್ಯವಹರಿಸುತ್ತಿರುವುದು ತಮಗೆಲ್ಲ ತಿಳಿದಿರುವ ವಿಚಾರ.

ಅದೇ ರೀತಿ ನಮ್ಮ ಬ್ಯಾಂಕಿನ ಸಿ.ಈ.ಓ. ರವರಾದ ಶ್ರೀ ಜೆ ಸುರೇಶ್ ನಮ್ಮ ಬ್ಯಾಂಕಿನ ಎಲ್ಲಾ ಬ್ರಾಂಚ್‌ನ ಮ್ಯಾನೇಜರ್‌ರವರುಗಳು ಹಾಗೂ ಎಲ್ಲಾ ಬ್ರಾಂಚ್‌ನ ಅಕೌಂಟೆಟ್ ರವರಿಗೂ ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಧನ್ಯವಾದಗಳು.

ಮುಂದುವರೆಸಿ ನಂತರ ಬೇರೆ ಸದಸ್ಯರಗಳು ಸಭೆಯಲ್ಲಿ ಗದ್ದಲ ಪ್ರಾರಂಭಿಸಿದಾಗ ಒಬ್ಬ ಸದಸ್ಯನಾಗಿ ನನಗೆ ಸಂವಿಧಾನಬದ್ಧವಾಗಿ ಹಕ್ಕು ಇರುತ್ತದೆ. ಒಬ್ಬ ಸದಸ್ಯನಿಗೆ ಸಂವಿಧಾನದಲ್ಲಿ ಹಕ್ಕು ಮತ್ತು ಅವನದೇ ಆದ ಜವಾಬ್ದಾರಿ ಇರುತ್ತದೆ. ನಾನು ಒಬ್ಬ ಸದಸ್ಯನಾಗಿ ನನ್ನಲಿರುವಂತಹ ಅಭಿಪ್ರಾಯಗಳನ್ನು ಈ ಸಭೆಯಲ್ಲಿ ವ್ಯಕ್ತಪಡಿಸುವುದು ನನ್ನ ಜವಾಬ್ದಾರಿ ಅದಕ್ಕೆ ಆಡಳಿತ ಮಂಡಳಿಯವರು ಅನುಮತಿ ಕೊಟ್ಟಿದ್ದಾರೆ. ಸಂವಿಧಾನದಲ್ಲಿ ನೀವು Objection ಮಾಡುವುದಕ್ಕೆ ಬರುವುದಿಲ್ಲ ಎಂದಾಗ ನಿರ್ದೇಶಕರಾದ ಎಂ ಪಿ ಮಹೇಶ್‌ರವರು ನಿಧಾನಕ್ಕೆ ಓದಿ ಎಲ್ಲರಿಗೂ ಅರ್ಥವಾಗುತ್ತದೆ ಎಂದು ಸದಸ್ಯರಾದ ಶ್ರೀ ಟಿ ಎಸ್ ಗಂಗಾಧರ್ ರವರಿಗೆ ಹೇಳಿದರು.

ನಂತರ ಸದಸ್ಯರಾದ ಶ್ರೀ ಟಿ ಜಿ ಗಣೇಶ್ ಪ್ರಸಾದ್‌ರವರು ಮಾತನಾಡಿ ಟಜಿಎಂಸಿ ಬ್ಯಾಂಕಿನಲ್ಲಿ ಸದಸ್ಯನಾಗಬೇಕಾದರೆ ಅವರ Responsibility ಏನು ಎಂಬುದನ್ನು ಮುಂಚಿತವಾಗಿ ಸದಸ್ಯನಿಗೆ ತಿಳಿಸಬೇಕು. ಒಬ್ಬ ಸಾಮಾನ್ಯ ಸದಸ್ಯ ಈ ಸಭೆಯಲ್ಲಿ ಮಾತನಾಡುವ ಹಕ್ಕಿಲ್ಲ ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಮಾತನಾಡುತ್ತಿರುವುದು ಎಂದಾಗ ಸದಸ್ಯರಾದ ಶ್ರೀ ಟಿ ಜಿ ಗಣೇಶ್ ಪ್ರಸಾದ್‌ರವರು ಮುಂದುವರೆಸಿ ಟಜಿಎಂಸಿ ಬ್ಯಾಂಕ್‌ನಲ್ಲಿ ಸಾಮಾನ್ಯ ಸದಸ್ಯನ ಮೆಂಬರ್ ಶಿಪ್ ಇದ್ದು ಮೆಂಬರ್ ಆದವರಿಗೆನಾದರೂ Responsibility ಇದೆಯಾ? ಅಥವಾ ನಿಮ್ಮ ಆರ್ ಬಿ ಐ ನಲ್ಲಿ ಏನಾದರೂ Rules/Responsibility ಮತ್ತು regulations ಇದೆಯಾ? ಅದನ್ನು ಮೆಂಬರ್ ಶಿಪ್ ಆಗುವುದಕ್ಕೆ ಮುಂಚೆ ಏನಾದರೂ ತಿಳಿಸಿಕೊಟ್ಟಿದ್ದೀರಾ? ಎಂದಾಗ ನಿರ್ದೇಶಕರಾದ ಶ್ರೀ ಆರ್ ಎ ಸುರೇಶ್ ಕುಮಾರ್‌ರವರು ಮಾತನಾಡಿ ಎಲ್ಲಾ ಸದಸ್ಯರೂ ಮುಕ್ತವಾಗಿ ಮಾತನಾಡುವುದಕ್ಕೆ ಅವಕಾಶವಿದೆ, ಅವರು ಸಭೆಗೆ ಮನವಿ ಪತ್ರ ಸಲ್ಲಿಸಿದ್ದಾರೆ ಅವರು ಓದಲಿ ಎಂದು ಹೇಳಿದರು. ಸದಸ್ಯರಾದ ಶ್ರೀ ಟಿ ಜಿ ಗಣೇಶ್ ಪ್ರಸಾದ್‌ರವರು ಮುಂದುವರೆಸಿ ಸಾಮಾನ್ಯ ಸದಸ್ಯನಾಗಿ ಬ್ಯಾಂಕಿನಲ್ಲಿ ಡೆಪಾಸಿಟ್ ಮಾಡಿಸಿದರೆ ಅಥವಾ ಸಾಲವನ್ನು ಕೊಡಿಸಿರುವವರು ಬೇರೆ Categoryಗೆ ಬರುತ್ತಾರಾ? ಅಥವಾ ಒಬ್ಬ ಸಾಮಾನ್ಯ ಸದಸ್ಯನಾಗಿ ಒಂದು ಸಾಲವನ್ನು ಸಹ ಕೊಡಿಸದ್ದಿದ್ದರೆ ಬೇರೆ Categoryಗೆ ಬರುತ್ತಾರಾ ಎಂದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದ ಮೂರ್ತಿರವರು ಮಾತನಾಡಿ ಸದಸ್ಯರಾದ ಶ್ರೀ ಗಂಗಾಧರ್ ಟಿ ಎಸ್ ತಮ್ಮ ಮನವಿ ಪತ್ರವನ್ನು ಮುಂದುವರೆಸಬೇಕೆಂದು ಕೇಳಿಕೊಂಡರು.

ನಂತರ ಸದಸ್ಯರಾದ ಶ್ರೀ ಪಿ ಸದಾಶಿವಯ್ಯ ಮಾತನಾಡಿ ಬ್ಯಾಂಕಿನ ಮಹಾಸಭೆಗೆ ಕೆಲವೊಂದು ಪ್ರಶ್ನೆಗಳು ಬಂದಿದ್ದವು ಪ್ರಶ್ನೆಗಳನ್ನು ಕೇಳಿರುವವರಿಗೆ ಉತ್ತರ ಸಿಗಬೇಕು ಎನ್ನುವ ಉದ್ದೇಶದಿಂದ ಹೇಳಿದ್ದೇನೆ ಎಂದು ತಿಳಿಸಿದರು.

ನಂತರ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಸದಸ್ಯರಾದ ಶ್ರೀ ಟಿ ಎಸ್ ಗಂಗಾಧರ್‌ರವರು ಸಭೆಗೆ ಮನವಿ ಪತ್ರವನ್ನು ನೀಡಿದ್ದು ಅದನ್ನು ಸಭೆಗೆ ಮಂಡಿಸಿ ಎಂದು ಹೇಳಿದರು.

ಸದಸ್ಯರಾದ ಶ್ರೀ ಟಿ ಎಸ್ ಗಂಗಾಧರ್‌ರವರು ನೀಡಿರುವುದು ಒಂದು ಮನವಿ ಪತ್ರ ಹಾಗೂ ಅಭಿನಂದನಾ ಪತ್ರ ಎಂದು ಸಭೆಗೆ ಮನವಿ ಮಾಡಿದರು. ನಮ್ಮ ಮನವಿ ಪತ್ರವನ್ನು ನಮ್ಮ ಬ್ಯಾಂಕಿನ ಸರ್ವ ಸದಸ್ಯರ ಸಭೆಯಲ್ಲಿ ನಾವು ಓದುವುದಕ್ಕಾಗಿ ಅವಕಾಶ ಮಾಡಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ, ನಂತರ ಆಡಳಿತ ಮಂಡಳಿಯವರು ಉತ್ತರವನ್ನು ಅಥವಾ ತೀರ್ಮಾನವನ್ನು ಸಭೆಗೆ ತಿಳಿಸಬೇಕಾಗಿ ವಿನಂತಿಸುತ್ತೇವೆ ಕಾರಣ ಇದೊಂದು ಮನವಿ ಹಾಗೂ ಅಭಿನಂದನಾ ಪತ್ರ.

ಸನ್ಮಾನ್ಯ ಅಧ್ಯಕ್ಷರೆ ನಮ್ಮ ಬ್ಯಾಂಕು ಇಂದಿನ ದಿನಗಳಲ್ಲಿ ಉತ್ತಮ ಲಾಭಗಳಿಸಿ ಪ್ರಗತಿ ಪಥದತ್ತ ಮುಂದುವರೆಯುತ್ತಿರುವ ಸಂದರ್ಭದಲ್ಲಿ ನಮ್ಮ ಬ್ಯಾಂಕು ಗಳಿಸುವ ನಿವ್ವಳ ಆದಾಯದಲ್ಲಿ ವಿದ್ಯಾ ಪ್ರತಿಭಾ ಪುರಸ್ಕಾರವೆಂಬ ಉತ್ತಮ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಕ್ಕಾಗಿ ವಿನಂತಿಸುತ್ತೇವೆ. ಅನೇಕ ಕೋ–ಆಪರೇಟಿವ್ ಬ್ಯಾಂಕ್‌ರವರು ಹಾಗೂ ಅನೇಕ ಸಹಕಾರಿ ಪತ್ತಿನ ಸಂಘ ಗಳವರು ಪ್ರತಿ ವರ್ಷ ತಮ್ಮ ಸಂಸ್ಥೆ ಗಳಿಸುವ ನಿವ್ವಳ ಆದಾಯದಲ್ಲಿ ಪ್ರತಿಭಾ ಪುರಸ್ಕಾರದ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿರುವುದನ್ನು ನಾವೆಲ್ಲಾ

ಗಮನಿಸಿರುತ್ತೇವೆ. ಆದ್ದರಿಂದ ಮುಂದಿನ ದಿನಮಾನಗಳಲ್ಲಿ ನಮ್ಮ ಬ್ಯಾಂಕ್‌ರವರು ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ಪ್ರತಿಭಾ ಪುರಸ್ಕಾರ ಎಂಬ ಉತ್ತಮ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಕ್ಕಾಗಿ ನಮ್ಮ ಆಡಳಿತ ಮಂಡಳಿಯವರಿಗೆ ವಿನಂತಿಸಿಕೊಳ್ಳುತ್ತೇವೆ. ನಮ್ಮ ಆಡಳಿತ ಮಂಡಳಿಯ 62 ನೇ ವಾರ್ಷಿಕ ಸಭೆಯಲ್ಲಿ ತಮ್ಮ ತೀರ್ಮಾನವನ್ನು ವಿನಯ ಪೂರ್ವಕವಾಗಿ ತಿಳಿಸಲು ಮನವಿ ಮಾಡಿಕೊಳ್ಳುತ್ತೇವೆ.

ಸಾಮಾಜಿಕ ಕಳಕಳಿ ಸಾಮಾಜಿಕ ಬದ್ಧತೆಯು ನಮ್ಮ ಸಹಕಾರ ತತ್ವದ ಮೂಲ ಅಂಶ ಹಾಗೂ ಪರಿಕಲ್ಪನೆ ಎಂಬುದೂ ಕೂಡ ನಾವೆಲ್ಲರೂ ತಿಳಿದಿರುವ ವಿಚಾರ.

ಯಾವುದೇ ರಾಜ್ಯವಾಗಲಿ, ದೇಶವಾಗಲೀ, ಪ್ರಗತಿ ಪಥದಲ್ಲಿ ಮುಂದುವರೆಯಬೇಕಾದರೆ ಉತ್ತಮ ಶಿಕ್ಷಣ ಹಾಗೂ ಉತ್ತಮ ಪ್ರತಿಭಾವಂತ ವಿದ್ಯಾರ್ಥಿಗಳು ಬಹಳ ಮುಖ್ಯ. ತಮಗೆ ತಿಳಿದಿರುವಂತೆ ಈ ದಿನಗಳಲ್ಲಿ ವಿದ್ಯಾ ಕ್ಷೇತ್ರ ಬಹಳ ದುಬಾರಿಯಾಗಿರುತ್ತದೆ. ನಾವು ತಿಳಿದಿರುವಂತೆ ಅನೇಕ ಪ್ರತಿಭಾವಂತ ಮಕ್ಕಳು ಮಧ್ಯಮ ವರ್ಗದ ಕುಟುಂಬದಲ್ಲಿ ಅತಿ ಹೆಚ್ಚಾಗಿ ಬರುತ್ತಿರುವುದನ್ನು ಕಾಣುತ್ತೇವೆ. ಇಂತಹ ವಿದ್ಯಾರ್ಥಿಗಳಿಗೆ ನೆರವನ್ನು ನೀಡುವುದು ನಮ್ಮೆಲ್ಲಾ ಸದಸ್ಯರ ಹಾಗೂ ಆಡಳಿತ ಮಂಡಳಿಯವರ ಆಧ್ಯ ಕರ್ತವ್ಯವಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ಆಡಳಿತ ಮಂಡಳಿಯವರು ನಮ್ಮ ಬ್ಯಾಂಕಿನಲ್ಲಿ ಒಂದು ವಿದ್ಯಾಭಿವೃದ್ಧಿ ನಿಧಿಯನ್ನು ಸ್ಥಾಪಿಸುವ ಮೂಲಕ ಈ ಕಾರ್ಯಕ್ರಮವನ್ನು ಮುಂದಿನ ದಿನಮಾನಗಳಲ್ಲಿ ಚಾಚು ತಪ್ಪದೇ ಈ ಕಾರ್ಯಕ್ರಮ ನಡೆಸಿಕೊಂಡು ಹೋಗುವಂತಹ ನಿರ್ಣಯವನ್ನು ಮಾಡಬೇಕಾಗಿ ಮತ್ತೊಮ್ಮೆ ವಿನಂತಿಕೊಳ್ಳುತ್ತೇವೆ. ಕಾರಣ ನಮ್ಮ ದೇಶದ ಇತಿಹಾಸದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅನೇಕ ಕ್ಷೇತ್ರಗಳಲ್ಲಿ ದೇಶ ಸೇವೆ ಮಾಡಿರುವಂತಹ ಹಾಗೂ ತಮ್ಮ ಕೊಡುಗೆ ನೀಡಿರುವಂತಹ ಮಹನೀಯರುಗಳು ಕೂಡ ತಮ್ಮ ವಿದ್ಯಾರ್ಥಿ ಜೀವನದಲ್ಲಿ ಕಷ್ಟ ಹಾಗು ಮಧ್ಯಮ ವರ್ಗದ ಕುಟುಂಬದಿಂದ ಬಂದಿರುವವರು ಅನ್ನುವ ವಿಚಾರವನ್ನು ನಾವೆಲ್ಲ ತಿಳಿದಿರುತ್ತೇವೆ ಉದಾ:– ನಮ್ಮ ಭಾರತ ದೇಶದ ಸಂವಿಧಾನವನ್ನು ರಚಿಸಿರುವಂತಹ ಶ್ರೀ ದಿ ಬಾಬಾ ಸಹೇಬ್ ಅಂಬೇಡ್ಕರ್ ಅವರು ಮಾಜಿ ಪ್ರಧಾನಿಗಳಾದ ಶ್ರೀ ದಿ ಲಾಲ್ ಬಹದ್ದೂರ್ ಶಾಸ್ತ್ರಿರವರುಗಳು ಶ್ರೀ ದಿ ಮನಮೋಹನ್ ಸಿಂಗ್‌ರವರು ಹಾಗೂ ಇತ್ತೀಚಿನ ದಿನಗಳಲ್ಲಿ ನಮ್ಮ ಹೆಮ್ಮೆಯ ಪ್ರಧಾನಿಗಳಾದಂತಹ ಶ್ರೀಯುತ ನರೇಂದ್ರ ಮೋದಿಜಿರವರು ಹಾಗೂ ಪ್ರಖ್ಯಾತ ವಿಜ್ಞಾನಿಗಳಾದಂತಹ ಶ್ರೀ ದಿ ಸರ್ ಎಂ ವಿಶ್ವೇಶ್ವರಯ್ಯನವರು ಮಾಜಿ ರಾಷ್ಟ್ರಪತಿಗಳಾದಂತಹ ಶ್ರೀ ದಿ. ಡಾ ಅಬ್ದುಲ್ ಕಲಾಂ ರವರಗಳನ್ನು ಗಮನಿಸಿರುತ್ತೇವೆ.

ನಾವು ಏತಕ್ಕಾಗಿ ಈ ಮೇಲ್ಕಂಡ ಮಹನೀಯರುಗಳ ವಿಚಾರವನ್ನು ಪ್ರಸ್ತಾಪಿಸಿದ್ದೇವೆ ಅಂದರೆ ನಾವು ಸಹಾಯ ಮಾಡುವ ಪ್ರತಿಭಾವಂತ ವಿದ್ಯಾರ್ಥಿಗಳಲ್ಲಿ ಅನೇಕರು ಮುಂದಿನ ದಿನಗಳಲ್ಲಿ ನಮ್ಮ ದೇಶದ ಪ್ರಗತಿಗಾಗಿ ಕೊಡಗೆ ನೀಡಿರುತ್ತಾರೆ ಎಂಬ ಆಶಾಭಾವನೆಯನ್ನು ಹೊಂದಿರುತ್ತೇವೆ.

ವಿದ್ಯೆಯಿಂದ ವಿಜ್ಞಾನ, ತಂತ್ರಜ್ಞಾನ, ಸಂಶೋಧನೆ, ಹಾಗೂ ಹೊಸ ಹೊಸ ಆವಿಷ್ಕಾರಗಳು ದೇಶದ ಪ್ರಗತಿಗೆ ಸಹಾಯಕವಾಗಿರುತ್ತದೆ.
ಇದೊಂದು ಸಾಮಾನ್ಯ ವಿಚಾರವೆಂದು ಪರಿಗಣಿಸಿದರೆ ನಾವು ಬರೆದಿರುವ ಈ ಮನವಿ ಪತ್ರವನ್ನು ದಯಮಾಡಿ ಆಡಳಿತ ಮಂಡಳಿಯವರು ಅಂಗೀಕರಿಸಿ ನಮ್ಮ ಬ್ಯಾಂಕಿನ 62 ನೇ ವಾರ್ಷಿಕ ಮಹಾಸಭೆಯ ದಿನದಂದು ತಾರೀಖು: 13/09/2025 ರಂದು ಒಂದು ಉತ್ತಮವಾದ ಹಾಗೂ ಆಶಾದಾಯಕವಾದ ತೀರ್ಮಾನವನ್ನು ಪ್ರಕಟಿಸಬೇಕಾಗಿ ಮತ್ತೊಮ್ಮೆ ವಿನಂತಿಸಿಕೊಳ್ಳುತ್ತೇವೆ.
ಸ್ವಾಮಿ ಈ ನಮ್ಮ ಮನವಿ ಪತ್ರವನ್ನು ನಮ್ಮ ಬ್ಯಾಂಕಿನ ಸರ್ವ ಸದಸ್ಯರ ಸಭೆಯಲ್ಲಿ ನಾವು ಓದುವುದಕ್ಕಾಗಿ ಅವಕಾಶ ಮಾಡಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ, ನಂತರ ಆಡಳಿತ ಮಂಡಳಿಯವರು ಉತ್ತರವನ್ನು ಅಥವಾ ತೀರ್ಮಾನವನ್ನು ಸಭೆಗೆ ತಿಳಿಸಬೇಕಾಗಿ ವಿನಂತಿಸುತ್ತೇವೆ ಕಾರಣ ಇದೊಂದು ಮನವಿ ಹಾಗೂ ಅಭಿನಂದನಾ ಪತ್ರ.
**ಸಮಾಧಾನ:–ಸದಸ್ಯರ ನಿರಂತರ ಬೆಂಬಲದಿಂದಾಗಿ ಮತ್ತು ಬ್ಯಾಂಕಿನೊಂದಿಗಿರುವ ಅತ್ಯಮೂಲ್ಯ ಸಂಬಂಧದಿಂದಾಗಿ ನಾವು ಅನೇಕ ಸವಾಲುಗಳನ್ನು ಎದುರಿಸಿ ಬ್ಯಾಂಕನ್ನು ದಿಟ್ಟತನದಿಂದ ಮುನ್ನಡೆಸಲು ತಾವುಗಳು ನೀಡುತ್ತಿರುವ ಸಹಕಾರಕ್ಕೆ ಎಲ್ಲರ ಪರವಾಗಿ ಧನ್ಯವಾದಗಳನ್ನು ತಿಳಿಸುತ್ತಿದ್ದೇನೆ. ತಾವು ನೀಡಿರುವ ಸಲಹೆಯು ಉತ್ತಮವಾಗಿದ್ದು ಮುಂದಿನ ದಿನಗಳಲ್ಲಿ ಅದನ್ನು ಪರಿಶೀಲಿಸಲಾಗುವುದೆಂದು ತಿಳಿಸಬಯಸುತ್ತೇವೆ.**

ಸದಸ್ಯರಾದ ಶ್ರೀ ಡಿ ಆರ್ ಶಿವಕುಮಾರ್‌ರವರು ಮಾತನಾಡಿ ಕಳೆದ ವರ್ಷದ 61 ನೇ ಸಾಮಾನ್ಯ ಸಭೆಯಲ್ಲಿ ಊಟದ ವ್ಯವಸ್ಥೆ ಅವ್ಯವಸ್ಥೆಯಾಗಿತ್ತು, ಈ ವರ್ಷ ಅಧ್ಯಕ್ಷರು, ಕಾರ್ಯಕಾರಿ ಮಂಡಳಿಯವರು ಹೇಳಿದಂತೆ 95% ಸಮಾಧಾನವಾಗುವಂತೆ ಎಲ್ಲವೂ ಸರಿಯಾದ ಕ್ರಮದಲ್ಲಿ ಊಟದ ವ್ಯವಸ್ಥೆಯನ್ನು ಮಾಡಿದ್ದು ಪ್ರತಿಯೊಬ್ಬ ಸದಸ್ಯರು ತೃಪ್ತಿಕರವಾಗಿ, ಎಲ್ಲಿಯೂ ಸಹ ಗೊಂದಲವಾಗದಂತೆ ಯಶಸ್ವಿಯಾಗಿ ಮಾಡಿದ್ದೀರಾ, ಎಂದು ಹೇಳಿ ಧನ್ಯವಾದಗಳನ್ನು ತಿಳಿಸಿದರು. ಅದೇ ರೀತಿಯಲ್ಲಿ ಕಳೆದ 3 ವರ್ಷದಿಂದ ಸಾಮಾನ್ಯ ಸಭೆಯಲ್ಲಿ ಕೇಳುತ್ತಿದ್ದೇನೆ ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ ಆಪರೇಟಿವ್ ಬ್ಯಾಂಕ್ ಇರುವುದು ಆದರೆ ಮರ್ಚೆಂಟ್ಸ್‌ಗೆ ಸಾಲವನ್ನು ಅಥವಾ ಬೇರೆ ಅನುಕೂಲವಾಗಲಿ, ಸಿಗುತ್ತಿಲ್ಲ. ಜಂಟಿ ಸಾಲವನ್ನು ಸಹ ನಿಲ್ಲಿಸಿದ್ದೀರಾ ಕಾರಣ ಆರ್ ಬಿ ಐ ನ instructions ಇರಬಹುದು ಅಥವಾ ಕೋವಿಡ್ ಬಂದ ಮೇಲೆ ನಿಲ್ಲಿಸಿರಬಹುದು ಆದರೆ ಬೇರೆ ಯಾವುದೇ ಉದ್ದೇಶದಿಂದ ನಿಲ್ಲಿಸಿರುವುದಿಲ್ಲ ಅದನ್ನು ಒಪ್ಪಿಕೊಳ್ಳುತ್ತೇವೆ. ಕಳೆದ ಎರಡು ವರ್ಷದಿಂದ ಜಂಟಿ ಸಾಲದ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಿದ್ದೀರಾ ಆದರೆ ಏನು ಕ್ರಮ ತೆಗೆದುಕೊಂಡಿಲ್ಲ, ಬೇರೆ ಮರ್ಚೆಂಟ್ಸ್ ಮೈಸೂರು, ಬೆಂಗಳೂರು. 20 ಶಾಖೆಗಳನ್ನು ಮಾಡಿರುವುದು ಸಂತೋಷ ಅಲ್ಲಿ ಇರುವವರಿಗೂ ಅನುಕೂಲ ಮಾಡಿಕೊಟ್ಟಿದ್ದೀರ, ಆದರೆ ತುಮಕೂರಿನಲ್ಲಿರುವ ವ್ಯಾಪಾರಿಗಳೂ ದೊಡ್ಡ ಮತ್ತು ಸಣ್ಣ ವ್ಯಾಪಾರಿಗಳಿಗೂ ಸ್ಥಳೀಕರಿಗೆ ಅನುಕೂಲವಾಗುವಂತೆ ಮಾಡಿ, ಬಂದಿರುವವರಿಗೆಲ್ಲ ಸಾಲ ಕೊಡುವುದಕ್ಕೆ ಆಗುವುದಿಲ್ಲ, ತಮ್ಮ terms & condition ಪ್ರಕಾರ, background ತಿಳಿದುಕೊಂಡು ಯಾರು ಸರಿಯಾಗಿ ಸಾಲವನ್ನು ಕಟ್ಟುತ್ತಾರೆ, Defaulter ಆದರೂ ಸಹ 3 ಬಾರಿ ಅವಕಾಶ ನೀಡಿ, ಅದರಲ್ಲೂ ಸಹ ಸಾಲವನ್ನು ಕಟ್ಟದೆ ಇರುವವರಿಗೆ ಯಾವುದೇ ಕಾರಣಕ್ಕೂ ಇನ್ನು ಮುಂದೆ ಟಿಜಿಎಂಸಿ ಬ್ಯಾಂಕಿನಲ್ಲಿ ಸಾಲ

ಸಿಗುವುದಿಲ್ಲ ಎಂದು ಪತ್ರ ನೀಡಿ, ಕಾರಣಾಂತರದಿಂದ ಯಾವುದೋ ಒಬ್ಬರು ಇಬ್ಬರು ಸದಸ್ಯರು ಬೀದಿಯಲ್ಲಿ ಮಾತನಾಡುವುದಕ್ಕೆ ತಾವುಗಳು ಎದರದೆ ಎದೆಗುಂದದೆ, ಸದಸ್ಯರು ಸಹ ನಿಮಗೆ ಧೈರ್ಯವನ್ನು ಕೊಟ್ಟು ಅದೇ ರೀತಿಯಲ್ಲಿ ಬ್ಯಾಂಕ್ ನಡೆಸಿಕೊಂಡು ಬರುತ್ತಿದ್ದೀರಾ, ಯಾರು ತಲೆ ಮೇಲೆ ಕೈ ಹೊತ್ತುಕೊಂಡು ಕುಳಿತಿರುವುದಿಲ್ಲ, ಎಲ್ಲ ಸದಸ್ಯರು ಸಹಕಾರ ಕೊಟ್ಟಿದ್ದಾರೆ, ತಾವುಗಳು ನಿಷ್ಪಕ್ಷಪಾತವಾಗಿ ಕೆಲಸ ಮಾಡುತ್ತಿದ್ದೀರಾ, ನಿಮಗೆ ನಾವುಗಳು ಅಥವಾ ಸರ್ಕಾರದವರು ಸಂಬಳ ಕೊಡುತ್ತಿಲ್ಲ, Nationalize Bank ನಲ್ಲಿ ಸರ್ಕಾರ ಸಂಬಳ ಕೊಟ್ಟು ಪೋಲೀಸ್, Legal advisors ಎಂದು 10 ಜನಕ್ಕೆ ಕೊಟ್ಟರೂ ಸಹ ದಿವಾಳಿಯಾಗಿ 15 ವರ್ಷ ಆದರೂ ಸಹ ಸಾಲವನ್ನು ಕಟ್ಟಿರುವುದಿಲ್ಲ. ಯಾವುದೇ Legal advisors ಗಳನ್ನು ನೋಟಿಸ್ ಬೋರ್ಡ್‌ಗೆ ಹಾಕಿರುವುದಿಲ್ಲ. ಅವರುಗಳು ಸಾಲವನ್ನು ವಸೂಲಿ ಮಾಡುವುದಕ್ಕೆ ಆಗಿರುವುದಿಲ್ಲ ದಿವಾಳಿ ಆಗಿದ್ದಾರೆ. ರೂ.10.00 ಲಕ್ಷಗಳ ಸಾಲವನ್ನು ತೆಗೆದುಕೊಂಡಿದ್ದರೆ one time settelement ಗೆ 3 ರಿಂದ 4 ಲಕ್ಷಗಳನ್ನು ಕಟ್ಟುತ್ತೀಯಾ ದಿವಾಳಿಯಾಗಿದಿಯಾ ಅಂದರೆ ಅಷ್ಟಕ್ಕೆ ತೀರ್ಮಾನ ಮಾಡಿ ಹಣವನ್ನು ಕಟ್ಟಿಸಿಕೊಂಡು ಇನ್ನು ಮುಂದೆ ಯಾವುದೇ ರೀತಿಯ ಸಾಲವನ್ನು ಕೊಡುವುದಿಲ್ಲವೆಂದು one time settelement ಮಾಡುತ್ತಿದ್ದಾರೆ, ಸದಸ್ಯರಿಗೋಸ್ಕರ ಸಾಮಾನ್ಯ ಸಭೆಯನ್ನು ನಡೆಸುವುದು. ನೀವು ಏನು ತಪ್ಪು ಮಾಡಿದ್ದರೂ ಅಥವಾ ನಾವು ತಪ್ಪು ಮಾಡಿದ್ದರು ಕೇಳುವುದಕ್ಕೆ ಹಕ್ಕು ಇದೆ. ಓದಿದರೆ ತಪ್ಪು, ಕೇಳಿದರೆ ತಪ್ಪು ಎಂದು ಯಾರು ಅಂದುಕೊಳ್ಳುವುದು ತಪ್ಪು, ನಾನು 25 ವರ್ಷದಿಂದಲೂ ಬ್ಯಾಂಕಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಹಾಜರಾಗುತ್ತಿದ್ದೇನೆ. ನಾವು ಬೇಕಾಗಿರುವುದನ್ನು fight ಮಾಡಿ ತೆಗೆದುಕೊಂಡಿದ್ದೇವೆ, ನಮ್ಮ ತಂದೆಯವರು ನಿರ್ದೇಶಕರಾದಾಗ ರೂ.100/–ಗಳನ್ನು ಕೊಟ್ಟು ಸದಸ್ಯನಾಗಿದ್ದೇನೆ. ಈಗ ಬ್ಯಾಂಕಿನವರು ರೂ. 12000/–ಗಳ ಷೇರು ಕೊಟ್ಟಿದ್ದೀರಾ, ಸಾಲವಾಗಿ ರೂ. 15000/– ನೀಡಿದರೆ ಬ್ಯಾಂಕಿನಲ್ಲಿ ನಮ್ಮ ಷೇರು ಹಣ ರೂ. 12000/–ಗಳು ಇರುತ್ತದೆ ಇನ್ನೂ ರೂ. 3000/– ಹೆಚ್ಚಿಗೆ ಇರುತ್ತದೆ. ಪ್ರತಿಯೊಬ್ಬ ಸದಸ್ಯರು ಸರಿಯಾಗಿ ಯಾರು ಸಾಲವನ್ನು ಕಟ್ಟುತ್ತಾರೆ ಅವರಿಗೆ ಸಾಲವನ್ನು ನೀಡಿ ಇದನ್ನು ಸಭೆಯ ಗಮನಕ್ಕೆ ತರಿಸಲು ಇಷ್ಟಪಡುತ್ತೇನೆಂದರು.

ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ತಮ್ಮ ಅಮೂಲ್ಯವಾದ ಸಲಹೆಯನ್ನು ಸ್ವೀಕಾರ ಮಾಡಿ ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಪಡುತ್ತೇವೆ ಎಂದು ಧನ್ಯವಾದಗಳನ್ನು ತಿಳಿಸಿದರು.

ಮುಂದುವರೆದು ಸದಸ್ಯರಾದ ಶ್ರೀ ಡಿ ಆರ್ ಶಿವಕುಮಾರ್‌ರವರು ಮಾತನಾಡಿ ಆಗಿನ ಕಾಲದಲ್ಲಿ ರೂ.2/– ಕ್ಕೆ ಮಾತ್ರೆಗಳನ್ನು ಕೊಡುತ್ತಿದ್ದರು, ಆದರೆ ಈಗ ಒಂದು ಮಾತ್ರೆ ರೂ.25/–, ಹೃದಯ ತೊಂದರೆ ಎಂದು ಡಾಕ್ಟರ್ ಹತ್ತಿರ ಕರೆದುಕೊಂಡು ಹೋದರೆ ಮೊದಲು ದುಡ್ಡು ಇದೆಯಾ, site ಇದೆಯಾ ಎಂದು ಕೇಳುತ್ತಾರೆ. Humanity ಮೇಲೆ ಯಾರು admit ಮಾಡಿಕೊಳ್ಳುವುದಿಲ್ಲ, ಹೃದಯ ಮತ್ತು ಕಿಡ್ನಿ ಚಿಕಿತ್ಸೆಗಾಗಿ ಹಣವನ್ನು ಸ್ವಲ್ಪ ಜಾಸ್ತಿ ಮಾಡಿ ಬ್ಯಾಂಕಿನಿಂದ ಸದಸ್ಯರುಗಳಿಗೆ ಅನುಕೂಲ ಮಾಡುವಂತೆ ವಿನಂತಿಸಿದರು.

**4.** ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಬ್ಯಾಂಕಿನ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಲು ನೀಡಿರುವ ಪತ್ರವನ್ನು ಮಂಡಿಸಲು ಪ್ರಾರಂಭಿಸಿದಾಗ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪನವರು ಮಾತನಾಡಿ ಈಗಾಗಲೇ ನನ್ನ ಪ್ರಶ್ನೆಗಳಿಗೆ ಉತ್ತರ ತೆಗೆದುಕೊಂಡಿದ್ದೇನೆ ಓದುವುದು ಬೇಡವೆಂದು ಸಭೆಗೆ ತಿಳಿಸಿದರು. ಸದಸ್ಯರಾದ ಶ್ರೀ ಟಿ ಜಿ ಗಣೇಶ್ ಪ್ರಸಾದ್‌ರವರು ಮಾತನಾಡಿ ಮೊದಲನೆ ಪ್ರಶ್ನೆ ಟಿಜಿಎಂಸಿ ಸದಸ್ಯನಾಗಿ ಏನು ಜವಾಬ್ದಾರಿ ಎಂದು ತಿಳಿಸಿಕೊಡಬೇಕು, ಎರಡನೆಯದು ಆ ಸದಸ್ಯನಿಗೆ ಏನಾದರೂ ಆರ್ ಬಿ ಐ ನಿಂದ ರೂಲ್ಸ್ ಇದೆಯಾ, ಯಾವ ರೀತಿಯಲ್ಲಿ ನಡೆದುಕೊಳ್ಳಬೇಕು ಅಥವಾ deposit ಮಾಡಿಸಿದರೆ, ಅಥವಾ ಸಾಲವನ್ನು ಕೊಡಿಸಿದವರಿಗೆ ಅಥವಾ ಕೊಡಿಸದೇ ಇಲ್ಲದವನಿಗೆ separate category ಮಾಡುತ್ತೀರಾ ಅದನ್ನು ಹೇಳಬೇಕು, ತಾವು ಹೇಳಿದರೆ ತಿಳಿದುಕೊಳ್ಳುತ್ತೇವೆ ನಾವು ಡೆಪಾಸಿಟ್ ಮಾಡಿಸಿರುವುದಿಲ್ಲ, ಸಾಲವನ್ನು ಕೊಡಿಸಿರುವುದಿಲ್ಲ, ನಾವು ಈ ಸಭೆಗೆ ಬರಬಹುದಾ ಅಥವಾ ಬರಬಾರದ ಎಂದು ತಿಳಿದುಕೊಳ್ಳಬೇಕು, ಎಲ್ಲಾ ಸದಸ್ಯರಿಗೆ ಷೇರುಗಳನ್ನು ನೀಡಬೇಕಾದರೆ ಇದನ್ನು ಹೇಳಿರುವುದಿಲ್ಲ. against ಆಗಿ ಮಾತನಾಡುತಿಲ್ಲ ಬಂದಿರುವ ಸದಸ್ಯರಿಗೆ ಅದರ ಬಗ್ಗೆ ತಿಳುವಳಿಕೆ ಬರಲಿ, ಅವರು ಸಹ ಜವಾಬ್ದಾರರಾಗಿ ಕೆಲಸ ಮಾಡಲಿ ಎಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರಾದ ಶ್ರೀ. ಸಿ ಆರ್ ನಟರಾಜ್‌ರವರು ಮಾತನಾಡಿ ಸದಸ್ಯಗಳ ಷೇರುಗಳು ಎಷ್ಟೇ ಇರಲಿ ಅವರು ಡೆಪಾಸಿಟ್ ಮಾಡಿಸಿರಲಿ ಅಥವಾ ಮಾಡಿಸದೇ ಇರಲಿ ಬ್ಯಾಂಕಿಗೆ ಕಾನೂನಿಗೆ ಬದ್ದನಾಗಿರಬೇಕು ಬ್ಯಾಂಕಿನ ಕಾನೂನಿನ ವಿರುದ್ದ ನಡೆದುಕೊಂಡವರಿಗೆ ಮಾತನಾಡಲು ಅವಕಾಶ ಇಲ್ಲ, ಕೆಲವು ಸದಸ್ಯರು ಬ್ಯಾಂಕಿನ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ, ಬ್ಯಾಂಕಿನ ಗೌರವಾನ್ವಿತ ನಿರ್ದೇಶಕರ ಮೇಲೆ ಪೋಲೀಸ್ ರವರಿಗೆ ಮತ್ತು ಲೋಕಾಯುಕ್ತಕ್ಕೆ ಕಂಪ್ಲೇಂಟ್ ಕೊಡುತ್ತಿದ್ದಾರೆ. ಅಂತಹ ಸದಸ್ಯರುಗಳಿಗೆ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾತನಾಡಲು ಅವಕಾಶ ನೀಡಬೇಡಿ ಎಂದು ಸರ್ವ ಸದಸ್ಯರುಗಳು ಹೇಳುತ್ತಿದ್ದಾರೆ ಅದನ್ನು ನಾವುಗಳು ಹೇಳುತ್ತಿಲ್ಲ ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಎಲ್ಲ ಸದಸ್ಯರು ಒಂದೇ ಎಂದು ಸಭೆಗೆ ತಿಳಿಸಿದಾಗ ಸಭೆಯಲ್ಲಿ ಗೊಂದಲದ ವಾತಾವರಣ ಉಂಟಾಯಿತು,

ಮುಂದುವರೆದು ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಸಭೆಗೆ ಒಂದು ಮನವಿ ಎಂದಾಗ ನಿರ್ದೇಶಕರಾದ ಶ್ರೀ ಎಂಪಿ ಮಹೇಶ್‌ರವರು ಮಾತನಾಡಿ ಸದಸ್ಯರಾದ ಶ್ರೀ ಕೆ ಎಸ್ ದಯಾನಂದರವರೇ ಏಕೆ ಇಷ್ಟೊಂದು tension ತೆಗೆದುಕೊಳ್ಳುತ್ತಿದ್ದಿರಾ? ಬ್ಯಾಂಕಿನ ಬೈಲಾ ತಿದ್ದುಪಡಿಯನ್ನು ಬ್ಯಾಂಕಿನ ವೆಬ್‌ಸೈಟ್‌ನಲ್ಲಿದೆ ನೋಡಿಕೊಳ್ಳಬಹುದು ಎಂದು ಹೇಳಿದಾಗ ಸದಸ್ಯರುಗಳಲ್ಲಿ ಗಲಾಟೆ ಶುರುವಾಯಿತು.

ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಬ್ಯಾಂಕಿನ ಸದಸ್ಯರಾದ ಶ್ರೀ ಜಿ ಎಸ್ ಬಸವರಾಜುರವರು ಸಭೆಯಲ್ಲಿ ಎದ್ದು ನಿಂತಾಗ ನಿರ್ದೇಶಕರಾದ ಶ್ರೀ ಆರ್ ಎ ಸುರೇಶ್ ಕುಮಾರ್‌ರವರು ಮಾತನಾಡಿ ಗೌರವ ಕೊಟ್ಟು ಗೌರವ ತೆಗೆದುಕೊಳ್ಳಬೇಕು ಎಂದು ಹೇಳಿದಾಗ ಸದಸ್ಯರಾದ ಶ್ರೀ ಎನ್ ಡಿ ವಿಜಯ್ ಪ್ರಕಾಶ್‌ರವರು ಮಾತನಾಡಿ ಗೌರವ ಕೊಟ್ಟು ಗೌರವ ತೆಗೆದುಕೊಳ್ಳಿ ಎಂದು ಸದಸ್ಯರಲ್ಲಿ ಮನವಿ ಮಾಡಿದಾಗ ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್‌ರವರು ಮಾತನಾಡಿ ಎಲ್ಲಾ ಸದಸ್ಯರು ಮೊದಲು ಸಭೆಗೆ ಗೌರವ ಕೊಡುವುದನ್ನು ತಿಳಿದುಕೊಳ್ಳಬೇಕು, ಅವರು honourary ಕೆಲಸ ಮಾಡುವುದಕ್ಕಾಗಿ ಬಂದಿರುವುದು ಎಂದಾಗ ಸದಸ್ಯರಾದ ಶ್ರೀ ಪಿ ಸದಾಶಿವಯ್ಯರವರು ಮಾತನಾಡಿ ಯಾರೇ ಸದಸ್ಯರಾಗಲೀ ಒಬ್ಬರೊಬ್ಬರ ಬಗ್ಗೆ ಅಗೌರವವಾಗಿ ನಡೆದುಕೊಳ್ಳುವ ಅವಶ್ಯಕತೆ ಇಲ್ಲ, ಅವರು ಸಹ ಒಂದು ಬ್ಯಾಂಕ್ ಸಂಸ್ಥೆಯನ್ನು ಉಳಿಸಬೇಕು, ಸದಸ್ಯರು ನಿರ್ದೇಶಕರುಗಳು ಕೆಲಸ ಮಾಡುತ್ತಿದ್ದಾರೆ, ವೈಯಕ್ತಿಕವಾಗಿ ಆಪಾದನೆ ಮಾಡುವುದು ಬೇಡ, ಅದರಲ್ಲಿ ಏನಾದರೂ ಲೋಪದೋಷ ಇದ್ದರೆ ಕೋರ್ಟ್ ಮತ್ತು ಕಾನೂನು ಇದೆ ಹೋರಾಟಮಾಡೋಣ ಅದನ್ನು ಬಿಟ್ಟು ವೈಯಕ್ತಿಕವಾಗಿ ಜಿದ್ದಾ ಜಿದ್ದಿ ಬೇಡ, ಈ ಮಹಾಸಭೆಯು ಚೆನ್ನಾಗಿ ನಡೆಯುತ್ತಿದೆ, ನಿರ್ದೇಶಕರು ಚೆನ್ನಾಗಿ ಕೆಲಸವನ್ನು ಮಾಡುತ್ತಿದ್ದಾರೆ, ಸದಸ್ಯರ ಸಹಕಾರ ಇದೆ, ಏನಾದರೂ ಪ್ರಶ್ನೆ ಇದ್ದರೆ ಕೇಳಲಿ ಎಂದು ಹೇಳಿದರು.

ಸದಸ್ಯರಾದ ಶ್ರೀ ಟಿ ಕೆ ಶಂಕರ್‌ರವರು ಮಾತನಾಡಿ ಈ ಬ್ಯಾಂಕಿನ ಸ್ಥಾಪಕರಾದ ಬಿ ಡಿ ಜತ್ತಿರವರು ಸ್ಥಾಪನೆ ಮಾಡಿದರು, ದಯವಿಟ್ಟು ಅವರನ್ನು ಒಂದು ಬಾರಿ ಕರೆಸಿದರೆ ಬ್ಯಾಂಕಿಗೆ ಅನುಕೂಲವಾಗುತ್ತದೆ ಎಂದು ವಿನಂತಿಸಿದರು.

ನಿರ್ದೇಶಕರಾದ ಶ್ರೀ ಎಂಪಿ ಮಹೇಶ್‌ರವರು ಮಾತನಾಡಿ ಮುಂದೆ ನೋಡುವುದಾಗಿ ಉತ್ತರಿಸಿ, ಮುಂದಿನ ಚರ್ಚೆಗೆ ಹೋಗುವುದಾಗಿ ತಿಳಿಸಿ ಬ್ಯಾಂಕಿನ ಸದಸ್ಯರಾದ ಶ್ರೀ ಜಿ ಎಸ್ ಬಸವರಾಜುರವರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಲು ನೀಡಿರುವ ಪತ್ರ.

ದಿನಾಂಕ 08-09-2025 ರ ತಮ್ಮ ಪತ್ರದಲ್ಲಿನ ವಿಷಯದ ಸಂಬಂಧವಾಗಿ ತಾವು ಕೋರಿರುವ ಮಾಹಿತಿ ಈ ಕೆಳಕಂಡಂತಿದೆ.
ಹಲವಾರು ಪ್ರಶ್ನೆಗಳನ್ನು ಕೇಳಿದ್ದಾರೆ, ಕಳೆದ 20 ವರ್ಷಗಳಿಂದ ಕೇಳುತ್ತಲೇ ಇದ್ದಾರೆ ಅವರಿಗೆ ಉತ್ತರಕೊಡುತ್ತಲೇ ಇದ್ದೇವೆ, ಆದರೆ ಈ ಸಾಲಿನಲ್ಲಿ ಮಹಾ ಸಭೆಗೆ ಒಂದು ವಿಶೇಷವಾದ ಪ್ರಶ್ನೆಯನ್ನು ಮುಂದೆ ಇಟ್ಟಿದ್ದಾರೆ, ಮೊದಲು ಆ ಪ್ರಶ್ನೆಯನ್ನು ಓದಿ ಮುಂದಕ್ಕೆ ಆ ಪ್ರಶ್ನೆಗೆ ಉತ್ತರವನ್ನು ಕೊಡುವುದಾಗಿ ತಿಳಿಸಿ ನಾನು ಆಡಳಿತ ಮಂಡಳಿ ವಿರುದ್ಧ ಅವ್ಯವಹಾರ ಆರೋಪ ಮಾಡಿದ್ದು ಆರೋಪ ದೃಢಪಟ್ಟಿದೆಯಲ್ಲದೆ ಇವರ ವಿರುದ್ಧ ಮೂರು ಕ್ರಿಮಿನಲ್ ಪ್ರಕರಣ ದಾಖಲಿಸುವುದರಿಂದ ವ್ಯಗ್ರವಾಗಿರುವ ಆಡಳಿತ ಮಂಡಳಿಯವರು ತನ್ನ ಬೆಂಬಲಿತ ಸದಸ್ಯರ ಮೂಲಕ ಮಹಾಸಭೆಯಲ್ಲಿ ನನ್ನ ಮೇಲೆ ಮಾರಣಾಂತಿಕ ಹಲ್ಲೆ ನಡೆಸುವ ಹತ್ಯೆ ಮಾಡುವ ಸಂಚು ರೂಪಿಸಿರುವುದಾಗಿ ತಿಳಿದು ಬಂದಿರುವುದರಿಂದ ಮಹಾಸಭೆ ನಡೆಯುವ ಸ್ಥಳದಲ್ಲಿ ಸಿಸಿ ಕ್ಯಾಮೆರಾ ಅಳವಡಿಸುವುದಲ್ಲದೆ ಸೂಕ್ತ ರಕ್ಷಣೆ ನೀಡಲು ಕೋರಿದೆ. ಎಂದಿದ್ದು ದಯಮಾಡಿ ಈ ಪ್ರಶ್ನೆಗೆ ಸದಸ್ಯರಾದ ಶ್ರೀ ಬಸವರಾಜುರವರು ಉತ್ತರ ಕೊಡಬೇಕು? ನಿಮಗೆ ಯಾರು ಹೇಳಿದರು, ಎಲ್ಲಿಂದ ಮಾಹಿತಿ ಬಂದಿದೆ, ಈ ತರ ಸಭೆಗೆ ಏಕೆ ಅಗೌರವವನ್ನು ತರುತ್ತೀರಾ? ಸಭೆಯನ್ನು ಬೇರೆ ದಾರಿಯಲ್ಲಿ ನಡೆದುಕೊಂಡು ಹೋಗುವಂತೆ ಏಕೆ ಅವಕಾಶ ಮಾಡಿಕೊಡುತ್ತೀರಾ? ಇದನ್ನು ನೀವು ಹೇಳಬೇಕು ಹೊರತು ನಾವು ಹೇಳಲು ಸಾಧ್ಯವಿಲ್ಲ, ದಯಮಾಡಿ ಇದಕ್ಕೆ ಉತ್ತರ ಕೊಡಬೇಕು ಉತ್ತರ ಕೊಟ್ಟ ಮೇಲೆ ನಿಮ್ಮ ಪ್ರಶ್ನೆಗಳಿಗೆ ಉತ್ತರ ಕೊಡುತ್ತೇವೆ. ಎಂದಾಗ ಸಭೆಯಲ್ಲಿ ನೆರೆದಿದ್ದ ಸದಸ್ಯರುಗಳು ಸಹ ಬಸವರಾಜುರವರು ಉತ್ತರವನ್ನು ನೀಡಬೇಕೆಂದು ಕೇಳಿಕೊಂಡರು. ಮುಂದುವರೆದು ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಇದು ಎಷ್ಟು ಸಮಂಜಸ ನಿಮಗೆ? ನಮ್ಮ ಮೇಲೆ ಎಫ್ ಐ ಆರ್ ಮಾಡಿಸುವುದು ಏನಿತ್ತು? ಎಂದಾಗ ಸದಸ್ಯರಾದ ಶ್ರೀ ಓಂ ಪ್ರಕಾಶ್‌ರವರು ಮಾತನಾಡಿ ಸದಸ್ಯರೇ, ಬ್ಯಾಂಕಿನ ನಿರ್ದೇಶಕರರುಗಳೇ ಹಾಗೂ ಕಾರ್ಯಕಾರಿ ಮಂಡಳಿಯವರೇ, ಇದು ಇಲ್ಲಿಗೆ ನಿಲ್ಲಿಸಿ, ಇನ್ನು ಇದನ್ನು ಮುಂದುವರೆಸಬೇಡಿ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ, ನೀವು ವಿಶ್ವಾಸದಲ್ಲಿ ಸಮಾನವಾಗಿ ಮಾತನಾಡಿ, ಟಿಜಿಎಂಸಿ ಬ್ಯಾಂಕ್ ರಾಜ್ಯದಲ್ಲಿಯೇ ಮೊದಲನೆ ಸ್ಥಾನದಲ್ಲಿ ಇದೆ, ಅದನ್ನು ಉಳಿಸಿಕೊಳ್ಳೋಣ, ಇದನ್ನು ಮಾತನಾಡುವುದು ಬೇಡ ಎಂದಾಗಲೂ ಸಭೆಯಲ್ಲಿ ಗೊಂದಲದ ವಾತಾವರಣ ಉಂಟಾಯಿತು. ಸದಸ್ಯರಾದ ಶ್ರೀ ಟಿ ಎಸ್ ಸುನಿಲ್ ಪ್ರಸಾದ್‌ರವರು ಮಾತನಾಡಿ ನನ್ನದೊಂದು ಪ್ರಶ್ನೆ ಕೇಳಿದೆ. ಅವಕಾಶ ಇದೆಯಾ ಅಥವಾ ಇಲ್ಲವಾ ಏಕೆಂದರೆ ನನ್ನ ಟೈಮ್ ವೇಸ್ಟ್ ಆಗುತ್ತದೆ ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಈ ತರ ಪ್ರಶ್ನೆ ಮಾಡಲು ಅವಶ್ಯಕತೆ ಇದೆಯಾ, ಎಂದಾಗ ಸದಸ್ಯರಾದ ಶ್ರೀ ಟಿ ಎಸ್ ಸುನಿಲ್ ಪ್ರಸಾದ್‌ರವರು ನನ್ನದೊಂದು ಪ್ರಶ್ನೆ ಇದೆ ಅವಕಾಶ ಇದೆಯಾ, ಇಲ್ಲವಾ wait ಮಾಡಲಾ ಎಂದು ಕೇಳಿದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಅವಕಾಶ ಇದೆ, ನಿಮ್ಮ ಪ್ರಶ್ನೆ ಇದೆ ಉತ್ತರಕೊಡುವುದಾಗಿ ತಿಳಿಸಿ ನೀವು ಕೇಳಿರುವ ಪ್ರಶ್ನೆಯನ್ನು ಸದಸ್ಯರಾದ ಶ್ರೀ ಜಿ ಎಸ್ ಬಸವರಾಜುರವರು ಸಹ ಕೇಳಿದ್ದಾರೆ ಎಂದು ತಿಳಿಸಿದರು.

ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಅವರು ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಸದಸ್ಯರಾದ ಶ್ರೀ ಜಿ ಎಸ್ ಬಸವರಾಜುರವರು ಸರ್ವ ಸದಸ್ಯರ ಸಭೆಗೆ ಮಾಡಿದ ಅವಮಾನವಿದು, ಬ್ಯಾಂಕನ್ನು ಕಳೆದ 60 ವರ್ಷದಿಂದ ನಡೆಸುತ್ತಿರುವುದು ಯಾರು ಸಹ ಈ ತರಹದ ಪದ ಬಳಕೆ ಮಾಡಿರುವುದಿಲ್ಲ, ಕಳೆದ ಚುನಾವಣೆಯಲ್ಲಿ ಸದಸ್ಯರು ತಕ್ಕ ಉತ್ತರ ನೀಡಿದ್ದಾರೆ, ನೀವು ಮಾತನಾಡಲು ಯಾವ ನೈತಿಕತೆ ಇದೆ? ಆತ್ಮಸಾಕ್ಷಿ ಇಲ್ಲವ ನಿಮಗೆ? ಗೌರವ ಇಲ್ಲವ ನಿಮಗೆ? ನಿಮಗೆ ಸದಸ್ಯರೇ ಉತ್ತರ ಕೊಟ್ಟಿದ್ದಾರೆ, ಮಹಾಪ್ರಭುಗಳು ಎಂದರೆ ಸದಸ್ಯರುಗಳು ನಿಮಗೆ ಆ ಗೌರವಾನೆ ಇಲ್ಲವಾ? ಎಂದು ಕೇಳಿದರು. ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ನಮ್ಮ ಪ್ರಶ್ನೆ ಇಷ್ಟೆ, ಅವರು ಸಭೆಗೆ ಅರ್ಜಿ ಕೊಟ್ಟು 8 ರಿಂದ 10 ಪ್ರಶ್ನೆಗಳನ್ನು ಕೇಳಿ ಉತ್ತರವನ್ನು ನೀಡಿ ಎಂದು ಎಲ್ಲರೂ ಕೊಟ್ಟಿರುವ ಹಾಗೆ ಕೊಟ್ಟಿದ್ದಾರೆ, ಕೊನೆಯ ಪ್ಯಾರಾದಲ್ಲಿ ನಮ್ಮ ಮೇಲೆ ಅಪಾದನೆ ಮಾಡಿ ಕೊಲೆ ಮಾಡುತ್ತಾರೆ, ಕೈಮಾಡುತ್ತಾರೆ ಎಂದು ಅರ್ಜಿಯನ್ನು

ಬರೆದಿದ್ದಾರೆ ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಮಾಜಿ ಉಪಾಧ್ಯಕ್ಷರು ಶ್ರೀ ಕೆ ಜಿ ಮುನಿಗಂಗಪ್ಪ ನವರು ತುಂಬ ಸಲಹೆ ಸೂಚನೆಯನ್ನು ಕೊಟ್ಟಿದ್ದು, ಅವರ ಪ್ರಶ್ನೆಗಳಿಗೆ ಗೌರವಯುತವಾಗಿ ಉತ್ತರ ತೆಗೆದುಕೊಂಡು ಹೋದರು, ಅದು ಒಂದು ಸಭೆ ನಡೆಯುವ ಲಕ್ಷಣ, ಸದಸ್ಯರಿಗೆ ನಮ್ಮ ಮೇಲೆ ನಂಬಿಕೆ ಹಾಗೂ ಗೌರವವಿದೆ, ನೀವು ಎಷ್ಟೇ ಪ್ರಯತ್ನ ಪಟ್ಟರು ಸಹ ನಿಮ್ಮ ಮಾತಿಗೆ ಮನ್ನಣೆ ಸಿಗುವುದಿಲ್ಲ, ಸುಮ್ಮನೆ ವ್ಯರ್ಥ ಪ್ರಯತ್ನ ಏಕೆ ಮಾಡುತ್ತೀರಾ? ನೀವು ಸಾಮಾನ್ಯ ಸಭೆಗೆ ಅವಮಾನ ಮಾಡಿರುವುದು, ಈ ಮಹಾಸಭೆಗೆ ತಪ್ಪಾಯಿತು ಎಂದು ಕ್ಷಮಾಪಣೆಯನ್ನು ಕೇಳಬೇಕು, ಸದಸ್ಯರಾದ ಶ್ರೀ ಜಿ ಎಸ್ ಬಸವರಾಜು ರವರೇ ನಾವು ಇದನ್ನು ಒಪ್ಪುವುದಿಲ್ಲ, ಇದು ಸಭೆಗೆ ಮಾಡಿರುವ ಅವಮಾನ ಎಂದಾಗ, ಸದಸ್ಯರಾದ ಶ್ರೀ ಜಿ ಸಿ ವಿರೇಶ್ ಬಾಬುರವರು ಮಾತನಾಡಿ ಬ್ಯಾಂಕಿಗೆ ಮತ್ತು ಸದಸ್ಯರಿಗೆ ಅವಮಾನ ಮಾಡಿದವರಿಗೆ ಇನ್ನು ಮುಂದಕ್ಕೆ ಉತ್ತರಕೊಡುವ ಅವಶ್ಯಕತೆ ಇಲ್ಲ ನಾವೆಲ್ಲರೂ ಬ್ಯಾಂಕ್ ಪರವಾಗಿ ಇದ್ದೇವೆ, ಯಾರು ಇಬ್ಬರು ಮೂರು ಜನರಿಂದ ಬ್ಯಾಂಕ್‌ಗೆ effect ಆಗುವುದಿಲ್ಲ. ಇದನ್ನು ಪರಿಗಣಿಸಿ ಇಲ್ಲಿಗೆ close ಮಾಡಿ ಎಂದರು. ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರರವರು ಮಾತನಾಡಿ ಸದಸ್ಯರಿಗೆ ಅಗೌರವ ತಂದಿರುವವರು ಎಂದಾಗ ಈ ಸರ್ವ ಸದಸ್ಯರ ಸಭೆಯಲ್ಲಿ ಸದಸ್ಯರುಗಳೆಲ್ಲರೂ ನಾವೆಲ್ಲ ಸದಸ್ಯರು ಅಧಿಕಾರ ಕೊಟ್ಟಿದ್ದೇವೆ ಅವರ ವಿರುದ್ದ ಸೂಕ್ತ ಕ್ರಮ ತೆಗೆದುಕೊಳ್ಳಿ ಎಂದು ಒಕ್ಕೋರಳಿನಿಂದ ಕಾರ್ಯಕಾರಿ ಮಂಡಳಿಯವರಿಗೆ ಹೇಳಿದರು. ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್‌ರವರು ಮಾತನಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು, ಆಡಳಿತ ಮಂಡಳಿಯವರಿಗೆ ಅಷ್ಟೆ ಅಲ್ಲ, ಸದಸ್ಯರಿಗೂ ಸಹ ಅಗೌರವವನ್ನು ತಂದಿದ್ದಾರೆ, ಸಭೆಗೆ clarity ಕೊಡಬೇಕು ಎಂದು ಹೇಳಿದರು. ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಸದಸ್ಯರಾದ ಶ್ರೀ ಜಿ ಎಸ್ ಬಸವರಾಜುರವರು ಬ್ಯಾಂಕಿನ ಆಡಳಿತ ಮಂಡಳಿಯವರ ಮೇಲೆ ಮಾಡಿರುವ ಅಪವಾದ ಸತ್ಯ ಎಂದು ಹೇಳಬೇಕು ಇಲ್ಲವೆಂದರೆ Apology ಕೇಳಬೇಕು, ಅವರು Apology ಕೇಳದೆ, ಸತ್ಯ ಎಂದು ಹೇಳದೇ ಇದ್ದರೆ ಅವರು ಕೊಟ್ಟಿರುವ ಪತ್ರವನ್ನುಓದಬೇಕಾ, ಬೇಡವಾ? ಎಂದಾಗ ಸಭೆಯಲ್ಲಿ ನೆರೆದಿದ್ದ ಸರ್ವ ಸದಸ್ಯರುಗಳು ಬೇಡ ಬೇಡ ಎಂದು ಉತ್ತರಿಸಿದರು. ಸದಸ್ಯರಾದ ಶ್ರಿ ಕೆ ಎನ್ ಪ್ರವೀಣ್ ಕುಮಾರ್‌ರವರು ಮಾತನಾಡಿ ಬೇಡ ಬೇಡ ಇದೆಲ್ಲ ಅಸತ್ಯದಿಂದ ಕೂಡಿದೆ ಇವರು ಸದಸ್ಯರ ಮೇಲೆ ಮತ್ತು ಆಡಳಿತ ಮಂಡಳಿಯವರ ಮೇಲೆ ಆರೋಪ ಮಾಡಿದ್ದಾರೆ ಹಾಗೂ ಅಗೌರವವನ್ನು ತಂದಿದ್ದಾರೆ, ಇಂತಹ ಸದಸ್ಯರುಗಳಿಗೆ ತಾವುಗಳು ಉತ್ತರ ಕೊಡುವ ಅಗತ್ಯವಿಲ್ಲ ಎಂದಾಗ ಸದಸ್ಯರಾದ ಶ್ರೀ ವೀರೇಶ್ ಬಾಬುರವರು ಮಾತನಾಡಿ ಇವರು ಸಾಮಾಜಿಕ ಜಾಲತಾಣದಲ್ಲಿ ಹಾಕಿರುವುದರಿಂದ ಬ್ಯಾಂಕಿನ ಘನತೆ ಬಹಳ ಕಡಿಮೆಯಾಗಿದೆ, ಆದ್ದರಿಂದ apology ಕೇಳಿ ಮುಂದುವರೆಸಿ ಇಲ್ಲವೆಂದರೆ ಈ ವಿಷಯವನ್ನು ಬಿಟ್ಟು ಮುಂದೆ ಹೋಗುವಂತೆ ತಿಳಿಸಿದರು. ನಂತರ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಅವರು ಕೊಟ್ಟಿರುವ ಅರ್ಜಿಯಲ್ಲಿ ಆ ಪದ, ವಾಕ್ಯವನ್ನು ಬಳಸಿರುವುದರಿಂದ ಅವರು ಏನು ಉತ್ತರವನ್ನು ಕೊಡುತ್ತಾರೆ ಕೇಳಿ ಎಂದು ಸಭೆಗೆ ಹೇಳಿದರು.

ಮುಂದುವರೆದು ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಸದಸ್ಯರಾದ ಶ್ರೀ ಜಿ ಎಸ್ ಬಸವರಾಜುರವರು ಪ್ರಶ್ನೆಗಳನ್ನು ಕೇಳಿದ್ದಾರೆ, ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ. ಅವರ ಮೇಲೆ ಮುಂದಿನ ಕ್ರಮಕ್ಕಾಗಿ ಈಗಾಗಲೇ ಎಸ್ ಪಿ ರವರಿಗೆ ಕಂಪ್ಲೇಂಟ್ ಕೊಟ್ಟಿದ್ದೇವೆ ಎಂದು ಹೇಳಿದರು.

**5. ಸದಸ್ಯರಾದ ಶ್ರೀ ಜಿ ಎಸ್ ಬಸವರಾಜುರವರು ದಿನಾಂಕ 08-09-2025ರ ತಮ್ಮ ಪತ್ರದಲ್ಲಿನ ವಿಷಯದ ಸಂಬಂಧವಾಗಿ ತಾವು ಕೋರಿರುವ ಮಾಹಿತಿ ಈ ಕೆಳಕಂಡಂತಿದೆ.**

**ವಿಷಯ:– ಬ್ಯಾಂಕಿನ ಸರ್ವ ಸದಸ್ಯರ ಸಭೆಯಲ್ಲಿ ಚರ್ಚಿಸುವ ವಿಷಯಕ್ಕೆ ಸಂಬಂಧಿಸಿದಂತೆ.**
ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೇಲ್ಕಂಡ ವಿಳಾಸದಾರನಾದ ನಾನು ಬ್ಯಾಂಕಿನ ಸಕ್ರೀಯ ಸದಸ್ಯನಾಗಿದ್ದು, ಸರ್ವ ಸದಸ್ಯರ ಸಭೆಯಲ್ಲಿ ಈ ಕೆಳಕಂಡ ವಿಚಾರಗಳ ಬಗ್ಗೆ ಬ್ಯಾಂಕಿನ ಹಿತಾಸಕ್ತಿಯಿಂದ ಚರ್ಚಿಸಲು ಬಯಸಿರುತ್ತೇನೆ.

1. ಮಹಾ ಸಭೆಯ ಒಪ್ಪಿಗೆಗಾಗಿ ಮಂಡಿಸಿರುವ ಬೈಲಾ ತಿದ್ದುಪಡಿ ಕ್ರಮ ಸಂಖ್ಯೆ 01 ರಂತೆ ಇದುವರೆಗೂ ಈ ರೀತಿಯ ಅಧಿಕಾರ ಇಲ್ಲದಿರುವುದು ಹಾಗೂ ಸದಸ್ಯರನ್ನು ವಜಾಗೊಳಿಸಿರುವುದು ಅಕ್ರಮವೆಂದು ಸಾಬೀತಾಗಿರುತ್ತದೆ. ಸದರಿ ತಿದ್ದುಪಡಿಯ ಜೊತೆಗೆ, ಬ್ಯಾಂಕಿನ ಸಿಬ್ಬಂದಿ ಹಾಗೂ ಬ್ಯಾಂಕಿನ ನಿರ್ದೇಶಕ ಇಂಥಹದ್ದೇ ಕೃತ್ಯಗಳಲ್ಲಿ ಭಾಗಿಯಾದಾಗ, ಇವರ ವಿರುದ್ದವೂ ಕಾನೂನು ಕ್ರಮ ಜರುಗಿಸಲು, ಇವರ ಸ್ಥಾನದಿಂದ ವಜಾಗೊಳಿಸಲು ಹಾಗೂ ಬ್ಯಾಂಕಿನ ಸದಸ್ಯತ್ವ ರದ್ದುಗೊಳಿಸಲು ಸೂಕ್ತ ಪ್ರಾಧಿಕಾರಕ್ಕೆ ದೂರು ನೀಡುವ ಅಧಿಕಾರ ಬ್ಯಾಂಕಿನ ಸದಸ್ಯನಿಗೆ ಇರತಕ್ಕದ್ದು ಎಂದು ಬ್ಯಾಂಕಿನ ಹಿತಾಸಕ್ತಿಯಿಂದ ತಿದ್ದುಪಡಿ ತರಲು ವಿನಂತಿ.
**ಸಮಾಧಾನ:– ಒಂದು ವೇಳೆ ನೀವು ತಿಳಿಸಿರುವಂತಹ ಕೃತ್ಯದಲ್ಲಿ ಅಂದರೆ, ತಾವು ಉಲ್ಲೇಖಿಸಿರುವ ಸದಸ್ಯರ ವಜಾ ಪ್ರಕರಣದಲ್ಲಿ ನಡೆದಿರುವ ರೀತಿಯಲ್ಲಿ ಆಡಳಿತ ಮಂಡಳಿಯ ಸದಸ್ಯರು ಬ್ಯಾಂಕಿನ ಘನತೆ, ಗೌರವ ಹಾಗೂ ಹಿತಾಸಕ್ತಿಗೆ ಬಾದಕವಾಗುವಂತೆ ಅಥವಾ ಬ್ಯಾಂಕಿಗೆ ನಷ್ಟ ಉಂಟುಮಾಡುವಂತೆ ವರ್ತಿಸಿದ್ದರೆ ಅಥವಾ ವರ್ತಿಸುತ್ತಿದ್ದರೆ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಕಲಂ 29 (ಸಿ)(8)(ಬಿ) ರ ಅನ್ವಯ ಆಡಳಿತ ಮಂಡಳಿಯವರನ್ನು ಸದಸ್ಯತ್ವದಿಂದ ಅನರ್ಹಗೊಳಿಸಲು ಕಾಯಿದೆಯಲ್ಲೇ ಅವಕಾಶವಿದೆ.**

**ಬ್ಯಾಂಕಿನ ಸಿಬ್ಬಂದಿಗಳಿಂದ ಇಂತಹ ಅಪಸವ್ಯಗಳು ಸಂಭವಿಸಿದಲ್ಲಿ ಆಡಳಿತ ಮಂಡಳಿಯಿಂದ ಅನುಮೋದನೆಗೊಂಡಿರುವ ಸಿಬ್ಬಂದಿ ಶಿಸ್ತು ನಿಯಮಾವಳಿಗಳ ಅನ್ವಯ ಆರೋಪಿತ ಸಿಬ್ಬಂದಿಯ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು, ಈ ವರೆಗೆ ಇಂತಹ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ. (ಸಿಬ್ಬಂದಿ ಸಂಬಂಧಿತ ವಿಷಯಗಳು ಆಡಳಿತಾತ್ಮಕ ವಿಚಾರವಾದುದರಿಂದ ಸಾಮಾನ್ಯ ಸಭೆಯಲ್ಲಿ ಚರ್ಚೆಗೆ ಅವಕಾಶವಿರುವುದಿಲ್ಲ.)**

**ಬೈಲಾ ತಿದ್ದುಪಡಿ ಎಂದರೆ, ಸಂಸ್ಥೆಯ ಹಿತಾಸಕ್ತಿಯ ದೃಷ್ಟಿಯಿಂದ ಇದುವರೆವಿಗೂ ಇಲ್ಲದಿರುವ ಅಧಿಕಾರ/ನಿಯಮ ಅಥವಾ ಅನುಕೂಲವನ್ನು ಹೊಸದಾಗಿ ಸೇರ್ಪಡೆಗೊಳಿಸಿಕೊಳ್ಳುವುದು. ಈ ಅಂಶವು ಈಗಾಗಲೇ ಬೈಲಾ ಮತ್ತು ಕಾಯಿದೆಗಳಲ್ಲಿದ್ದು, ಮಾಹಿತಿಯ ನಿಖರತೆಗಾಗಿ ಕಾನೂನು ತಜ್ಞರ ಸಲಹೆ ಪಡೆದು ಬ್ಯಾಂಕಿನ ಹಿತದೃಷ್ಟಿಯಿಂದ ಸೇರ್ಪಡೆಗೊಳಿಸಲಾಗುತ್ತಿದೆ. ಈ ರೀತಿಯ ಕ್ರಮಗಳಿಗೆ ಕಾಯಿದೆಯಲ್ಲೇ ಅವಕಾಶ ಕಲ್ಪಿಸಲಾಗಿದ್ದು, ಈ ನಡೆಯು ಅಕ್ರಮ ಎಂಬುದು ಸೂಕ್ತವಲ್ಲ.**

2. ಸರ್ಕಾರಿ ಆಸ್ತಿಯನ್ನು ದಾಖಲೆಗಳಲ್ಲಿ ಅಡಮಾನ ಮಾಡಿಕೊಂಡು ಹೆಚ್.ಎಂ.ಎಸ್. ವಿದ್ಯಾಸಂಸ್ಥೆಯ 32 ಸಾವಿರ ಮೌಲ್ಯದ ಆಸ್ತಿಗೆ 4 ಕೋಟಿ ಸಾಲ ನೀಡಿರುವ ಬಗ್ಗೆ ದಾಖಲೆಗಳೊಂದಿಗೆ ಸವಿಸ್ತಾರವಾಗಿ ಚರ್ಚಿಸುವುದು.
**ಸಮಾಧಾನ:– ಹೆಚ್. ಎಂ. ಎಸ್. ವಿದ್ಯಾಸಂಸ್ಥೆಯು ನಮ್ಮ ಬ್ಯಾಂಕಿನೊಂದಿಗೆ ಸುಮಾರು 30 ವರ್ಷಗಳಿಗೂ ಮೀರಿದ ವ್ಯಾವಹಾರಿಕ ಸಂಬಂಧವನ್ನು ಹೊಂದಿರುತ್ತದೆ. ಈ ಸಂಸ್ಥೆಯವರು ಒಟ್ಟು 5 ಆಸ್ತಿಗಳನ್ನು ಅಡಮಾನ ಮಾಡಿ 2 ಸಾಲಗಳನ್ನು ಪಡೆದಿರುತ್ತಾರೆ, ಆ ಪೈಕಿ ನೀವು ಆರೋಪಿಸಿರುವ ಸ್ಥಿರಾಸ್ತಿಯು ದಿನಾಂಕ: 19-11-1992 ರಂದು ಟೂಡಾದವರ ನಿರ್ದೇಶನದಂತೆ ನಗರ ಸಭಾ ಆಯುಕ್ತರಿಂದ ಹೆಚ್. ಎಂ. ಎಸ್. ಸಂಸ್ಥೆಯವರಿಗೆ Lease cum Sale Agreement ನೋಂದಣಿಯಾಗಿದ್ದು ನಂತರ ದಿನಾಂಕ 10-06-2003 ರಂದು ಶುದ್ಧಕ್ರಯ ಪತ್ರವನ್ನು ನೋಂದಣಿ ಮಾಡಿಕೊಟ್ಟಿರುತ್ತಾರೆ. ಮುಂದುವರೆದು, ಖಾತೆ ಕಂದಾಯದ ದಾಖಲೆಗಳು ಸಂಸ್ಥೆಯ ಹೆಸರಿಗೆ ವರ್ಗಾವಣೆಯಾಗಿರುತ್ತವೆ ಅಂದರೆ ಸದರಿ ಸ್ಥಿರಾಸ್ತಿಗೆ ಸಾಲ ಪಡೆದಿದ್ದ ಸಂಸ್ಥೆಯು Absolute Owner ಆಗಿರುತ್ತದೆ ಮತ್ತು ಸಾಲ ನೀಡಿದಾಗ ಆಸ್ತಿಯ ಮಾರುಕಟ್ಟೆ ಮೌಲ್ಯ ರೂ.7.63 ಕೋಟಿಗಳಿರುತ್ತದೆ.**

**ನೀವು ಆರೋಪಿಸಿರುವ ಸಾಲದ ಖಾತೆಯು ನೀವು ಆರೋಪಿಸಿ ಮಾಧ್ಯಮಗಳ ಮುಖಾಂತರ ಅಪಪ್ರಚಾರ ಮಾಡುವ ಮೊದಲೇ ಅಂದರೆ ದಿನಾಂಕ 05-07-2024 ರಂದು ಸದರಿ ಸಾಲದ ಖಾತೆಗೆ ಯಾವುದೇ ರಿಯಾಯಿತಿ ಪಡೆಯದೇ ಹಾಗೂ ಬ್ಯಾಂಕಿಗೂ ಸಹ ಯಾವುದೇ ನಷ್ಟವನ್ನೂ ಉಂಟುಮಾಡದೇ ಸಂಪೂರ್ಣವಾಗಿ ಹಣವನ್ನು ಪಾವತಿ ಮಾಡಿ ಸಾಲದ ಖಾತೆಯನ್ನು ಚುಕ್ತಾ ಮಾಡಿರುತ್ತಾರೆ ಹಾಗಾಗಿ ಈ ವಿಚಾರವಾಗಿ ಚರ್ಚೆ ನಡೆಸುವುದು ಅಪ್ರಸ್ತುತ.**

**ಮುಂದುವರೆದು, ಈ ವಿಚಾರವಾಗಿ ಸಭೆಯ ಗಮನಕ್ಕೆ ತರಬಯಸುವುದೇನೆಂದರೆ ಯಾವುದೇ ರಿಯಾಯಿತಿಯನ್ನೂ ನೀಡದೇ ಹಾಗೂ ಬ್ಯಾಂಕಿಗೂ ಸಹ ಯಾವುದೇ ನಷ್ಟವೂ ಉಂಟಾಗದಂತೆ ಸಂಪೂರ್ಣವಾಗಿ ಹಣವನ್ನು ವಸೂಲು ಮಾಡಿ ಸಾಲದ ಖಾತೆಯನ್ನು ಚುಕ್ತಾ ಮಾಡಿದ್ದರೂ ಸಹ ಮಾಧ್ಯಮದ ಮುಖಾಂತರ ಬ್ಯಾಂಕಿನ ಘನತೆಗೆ ಧಕ್ಕೆ ತರುವಂತಹ ರೀತಿಯಲ್ಲಿ ನಡೆದುಕೊಳ್ಳುತ್ತಿರುವುದನ್ನು ಗಮನಿಸಿದರೆ ಈ ಸದಸ್ಯರಿಗೆ ಬ್ಯಾಂಕಿನ ಬಗ್ಗೆ ಇರುವ ಅಸಹನೆ, ಅಗೌರವ, ದುರುದ್ದೇಶ ಮತ್ತು ದ್ವೇಷದ ಭಾವನೆ ಅನಾವರಣಗೊಳ್ಳುತ್ತದೆ.**

3. ಬೆಂಗಳೂರಿನ ಯಲಹಂಕ ಶಾಖೆಯ ಸಾಲದ ಖಾತೆ ಸಂಖ್ಯೆ 30304249450 ಹಾಗೂ 30304172351 ಸಾಲದ ಖಾತೆಗಳನ್ನು ನಿಯಮ ಬಾಹಿರವಾಗಿ ಆಡಳಿತ ಮಂಡಳಿ ಖೈದುಗೊಳಿಸಿ ಬ್ಯಾಂಕಿಗೆ ಅಪಾರ ನಷ್ಟ ಉಂಟುಮಾಡಿರುವ ಬಗ್ಗೆ ಸವಿಸ್ತಾರವಾಗಿ ಚರ್ಚಿಸಲು ಅವಕಾಶ ನೀಡುವುದು.
**ಸಮಾಧಾನ: ಈ ಎರಡೂ ಸಾಲದ ಖಾತೆಗಳನ್ನು ನಿಯಮಾನುಸಾರ ಅಂದರೆ, ಬ್ಯಾಂಕಿನ ಬೈಲಾ ಸಂಖ್ಯೆ 83.1 ರ ರೀತ್ಯಾ ಮತ್ತು ಭಾರತೀಯ ರಿಜರ್ವ್ ಬ್ಯಾಂಕಿನ ಸುತ್ತೋಲೆ ಸಂಖ್ಯೆ RBI/2023-24/40 DOR.STR.REC.20/ 21.04.048/2023-24 ದಿನಾಂಕ 08-06-2023 ರಲ್ಲಿ ಸೂಚಿಸಿರುವ ಅವಕಾಶಗಳ ರೀತ್ಯ ಸಾಲದ ಖಾತೆಗಳನ್ನು ಖೈದುಗೊಳಿಸಲಾಗಿರುತ್ತದೆ. ಸದರಿ ಸಾಲದ ಖಾತೆಗಳು ದಿನಾಂಕ: 17-02-2024 ರಂದು ಸಂಪೂರ್ಣವಾಗಿ ತೀರುವಳಿಯಾಗಿದ್ದು, ಈ ವಿಚಾರವು ಹಿಂದಿನ ಸಾಲಿನಲ್ಲಿ ನಡೆದ ವ್ಯವಹಾರವಾಗಿದ್ದು, 2023-24 ನೇ ಸಾಲಿನ ವಾರ್ಷಿಕ ಸಭೆಯಲ್ಲಿ ಗಮನಕ್ಕೆ ತರಲಾಗಿದ್ದು, ಈಗ ಇದರ ಚರ್ಚೆ ಅತಾರ್ಕಿಕವೆನಿಸುತ್ತದೆ.**

4. ಬೆಂಗಳೂರಿನ ಪುಷ್ಪಕ್ ಮೋಟರ್ಸ್ ಸಾಲದ ಖಾತೆಗೆ ಸಂಬಂಧಿಸಿದಂತೆ ದಾಖಲೆ ಸಹಿತ ಚರ್ಚೆಗೆ ಅವಕಾಶ ನೀಡಿ.
**ಸಮಾಧಾನ:– ಸದರಿ ಸಾಲದ ಖಾತೆಯು ಸತತವಾಗಿ 5-6 ವಾರ್ಷಿಕ ಸಭೆಗಳಲ್ಲಿ ಚರ್ಚೆಯಾಗಿ ಅಂತಿಮವಾಗಿ ದಿನಾಂಕ: 31-07-2023 ರಂದು ಭಾರತೀಯ ರಿಜರ್ವ್ ಬ್ಯಾಂಕಿನ ಸುತ್ತೋಲೆ ಸಂಖ್ಯೆ RBI/2023-24/40 DOR.STR.REC.20/21.04.048/2023-24 ದಿನಾಂಕ 08-06-2023 ರ ಅನ್ವಯ Technical write off ಮುಖಾಂತರ ಸಮಾಪನಗೊಳಿಸಲಾಗಿದ್ದು 2022-23 ನೇ ಸಾಲಿನಲ್ಲಿ ವಾರ್ಷಿಕ ಮಹಾಸಭೆಯು ಚರ್ಚಿಸಿ ಅನುಮೋದಿಸಿರುತ್ತದೆ. ಮುಂದುವರೆದು Technical write off ಮಾಡಿರುವ ಮೊತ್ತದ ವಸೂಲಾತಿಗಾಗಿ ಕಾನೂನು ಪ್ರಕ್ರಿಯೆಯು ಜಾರಿಯಲ್ಲಿದ್ದು ಹಾಲಿ ಪ್ರಕರಣವು ನ್ಯಾಯಾಲಯದಲ್ಲಿರುವುದರಿಂದ ಪುನಃ ಈ ವಿಚಾರದ ಚರ್ಚೆ ಅವಶ್ಯಕವಿರುವುದಿಲ್ಲ.**

5. ಬೆಂಗಳೂರು ಮೂಲದ ವಿಕ್ರಮ್ ಪ್ರಭಾಕರ್ ವೈಯಕ್ತಿಕ ಹಾಗೂ ಪಾಲುಗಾರಿಕೆ ಸಂಸ್ಥೆಗಳ ಸುಸ್ತಿ ಸಾಲಗಳಿಂದ ಬ್ಯಾಂಕಿಗೆ ಸುಮಾರು 50 ಕೋಟಿಗೂ ಅಧಿಕ ಹಣ ನಷ್ಟವಾಗುವ ಸಂಭವವಿರುವುದಾಗಿ ಬಲ್ಲ ಮೂಲಗಳಿಂದ ತಿಳಿದು ಬಂದಿದ್ದು, ದಾಖಲೆಸಹಿತ ಸಭೆಯಲ್ಲಿ ಚರ್ಚಿಸುವುದು.
**ಸಮಾಧಾನ:–ಸಾಲದ ವಸೂಲಾತಿಗಾಗಿ ಕಾನೂನು ಕ್ರಮ ಜರುಗಿಸಲಾಗಿದ್ದು, ಅದರ ಜೊತೆಗೆ ಸಾಲಗಾರರೊಂದಿಗೂ ವಸೂಲಾತಿಯ ಬಗ್ಗೆ ನಿರಂತರ ಸಂಪರ್ಕವಿಟ್ಟುಕೊಂಡಿದ್ದು ವರದಿ ಸಾಲಿನಲ್ಲಿ ರೂ. 3 ಕೋಟಿಗಳನ್ನು ಜಮಾ ಮಾಡಿರುತ್ತಾರೆ ಈ ವರ್ಷಾಂತ್ಯದೊಳಗಾಗಿ ಸಂಪೂರ್ಣ ಸಾಲವನ್ನು ತೀರುವಳಿ ಮಾಡುವುದಾಗಿ ತಿಳಿಸಿರುತ್ತಾರೆ. ಹಾಲಿ ಪ್ರಕರಣವು ನ್ಯಾಯಾಧಿಕರಣದಲ್ಲಿ ವಿಚಾರಣೆಯಲ್ಲಿರುವುದರಿಂದ ಈ ವಿಚಾರವಾಗಿ ಚರ್ಚೆ ನಡೆಯುವುದು ಸೂಕ್ತವಾಗಿರುವುದಿಲ್ಲ.**

6. 2022 ಏಪ್ರಿಲ್‌ನಿಂದ 2025 ಮಾರ್ಚ್‌ವರೆಗೂ ವಿವಿಧ ನ್ಯಾಯಲಯಗಳಲ್ಲಿ ನಡೆದಿರುವ, ನಡೆಯುತ್ತಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ, ಪ್ರಕರಣವಾರು ಖರ್ಚು–ವೆಚ್ಚಗಳ ದಾಖಲೆಗಳನ್ನು ಬ್ಯಾಂಕಿನ ದೃಢೀಕರಣದೊಂದಿಗೆ ನೀಡುವುದು ಹಾಗೂ ಸಭೆಯಲ್ಲಿ ಇದರ ಬಗ್ಗೆ ಚರ್ಚಿಸುವುದು.

**ಸಮಾಧಾನ:– ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬ್ಯಾಂಕಿನಿಂದ ಈಗಾಗಲೇ ಹಲವು ಬಾರಿ ಸದರಿ ವಿಷಯಕ್ಕೆ ಪತ್ರ ಮುಖೇನ ಉತ್ತರಿಸಿದ್ದು, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ–1959 ಕಲಂ 19-J ರಂತೆ ಯಾವುದೇ ಸದಸ್ಯರು ತನಗೆ ಸಂಬಂಧಪಟ್ಟಂತೆ ತನ್ನ ದೈನಂದಿನ ವ್ಯವಹಾರದಲ್ಲಿ ಸಹಕಾರ ಸಂಘವು ನಿರ್ವಹಿಸುತ್ತಿರುವ ಪುಸ್ತಕಗಳನ್ನು, ಲೆಕ್ಕಗಳನ್ನು ಮಾಹಿತಿಯನ್ನು ನೋಡಲು, ಪಡೆಯಲು ಅವಕಾಶವಿದ್ದು ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮ – 1960 ನಿಯಮ 56 ರಂತೆ ಕೆಲವೊಂದು ದಾಖಲೆಗಳನ್ನು ಮಾತ್ರ ನಿಗಧಿತ ಶುಲ್ಕದೊಂದಿಗೆ ಪ್ರಮಾಣಿತ ಪ್ರತಿಯನ್ನು ಪಡೆಯಬಹುದೆಂದು ಇದ್ದು, ತಾವು ಕೋರಿರುವ ದಾಖಲೆಗಳನ್ನು ಕೊಡಲು ಸಾಧ್ಯವಿರುವುದಿಲ್ಲ ಹಾಗೂ ಪ್ರತಿ ವಾರ್ಷಿಕ ಸಭೆಯಲ್ಲಿ ಚರ್ಚಿಸಿ ಕಾನೂನು ಸಲಹೆ ಮತ್ತು ನ್ಯಾಯಾಲಯಗಳಿಗೆ ತಗಲುವ ವೆಚ್ಚಗಳಿಗೆ ಸಂಬಂಧಿಸಿದಂತೆ ಮುಂಚಿತವಾಗಿ ಆಯವ್ಯಯ ಪತ್ರವನ್ನು ಮಂಡಿಸಿ ನಂತರ ಆಯಾ ಸಾಲಿನ ವೆಚ್ಚಗಳಿಗೆ ಸಾಮಾನ್ಯ ಸಭೆಯು ಅನುಮೋದನೆಯನ್ನು ನೀಡಿರುವುದರಿಂದ ಪುನಃ ಚರ್ಚಿಸುವ ಅಗತ್ಯವಿರುವುದಿಲ್ಲ.**

7. 2015ರಲ್ಲಿ 2025 ರವರೆಗಿನ ಬ್ಯಾಂಕಿನಿಂದ ಸಾಲ ನೀಡಿರುವುದು ಹಾಗೂ ಸುಸ್ತಿ ಸಾಲಗಳಿಗೆ ಸಂಬಂಧಿಸಿದಂತೆ ನಿಯಮ ಮೀರಿ ಸಾಲ ನೀಡಿರುವುದು, ಸಾಲದ ಖಾತೆಗೆ ಅಕ್ರಮ ಹಣ ವರ್ಗಾವಣೆ, ಅಧಿಕಾರ ಮೀರಿ ಬ್ಯಾಂಕಿಗೆ ನಷ್ಟವಾಗುವಂತೆ ಸಾಲದ ಖಾತೆ ಖೈದುಗೊಳಿಸಿರುವುದಾಗಿ ಬಲ್ಲ ಮೂಲಗಳಿಂದ ತಿಳಿದುಬಂದಿದ್ದು, ಈ ಆರೋಪ ಸುಳ್ಳು ಅನ್ನುವುದಾದರೆ ಸದರಿ ಆಡಳಿತ ಮಂಡಳಿಯಲ್ಲಿ ಈ ವಿಚಾರವಾಗಿ ಪ್ರಾಮಾಣಿಕತೆ ಇದ್ದಲ್ಲಿ ನೂರಾರು ಕೋಟಿ ಈ ಅವ್ಯವಹಾರವನ್ನು ಇ.ಡಿ ಅಥವಾ ಸಿ.ಬಿ.ಐ ತನಿಖೆಗೆ ಬ್ಯಾಂಕಿನ ಹಿತಾಸಕ್ತಿಯಿಂದ ಕೂಡಲೇ ಒಪ್ಪಿಸಿ.

**ಸಮಾಧಾನ:– ಬ್ಯಾಂಕು ಯಾವುದೇ ನಿಯಮಗಳನ್ನು ಉಲ್ಲಂಘಿಸದಂತೆ ನಿಯಮಾನುಸಾರ ಕಾರ್ಯನಿರ್ವಹಿಸುತ್ತಿದ್ದು, ಲಾಗಾಯ್ತಿನಿಂದ/ಆರಂಭದಿಂದಲೂ ಪ್ರತಿವರ್ಷ ಬ್ಯಾಂಕಿನ ಆಗುಹೋಗುಗಳು ಮತ್ತು ಲಾಭ ನಷ್ಟಗಳನ್ನು ಸಾಮಾನ್ಯ ಸಭೆಯಲ್ಲಿ ಸರ್ವ ಸದಸ್ಯರ ಗಮನಕ್ಕೆ ತರುವ ಮೂಲಕ ಪಾರದರ್ಶಕತೆಯನ್ನು ತೋರುತ್ತಿರುವುದರಿಂದಲೂ ಹಾಗೂ ಸನ್ನದು ಲೆಕ್ಕಪರಿಶೋಧಕರು, ಆಂತರಿಕ ಲೆಕ್ಕಪರಿಶೋಧಕರು, ಸಮವರ್ತಿತ ಲೆಕ್ಕಪರಿಶೋಧಕರು ಮತ್ತು RBI ಪರಿವೀಕ್ಷಕರುಗಳು ಬ್ಯಾಂಕಿನ ಎಲ್ಲ ವ್ಯವಹಾರಗಳನ್ನು ಕಾಲಕಾಲಕ್ಕೆ ನಿಯಮಿತವಾಗಿ ಪರಿಶೀಲನೆ/ಪರಿಶೋಧನೆ ಮಾಡುತ್ತಿರುತ್ತಾರೆ ಇಲ್ಲಿಯವರೆಗೆ ಯಾವುದೇ ರೀತಿಯ ಗುರುತರ ಆರೋಪಗಳು ವರದಿಯಾಗಿರದ ಕಾರಣ ಯಾವುದೇ ತನಿಖೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ.**

8. ಬ್ಯಾಂಕಿನ ಹಿರಿಯ ಸದಸ್ಯರಾದ ಶ್ರೀ ಶಂಕರ್ ಪ್ರಸಾದ್ ಇವರ ಸುಸ್ತಿ ಸಾಲ ಹಾಗೂ ಇವರ ಆಸ್ತಿ ಬಹಿರಂಗ ಹರಾಜಿಗೆ ಸಂಬಂಧಿಸಿದಂತೆ ಆಡಳಿತ ಮಂಡಳಿ ಮಾಡಿರುವ ಅನ್ಯಾಯ ಹಾಗೂ ಮೋಸದ ಬಗ್ಗೆ ದಾಖಲೆ ಸಹಿತ ಚರ್ಚಿಸುವುದು.

**ಸಮಾಧಾನ:–ಸದರಿ ಸಾಲಗಾರರೂ ಸಹ ಖುದ್ದು ಬ್ಯಾಂಕಿನ ಸದಸ್ಯರಾಗಿದ್ದು, ಅವರೊಂದಿಗೆ ಪತ್ರ ವ್ಯವಹಾರ ನಡೆಸಿ ನ್ಯಾಯಾಲಯದ ಆದೇಶ ಪಾಲನೆ ಮಾಡುವಂತೆ ಈಗಾಗಲೇ ತಿಳುವಳಿಕೆ ನೀಡಲಾಗಿರುತ್ತದೆ. ಸಾಮಾನ್ಯ ಸಭೆಗಳಲ್ಲಿ, ಒಬ್ಬ ಸದಸ್ಯ ಮತ್ತೊಬ್ಬ ಸದಸ್ಯನ ವೈಯಕ್ತಿಕ ಸಾಲದ ವಿಚಾರದ ಬಗ್ಗೆ ಚರ್ಚಿಸಲು ಅಕಾಶವಿರುವುದಿಲ್ಲ.**

9. 2022ರ ಆಡಳಿತ ಮಂಡಳಿಯ ತೀರ್ಮಾನದಂತೆ ಹಲವು ಸುಸ್ತಿ ಸಾಲಗಳಿಗೆ ಸಂಬಂಧಿಸಿದಂತೆ, ಬ್ಯಾಂಕಿಗೆ ಬರಬೇಕಾದ 124.60 ಕೋಟಿಗಳಿಗೆ ಬದಲಾಗಿ ಕೇವಲ 92 ಕೋಟಿಗಳಿಗೆ ಆಸ್ತಿಯನ್ನು ಎ. ಆರ್. ಸಿ. ಐ. ಎಲ್ ಸಂಸ್ಥೆಗೆ ಮಾರಾಟ ಮಾಡಿರುವುದು, ಎ.ಆರ್.ಸಿ.ಐ.ಎಲ್ ನಿಂದ 92 ಕೋಟಿ ಬಡ್ಡಿ ಸಹಿತ ವಸೂಲಾಗಿರುವ ಬಗ್ಗೆ ನಷ್ಟವಾಗಿರುವ ರೂ. 32.60 ಕೋಟಿಯನ್ನು ಖರ್ಚು ಎಂದು ತೋರಿಸಿ ಮಹಾಸಭೆಗೆ ವಂಚಿಸಿರುವ ಬಗ್ಗೆ ಈಗಾಗಲೇ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದು 2023 ರ ಮಹಾಸಭೆಯಲ್ಲಿ ಆಡಳಿತ ಮಂಡಳಿ ನಷ್ಟವಾಗಿರುವ ರೂ.32.60 ಕೋಟಿ ಬ್ಯಾಂಕಿಗೆ ಬರುವುದೆಂದು ತಿಳಿಸಿರುವುದು ಸರಿಯಷ್ಟೆ. ಈ ಹಣ ಬ್ಯಾಂಕಿಗೆ ಬಂದಿರುವ ದಾಖಲೆಗಳನ್ನು ಬ್ಯಾಂಕಿನ ದೃಢೀಕರಣದೊಂದಿಗೆ ನೀಡುವುದು ಹಾಗೂ ಸವಿಸ್ತಾರವಾಗಿ ಚರ್ಚಿಸುವುದು.

**ಸಮಾಧಾನ:–ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ಕಳೆದ ಸಾಮಾನ್ಯ ಸಭೆಗಳಲ್ಲಿ ಮಹಾ ಸಭೆಯ ಗಮನಕ್ಕೆ ತಂದು ಸಾಕಷ್ಟು ಸುದೀರ್ಘವಾಗಿ ಚರ್ಚೆ ನಡೆಸಿದ ನಂತರ ಮಹಾ ಸಭೆಯು ಅನುಮೋದನೆಯನ್ನು ನೀಡಿರುತ್ತದೆ ಹಾಗಾಗಿ ಈ ವಿಚಾರವನ್ನು ಮತ್ತೆ ಮತ್ತೆ ಚರ್ಚಿಸುವ ಅಗತ್ಯವಿಲ್ಲ. ಆದರೂ ಸಭೆಯ ಗಮನಕ್ಕೆ ತರಬಯಸುವ ವಿಚಾರವೇನೆಂದರೆ, ಈ ವರೆವಿಗೆ ರೂ. 38.41 ಕೋಟಿ ಗಳು ಬ್ಯಾಂಕಿಗೆ ಜಮೆಯಾಗಿರುತ್ತದೆ. ಸಾಲಕ್ಕೆ ಅಡಮಾನವಾಗಿರುವ ಸ್ವತ್ತುಗಳು ARCIL ನವರಿಗೆ ಮಾರಾಟ ಮಾಡಿರುವುದಿಲ್ಲ ಬದಲಿಗೆ Assignment ಮಾಡಲಾಗಿರುತ್ತದೆ. ARCIL ನವರೊಂದಿಗೆ ಮಾಡಿಕೊಳ್ಳಲಾಗಿರುವ Assignment Agreement ಮತ್ತು RBI ನಿಯಮಾವಳಿಗಳ ಪ್ರಕಾರ ಜಮೆಯಾದ ಮೊತ್ತವು ಮೊದಲು ಅಸಲಿಗೆ ಜಮೆಯಾಗಬೇಕಾಗಿದ್ದು ಅಸಲಿನ ಬಾಬ್ತು ಪೂರ್ತಿಯಾಗಿ ತೀರುವಳಿಯಾದ ನಂತರ ಬಡ್ಡಿ ಸಹಿತವಾಗಿ ಇತರೆ ಎಲ್ಲ ಬಾಕಿಗಳನ್ನೂ ವಸೂಲಿಯಾಗುವ ತನಕ ಸುಮಾರು ರೂ. 213.72 ಕೋಟಿಗಳಷ್ಟು ಬೆಲೆಬಾಳುವ ಸ್ಥಿರಾಸ್ತಿಯ ಮೇಲಿರುವ ಬ್ಯಾಂಕಿನ ಅಡಮಾನವು ಮುಂದುವರೆದಿರುತ್ತದೆ.**

10. 2022ರ ಮಹಾಸಭೆಯಲ್ಲಿ ಬ್ಯಾಂಕಿನ 12 ಶಾಖೆಗಳ 20 ಸುಸ್ತಿಸಾಲದ ಖಾತೆಗಳಿಗೆ ನೂರಾರು ಕೋಟಿ ಅವ್ಯವಹಾರ ನಡೆದಿರುವ ಬಗ್ಗೆ ಅಧಿಕೃತವಾಗಿ ಮಹಾಸಭೆಯಲ್ಲಿ ಚರ್ಚಿಸಲು ಕೋರಿದಾಗ, ಚರ್ಚಿಸಲು ಅವಕಾಶ ನೀಡದೇ ಈ ಕಾರಣಕ್ಕಾಗಿಯೇ ನಿಯಮಬಾಹಿರವಾಗಿ ಆಡಳಿತ ಮಂಡಳಿ ನನ್ನ ಸದಸ್ಯತ್ವದಿಂದ ವಜಾಗೊಳಿಸಿದ ನಂತರ ಆರೋಪಿತ ಆಡಳಿತ ಮಂಡಳಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದು, ಮಾನ್ಯ ಲೋಕಾಯುಕ್ತದಲ್ಲಿ ದೂರು ದಾಖಲಿಸಿದ ಕಾರಣದಿಂದಾಗಿ ಸಹಕಾರ ಸಂಘಗಳ

ನಿಬಂಧಕರು, ಸಹಕಾರ ಸಂಘಗಳ ಕಾಯ್ದೆ 1959ರ ಸೆಕ್ಷನ್ 64ರ ಅಡಿಯಲ್ಲಿ ತನಿಖೆ ನಡೆಸುವಂತೆ ಆದೇಶ ಮಾಡಿದ್ದು, ತನಿಖಾಧಿಕಾರಿಗಳಾದ ಸಹಕಾರ ಸಂಘಗಳು ಉಪನಿಬಂಧಕರು, ತುಮಕೂರು ಇವರು ನಿಯಮಾವಳಿಯಂತೆ ವಿಸ್ತೃತವಾದ ತನಿಖೆ ನಡೆಸಿ ದಿನಾಂಕ 16-03-2025 ರಲ್ಲಿ ತನಿಖಾ ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿ ನನ್ನ ಬಹುತೇಕ ಆರೋಪಗಳೆಲ್ಲವೂ ದೃಢಪಟ್ಟಿದೆ ಅಲ್ಲದೇ ಬ್ಯಾಂಕಿನಲ್ಲಿ ರೂ. 250 ಕೋಟಿ ಬೃಹತ್ ಅವ್ಯವಹಾರ ನಡೆದಿರುವುದು ಸಾಬೀತಾಗಿದೆ. ಇದರ ಬಗ್ಗೆ ಕೂಲಂಕುಶವಾಗಿ ಚರ್ಚೆಯಾಗಬೇಕು.
**ಸಮಾಧಾನ:– ನೀವು ಮಾಡಿರುವ ಎಲ್ಲ ಆರೋಪಗಳನ್ನು ಅಲ್ಲಗಳೆದು ಸೂಕ್ತವಾದ ಸಮಜಾಯಿಷಿಗಳನ್ನು ಸಕ್ಷಮ ಪ್ರಾಧಿಕಾರವಾದ ಸಹಕಾರ ಇಲಾಖೆಯ ನಿಬಂಧಕರ ಕಚೇರಿಗೆ ಸಲ್ಲಿಸಲಾಗಿದ್ದು, ನಿಬಂಧಕರ ನ್ಯಾಯಾಲಯದಿಂದ ಅಂತಿಮ ಆದೇಶ ಹೊರಬೀಳದೇ ಇರುವುದರಿಂದ ಈ ವಿಚಾರವಾಗಿ ಚರ್ಚಿಸಲು ಬರುವುದಿಲ್ಲ.**

11. ಆಡಳಿತ ಮಂಡಳಿಯ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖೆಯಾಗದಂತೆ ಮಾನ್ಯ ಉಚ್ಚ ನ್ಯಾಯಲಯದಲ್ಲಿ ತಡೆಯಾಜ್ಞೆ ತಂದಿರುವ ಬಗ್ಗೆ ಬ್ಯಾಂಕಿನ ಹಿತಾಸಕ್ತಿಯಿಂದ ಚರ್ಚೆಯಾಗಬೇಕು
**ಸಮಾಧಾನ:–ಇದರಲ್ಲಿ ಚರ್ಚೆ ಮಾಡುವ ವಿಷಯವೇನಿಲ್ಲ, ಮಿತ್ಯಾರೋಪಗಳಿಗೆ ಮನ್ನಣೆ ನೀಡದಂತೆ ದಾಖಲಾಗಿರುವ ಸುಳ್ಳು ಪ್ರಕರಣಗಳನ್ನು ರದ್ದುಗೊಳಿಸುವಂತೆ ನ್ಯಾಯಾಲಯನ್ನು ನ್ಯಾಯಸಮ್ಮತವಾಗಿ ಕೋರಲಾಗಿದೆ.**

12. ನಾನು ಆಡಳಿತ ಮಂಡಳಿ ವಿರುದ್ಧ ಅವ್ಯವಹಾರ ಆರೋಪ ಮಾಡಿದ್ದು ಆರೋಪ ದೃಢಪಟ್ಟಿದೆಯಲ್ಲದೆ ಇವರ ವಿರುದ್ಧ ಮೂರು ಕ್ರಿಮಿನಲ್ ಪ್ರಕರಣ ದಾಖಲಿಸುವುದರಿಂದ ವ್ಯಗ್ರವಾಗಿರುವ ಆಡಳಿತ ಮಂಡಳಿಯವರು ತನ್ನ ಬೆಂಬಲಿತ ಸದಸ್ಯರ ಮೂಲಕ ಮಹಾಸಭೆಯಲ್ಲಿ ನನ್ನ ಮೇಲೆ ಮಾರಣಾಂತಿಕ ಹಲ್ಲೇ ನಡೆಸುವ ಹತ್ಯೆ ಮಾಡುವ ಸಂಚು ರೂಪಿಸಿರುವುದಾಗಿ ತಿಳಿದು ಬಂದಿರುವುದರಿಂದ ಮಹಾಸಭೆ ನಡೆಯುವ ಸ್ಥಳದಲ್ಲಿ ಸಿಸಿ ಕ್ಯಾಮೆರಾ ಅಳವಡಿಸುವುದಲ್ಲದೆ ಸೂಕ್ತ ರಕ್ಷಣೆ ನೀಡಲು ವಿನಂತಿ.
**ಸಮಾಧಾನ:–ತಾವು ಕಳೆದ ಸುಮಾರು 20 ವರ್ಷಗಳಿಂದ ಇದೇ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರೂ ಸಹ ಆಡಳಿತ ಮಂಡಳಿಯು ಅತ್ಯಂತ ಸಂಯಮ ಮತ್ತು ಸಹನೆಯಿಂದ ತಮಗೆ ಸಮಜಾಯಿಷಿಗಳನ್ನು ನೀಡಲಾಗುತ್ತಿದೆ ಮತ್ತು ಅದನ್ನೇ ಮುಂದುವರೆಸಲಾಗುತ್ತಿದೆ, ಹಾಗಿದ್ದರೂ ವಿನಾ ಕಾರಣ ಈ ರೀತಿಯಾಗಿ "ಹತ್ಯೆ ಮಾಡಲು ಸಂಚು ರೂಪಿಸಲಾಗಿದೆ" ಎಂಬುದಾಗಿ ಸುಳ್ಳು ಆರೋಪ ಮಾಡುವುದನ್ನು ಒಪ್ಪಲಾಗದು.**
**ಯಾವುದೇ ಪುರಾವೆ ಇಲ್ಲದೆ "ಹತ್ಯೆಗೆ ಸಂಚು ರೂಪಿಸಲಾಗಿದೆ" ಎಂದು ಗೌರವಯುತವಾಗಿ ಸೇವೆ ಸಲ್ಲಿಸುತ್ತಿರುವ ಆಡಳಿತ ಮಂಡಳಿಯ ಸದಸ್ಯರುಗಳ ವಿರುದ್ಧ ಆಧಾರ ರಹಿತವಾಗಿ ಕ್ರಿಮಿನಲ್ ಆರೋಪ ಮಾಡುತ್ತಿರುವ ಹಾಗೂ ಸಹ ಸದಸ್ಯರಾಗಿ ಬ್ಯಾಂಕಿನಿಂದ ಸಾಲಪಡೆದು ಸುಸ್ತಿಯಾಗಿರುವ ಸಾಲಗಾರರೊಂದಿಗೆ ಸಂಪರ್ಕಸಾಧಿಸಿ ಬ್ಯಾಂಕಿನ ವಿರುದ್ಧ ಅವರನ್ನು ಎತ್ತಿಕಟ್ಟಿ ವಸೂಲಾತಿಗೆ ಅಡಚಣೆ ಉಂಟುಮಾಡುವ ಷಡ್ಯಂತ್ರವನ್ನೂ ಸಹ ಮಾಡುತ್ತ ಬ್ಯಾಂಕಿನ ಮತ್ತು ಆಡಳಿತ ಮಂಡಳಿಯ ಸದಸ್ಯರುಗಳ ತೇಜೋವಧೆ ಮಾಡುತ್ತಿರುವ ಈ ಸದಸ್ಯರ ವಿರುದ್ಧ ಸೂಕ್ತ ಕ್ರಮ ಏಕೆ ಜರುಗಿಸಬಾರದು ಎಂಬ ವಿಚಾರವನ್ನು ಸಾಮಾನ್ಯ ಸಭೆಗೆ ಮಂಡಿಸುತ್ತಿದ್ದೇವೆ.**

ಮುಂದುವರೆದು ಈ ಎಲ್ಲ ಗಂಭೀರ ವಿಷಯಗಳಿಗೆ ಸಂಬಂಧಿಸಿದಂತೆ, ಬ್ಯಾಂಕಿನ ಹಿತಾಸಕ್ತಿಯಿಂದ ಚರ್ಚಿಸಲು ಕನಿಷ್ಠ 3 ಗಂಟೆಗಳ ಅವಶ್ಯಕತೆ ಇದ್ದು ಸವಿಸ್ತಾರವಾಗಿ ಚರ್ಚಿಸಿ ಚರ್ಚಿಸಿದ ವಿಷಯಗಳನ್ನು ಯಥಾವತ್ತಾಗಿ ಮಹಾಸಭೆ ನಡಾವಳಿಯಲ್ಲಿ ದಾಖಲಿಸಿ ದೃಢೀಕೃತ ಪ್ರತಿಯನ್ನು ನೀಡಲು ವಿನಂತಿ.
**ಸಮಾಧಾನ:–ಬ್ಯಾಂಕಿನ ಹಿತಾಸಕ್ತಿಯ ವಿಚಾರವಾಗಿ ಚರ್ಚಿಸಲು ಎಲ್ಲ ಸದಸ್ಯರುಗಳಿಗೂ ಅಗತ್ಯವಿರುವಷ್ಟು ಕಾಲಾವಕಾಶವಿರುತ್ತದೆ ಮತ್ತು ಮಹಾಸಭೆಯ ನಡಾವಳಿಯ ಪ್ರತಿಯನ್ನು ತಯಾರಿಸಿ ಆರ್.ಸಿ.ಎಸ್ ನಿಬಂಧಕರ ಕಚೇರಿಗೆ ಕಳುಹಿಸಲು ಒಂದು ತಿಂಗಳ ಕಾಲಾವಕಾಶವಿದ್ದು, ನಡಾವಳಿಯ ಪ್ರತಿಯನ್ನು ತಯಾರಿಸಿದ ನಂತರ ದೃಢೀಕೃತ ಪ್ರತಿಯನ್ನು ತಮಗೆ ನೀಡಲಾಗುವುದು.**

**6. ಬ್ಯಾಂಕಿನ ಸದಸ್ಯರಾದ ಶ್ರೀ ಸುನಿಲ್ ಪ್ರಸಾದ್ ಟಿ ಎಸ್‌ರವರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಲು ನೀಡಿರುವ ಪತ್ರ.**

ದಿನಾಂಕ 08-09-2025 ರ ತಮ್ಮ ಪತ್ರದಲ್ಲಿನ ವಿಷಯದ ಸಂಬಂಧವಾಗಿ ತಾವು ಕೋರಿರುವ ಮಾಹಿತಿ ಈ ಕೆಳಕಂಡಂತಿದೆ.
**ವಿಷಯ:– 62ನೇ ಸರ್ವ ಸದಸ್ಯರ ವಾರ್ಷಿಕ ಸಭೆಯಲ್ಲಿ ವಿಷಯ ಚರ್ಚಿಸಲು ಕೋರಿ.**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಟಿ.ಎಸ್. ಸುನಿಲ್ ಪ್ರಸಾದ್ ಆದ ನಾನು ಬ್ಯಾಂಕಿನ ಸದಸ್ಯನಾಗಿದ್ದು ದಿ: 13-09-2025 ರಂದು ನಡೆಯುವ 62ನೇ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಈ ಕೆಳಕಂಡ ವಿಷಯವನ್ನು ಚರ್ಚಿಸಲು ಈ ಮೂಲಕ ಕೋರಿದೆ

ವಿಷಯ:– "ಟಿಜಿಎಂಸಿ ಬ್ಯಾಂಕಿನ ಆಡಳಿತ ಮಂಡಳಿಯವರು ಬ್ಯಾಂಕಿನ ಸದಸ್ಯರಾದ ಟಿ.ಎಸ್. ಶಂಕರ್ ಪ್ರಸಾದ್ ವ್ಯಾಪಾರದ ಅಂಗಡಿಯನ್ನು ಕಾನೂನು ಬಾಹಿರವಾಗಿ ಹರಾಜು ಮಾಡಿ ಮೋಸ ಹಾಗೂ ಅನ್ಯಾಯವಾಗಿರುವ ಬಗ್ಗೆ ಚರ್ಚಿಸಲು" ಎಂದಾಗ ಸದಸ್ಯರಾದ ಶ್ರೀ ಟಿ ಎಸ್ ಸುನಿಲ್ ಪ್ರಸಾದ್‌ರವರು ಮಾತನಾಡಿ ಟಿಜಿಎಂಸಿ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದ ಮೂರ್ತಿರವರ ಅನುಮೋದನೆಯ ಮೇರೆಗೆ ಈ ವಿಷಯವನ್ನು ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಟ್ಟಿರುವುದಕ್ಕೆ ವೇದಿಕೆ ಮೇಲೆ ಇರುವ ಮತ್ತು ವೇದಿಕೆ ಕೆಳಗೆ ಇರುವವರಿಗೂ ಧನ್ಯವಾದಗಳನ್ನು ತಿಳಿಸುತ್ತಾ ಈ ಚರ್ಚೆಯಲ್ಲಿ ಮೂರು ಪ್ರಮುಖ ಅಂಶಗಳನ್ನು ಹೇಳಲು ಇಷ್ಟಪಡುತ್ತಿದ್ದೇನೆ ಎಂದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದ ಮೂರ್ತಿರವರು ಮಾತನಾಡಿ ಸಾಲ ತೆಗೆದುಕೊಂಡಿರುವವರು ಸದಸ್ಯರಾದ ಶ್ರೀ ಶಂಕರ್ ಪ್ರಸಾದ್ ರವರು, ಪತ್ರವನ್ನು ಕೊಟ್ಟಿರುವುದು ಬೇರೆಯವರು ಎಂದಾಗ ಸದಸ್ಯರಾದ ಶ್ರೀ ಟಿ ಎಸ್ ಸುನಿಲ್ ಪ್ರಸಾದ್‌ರವರು ಕಾನೂನು ವಿಷಯ ಇರುವುದು ಎಂದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ

ದಿವ್ಯಾನಂದಮೂರ್ತಿರವರು ಮಾತನಾಡಿ ಕಾನೂನು ಗೊತ್ತಿದೆ, ನೀವು ಕಾನೂನು ಹೋರಾಟ ಮಾಡಿದ್ದರೆ ಕೋರ್ಟ್, ಕಛೇರಿ ಬ್ಯಾಂಕಿಗೆ ಬಂದು ತೀರ್ಮಾನ ಮಾಡಿಕೊಳ್ಳಿ ಎಂದಾಗ ಸದಸ್ಯರಾದ ಶ್ರೀ ಟಿ ಎಸ್ ಸುನಿಲ್ ಪ್ರಸಾದ್‌ರವರು ಮಾತನಾಡಿ ಸಭೆಯಲ್ಲಿ ಅವಕಾಶವಿರುವುದಿಲ್ಲ ಎಂದು ಅಲ್ಲ, ರೂ.4,60,000/–ಗಳ ಆಸ್ತಿಯನ್ನು ರೂ.7,00,000/-ಗಳಿಗೆ undersale ಮಾಡಿ, 2005ರಲ್ಲಿ ರೂ.8,00,000/– ಗಳ ಆಸ್ತಿಯನ್ನು undersale ಮಾಡಿ ರೂ.4,00,000/–ಗಳನ್ನು ಲಾಸ್ ಮಾಡಿದ್ದೀರಾ, ಉತ್ತರಕೊಡುವುದಕ್ಕೆ ಇಷ್ಟ ಇಲ್ಲ ಎಂದರೆ ಪ್ರಶ್ನೆ ಕೇಳುವುದಕ್ಕೆ ಬಿಡಿ, ಕೋರ್ಟ್ ಏನು ಹೇಳುತ್ತದೆ ಅಂದರೆ ಹರಾಜು ನಡವಳಿಕೆಯಲ್ಲಿ ಎಂದಾಗ ನಿರ್ದೇಶಕರಾದ ಶ್ರೀ ಎಂಪಿ ಮಹೇಶ್‌ರವರು ಮಾತನಾಡಿ ಸದರಿ ಸಾಲಗಾರರೂ ಸಹ ಖುದ್ದು ಬ್ಯಾಂಕಿನ ಸದಸ್ಯರಾಗಿದ್ದು, ಅವರೊಂದಿಗೆ ಪತ್ರ ವ್ಯವಹಾರ ನಡೆಸಿ ನ್ಯಾಯಾಲಯದ ಆದೇಶ ಪಾಲನೆ ಮಾಡುವಂತೆ ಈಗಾಗಲೇ ತಿಳುವಳಿಕೆ ನೀಡಲಾಗಿರುತ್ತದೆ. ಸಾಮಾನ್ಯ ಸಭೆಗಳಲ್ಲಿ, ಒಬ್ಬ ಸದಸ್ಯ ಮತ್ತೊಬ್ಬ ಸದಸ್ಯನ ವೈಯಕ್ತಿಕ ಸಾಲದ ವಿಚಾರದ ಬಗ್ಗೆ ಚರ್ಚಿಸಲು ಅವಕಾಶವಿರುವುದಿಲ್ಲ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಟಿ ಎಸ್ ಸುನಿಲ್ ಪ್ರಸಾದ್‌ರವರು ಮಾತನಾಡಿ ಸಭೆಯ ಗಮನಕ್ಕೆ ತರುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳಿಕೊಂಡರು. ರೂ.4,60,000/-ಗಳಿಗೆ undersale ಮಾಡಿ ಆಸ್ತಿಯನ್ನು ವರ್ಗಾವಣೆ ಮಾಡಿ ರಾಮಯ್ಯ ಶೆಟ್ಟಿಯವರ ಮಗ ನಾಗಪ್ರಕಾಶ್ ರವರಿಗೆ undersale ಮಾಡಿದ್ದೀರಾ, ಆಸ್ತಿಯನ್ನು ಬಿಟ್ಟು ಕೊಡುವಂತೆ ಸುಪ್ರೀಂ ಕೋರ್ಟ್ ಆರ್ಡರ್ ಆಗಿದೆ ಎಂದು ಹೇಳಿ ಮುಂದುವರೆದು ಆಡಳಿತ ಮಂಡಳಿಯವರು ಕರೆದು ಮಾತನಾಡಿದ್ದೀರಾ? ಏನು ಆಗಿದೆ? ಏನು ಆಗಬೇಕು? ಜವಾಬ್ದಾರಿಯುತ ಟಿಜಿಎಂಸಿ ಬ್ಯಾಂಕ್ ಏನು ನಡೆದುಕೊಳ್ಳಬೇಕು ಎಂದು ತೀರ್ಮಾನವನ್ನು ತೆಗೆದುಕೊಂಡಿದ್ದೀರಾ, ಇಲ್ಲವಾ? ಎಂದು ಪ್ರಶ್ನಿಸಿದರು, ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಕೋರ್ಟ್ ಆದೇಶದಂತೆ ತಾವು ಎಷ್ಟು ಹಣವನ್ನು ಕಟ್ಟಬೇಕು ಎಂದು ಈಗಾಗಲೇ ಪತ್ರವನ್ನು ನೀಡಿದ್ದೇವೆ ನಿಮಗೆ ಸಮ್ಮತಿ ಇಲ್ಲದ ಪಕ್ಷದಲ್ಲಿ ಎಂದಾಗ ಸದಸ್ಯರಾದ ಶ್ರೀ ಟಿ ಎಸ್ ಸುನಿಲ್ ಪ್ರಸಾದ್‌ರವರು ಯಾವ ಆಧಾರದ ಮೇಲೆ ನೀಡಿದ್ದೀರಾ? ಎಂದು ಕೇಳಿದರು, ಅದಕ್ಕೆ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಕೋರ್ಟ್ ಆರ್ಡರ್ ಆಧಾರದ ಮೇಲೆ ಕೊಟ್ಟಿದ್ದೇವೆ ಎಂದು ಉತ್ತರಿಸಿದರು. ನಂತರ ಸದಸ್ಯರಾದ ಶ್ರೀ ಟಿ ಎಸ್ ಸುನಿಲ್ ಪ್ರಸಾದ್‌ರವರು ಮಾತನಾಡಿ ಈ ಕೋರ್ಟ್ ಆದೇಶದಲ್ಲಿ ಇಲ್ಲವಲ್ಲ ಎಂದು ಕೇಳಿದರು. ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ legal advisor ರವರನ್ನು ಕೇಳಿ ಅದರ ಪ್ರಕಾರ ಪತ್ರವನ್ನು ಕೊಟ್ಟಿದ್ದೇವೆ, ನಿಮಗೆ ಪತ್ರದ ಬಗ್ಗೆ ಸಮಾಧಾನ ಇಲ್ಲದಿದ್ದರೆ ಕೋರ್ಟ್ ಕಡೆಯಿಂದ direction ಕೊಡಿಸುವಂತೆ ಎಂದಾಗ ಸದಸ್ಯರಾದ ಶ್ರೀ ಸುನಿಲ್ ಪ್ರಸಾದ್‌ರವರು ಸುಪ್ರೀಂ ಕೋರ್ಟ್ ಆರ್ಡರ್ ಆಗಿದೆ ಇನ್ನು ಯಾವ ಕೋರ್ಟ್‌ಗೆ ಹೋಗಬೇಕು? ಎಂದರು, ರೂ.2,50,000/–ಗಳಿಗೆ undersale ಮಾಡಿ ಒಬ್ಬ ಮೆಂಬರ್‌ಗೆ ಅನ್ಯಾಯ ಮಾಡಿ ಯಾರೋ ಒಬ್ಬರ ಪರವಾಗಿ ಬ್ಯಾಂಕ್ ನಿಲ್ಲುವುದಲ್ಲ, EMD ಕಟ್ಟಿದರೆ, security deposit ಕಟ್ಟದೆ ಹರಾಜು ಮಾಡಲು ಅವಕಾಶ ಕೊಟ್ಟು ಸ್ಥಳದಲ್ಲೆ party ಯ ಹೆಸರಿಗೆ ಶ್ರೀ ನಾಗಪ್ರಕಾಶ್ ಬಿನ್ ರಾಮಯ್ಯ ಶೆಟ್ಟಿರವರು ಹೆಸರಿಗೆ ಬರೆದು ಕೊಟ್ಟಿರುವುದಾಗಿ ಕೋರ್ಟ್‌ನಲ್ಲಿ judgement ಬಂದಿದೆ ಬ್ಯಾಂಕು ಮತ್ತು ಖರೀದಿದಾರ ಒಳ ಒಪ್ಪಂದ ಮಾಡಿಕೊಂಡಿರುವುದು ಎಂದು ಆದೇಶವಿದೆ. ಆ ಆದೇಶದ ಪ್ರಕಾರ ತಾವುಗಳು ಹೊಸ ಆಡಳಿತ ಮಂಡಳಿಯವರು ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು, ಸುಪ್ರೀಂ ಕೋರ್ಟ್ ಆರ್ಡರ್ ಬಂದಿದೆ, ಇದರ ಬಗ್ಗೆ CEOರವರು ತಪ್ಪು ಮಾಡಿದ್ದಾರೆಂದು ಒಂದು ಅರ್ಜಿ ಕೊಟ್ಟಿದ್ದು, ಯಾವುದೋ ಒಂದು ದಿನ ತಪ್ಪಾಗಿದೆ ಎನ್ನುವುದು ತಮ್ಮ ವಿಚಾರ, ತಪ್ಪಾಗಿರುವುದನ್ನು ಸರಿಪಡಿಸಲು ಏನು ಕ್ರಮ ವಹಿಸಿದ್ದೀರಾ, ಸುಪ್ರೀಂ ಕೋರ್ಟ್‌ನಲ್ಲಿ ಆರ್ಡರ್ ಆಗಿದ್ದು ಪಾರ್ಟಿ ಯನ್ನು ಕರೆಸಿ ಏನು ಆಗಿದೆ ಎಂದು ಅಹವಾಲು ಎಂದು ಕೇಳಿದ್ದೀರಾ? Chartered accountant ಇದ್ದಾರೆ, ಕಾನೂನು ಪ್ರಕಾರ ಏನು ಮಾಡಬೇಕು, ಬ್ಯಾಂಕಿನ legal opinion ಬಗ್ಗೆ ಹೇಳುತ್ತಿದ್ದೀರ ನಿಮ್ಮ ಪರವಾಗಿ legal opinion ಕೊಡುತ್ತಾರೆ, ಅದನ್ನು ಇಟ್ಟುಕೊಂಡು ಹರಾಜು ಮಾಡಿ ರೂ.7,00,000/–ಗಳ ಸ್ಥಿರಾಸ್ತಿಯನ್ನು ರೂ.4,50,000/–ಗಳಿಗೆ ಹರಾಜು ಮಾಡಿದ್ದಾರೆ ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್ ರವರು ಮಾತನಾಡಿ ಈ ವಿಷಯಕ್ಕೆ ಸಂಬಂಧಪಟ್ಟಂತೆ ಸದಸ್ಯರಾದ ಶ್ರೀ ಟಿ ಎಸ್ ಸುನಿಲ್ ಪ್ರಸಾದ್‌ರವರು ಮತ್ತು ಸದಸ್ಯರಾದ ಶ್ರೀ ಟಿ ಎಸ್ ಶಂಕರ್ ಪ್ರಸಾದ್ ರವರು ಸತತವಾಗಿ ನಮ್ಮ ಜೊತೆ ಒಡನಾಟ ಇಟ್ಟುಕೊಂಡಿದ್ದು ಕಾನೂನು ರೀತಿಯಾಗಿ ಏನು ಕ್ರಮ ವಹಿಸಬಹುದು ಎಂಬುದಾಗಿ ಪ್ರತಿಯೊಂದು ಚರ್ಚೆ ನಡೆಯುತ್ತಿದೆ ಎಂದು ತಿಳಿಸಿದಾಗ ಸದಸ್ಯರಾದ ಶ್ರೀ ಟಿ ಎಸ್ ಸುನಿಲ್ ಪ್ರಸಾದ್ ರವರು ಮಾತನಾಡಿ ತಾವು ಜವಾಬ್ದಾರಿಯುತವಾಗಿ ನಡೆದುಕೊಳ್ಳುತ್ತೀರಾ ಎಂದು ಕೇಳಿದರು. ನಂತರ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ನಿಮ್ಮ ಹತ್ತಿರ ಇರುವ ಕೋರ್ಟ್ ಆದೇಶವನ್ನು ಬ್ಯಾಂಕಿಗೆ ನೀಡಿ, ಕೋರ್ಟ್ ನಿಮ್ಮ ಪರವಾಗಿ ತೀರ್ಪು ಕೊಟ್ಟಿದ್ದರೆ follow ಮಾಡುತ್ತೇವೆ, ಶಂಕರ್ ಪ್ರಸಾದ್‌ರವರು ಹೇಳುತ್ತಿದ್ದಾರೆ ಸುನಿಲ್ ಪ್ರಸಾದ್‌ರವರು ಮಗ ಎಂದು ನಮಗೆಲ್ಲರಿಗೂ ಗೊತ್ತಿದೆ ಮಗ ಎಂದು ಆದರೆ Banking industry ಒಳಗೆ ನಿಮಗೆಲ್ಲ ಗೊತ್ತಿದೆ, ಒಬ್ಬರ account ಬಗ್ಗೆ ಇನ್ನೊಬ್ಬರಿಗೆ ಹೇಳುವುದಿಲ್ಲ, ಅವರ ಸಾಲ ನೀವು detail ಕೇಳಿದರೆ ಅಪ್ಪ ಮಗನ ಸಾಲ ಒಬ್ಬರಿಂದೊಬ್ಬರಿಗೆ ಹೇಳುವುದಿಲ್ಲ, ಅವರೇ ಅರ್ಜಿಯನ್ನು ಕೊಟ್ಟಿದ್ದರೆ ಬೇರೆ ರೀತಿ ಆಗುತ್ತಿತ್ತು ಇರಲಿ, ನಿಮಗೆ ಕೋರ್ಟ್ ಆರ್ಡರ್ ಏನು ಮಾಡಿದೆ, ಆಸ್ತಿಯನ್ನು ನಿಮಗೆ ಬಿಟ್ಟು ಕೊಡಬೇಕು ಎಂದು ಆಗಿದೆಯಾ? ದುಡ್ಡು ಕಟ್ಟಬೇಕು ಎಂದು ಆಗಿದೆಯಾ? ದಯವಿಟ್ಟು ಆ ಆದೇಶವನ್ನು ಬ್ಯಾಂಕಿಗೆ ಕೊಡಿ ಅದನ್ನು ಪರಿಶೀಲಿಸಿ, advocate ಹತ್ತಿರ ಮಾತನಾಡಿ ತಮಗೆ ಏನು ಅನುಕೂಲವಾಗುತ್ತದೆಯೋ ಅಥವಾ ಅನಾನುಕೂಲವಾಗುತ್ತದೆಯೋ ಗೊತ್ತಿಲ್ಲ ಆದರೆ ಪರಿಹಾರವನ್ನು ಕೊಡುವುದಾಗಿ ತಿಳಿಸಿದರು, ಸದಸ್ಯರಾದ ಶ್ರೀ ಟಿ ಎಸ್ ಸುನಿಲ್‌ಪ್ರಸಾದ್‌ರವರು ಮಾತನಾಡಿ ಶಂಕರ್ ಪ್ರಸಾದ್‌ರವರು ನಮ್ಮ ತಂದೆಯಾಗಿದ್ದು ಅವರ ಪರವಾಗಿ ವಕಾಲತ್ತು ವಹಿಸಲು ಬಂದಿಲ್ಲ, ನಾನು ಕೇಳುತ್ತಿರುವುದು ಈ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಆರ್ಡರ್ ಆಗಿರುವುದು ಎಂದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ನೀವು ಹೇಳುತ್ತಿರುವ ಕೋರ್ಟ್ ಆರ್ಡರ್ ಬಂದಿದೆ, ನಮ್ಮ ವಕೀಲರ ಹತ್ತಿರ ತೋರಿಸಿ ಶ್ರೀ ಟಿ ಎಸ್ ಶಂಕರ್ ಪ್ರಸಾದ್ ರವರ ಪರವಾಗಿದೆ ಎಂದರೆ ನಮ್ಮ objection ಇರುವುದಿಲ್ಲ, ನೀವು ಹೇಗೆ ಸದಸ್ಯರು ಹಾಗೆಯೇ ಅವರು ಸಹ ಸದಸ್ಯರು ಬ್ಯಾಂಕು ಯಾರ ಪರವಾಗಿಯೂ ಇರುವುದಿಲ್ಲ, ಯಾರ ವಿರುದ್ದವಾಗಿಯೂ ಇರುವುದಿಲ್ಲ ಎಂದಾಗ ಸದಸ್ಯರಾದ ಶ್ರೀ ಟಿ ಎಸ್ ಸುನಿಲ್ ಪ್ರಸಾದ್ ರವರು ಮಾತನಾಡಿ ತಾವು ಹೇಳುವುದಕ್ಕೆ ನನ್ನ ಸಮ್ಮತಿ ಇದೆ ಯಾವ

ವಿರೋಧವು ಇರುವುದಿಲ್ಲ, ಆದರೆ ನನ್ನ ಪ್ರಶ್ನೆ ಇರುವುದು ಎಂದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಇಲ್ಲಿ ಚರ್ಚಿಸುವುದು ಬೇಡ ಎಂದಾಗ ಸದಸ್ಯರಾದ ಶ್ರೀ ಟಿ ಎಸ್ ಸುನಿಲ್ ಪ್ರಸಾದ್‌ರವರು ಮಾತನಾಡಿ ವಿಷಯವನ್ನು ಕೇಳಿ ತಮ್ಮ ಅಭಿಪ್ರಾಯವನ್ನು ತಿಳಿಸಿ ಪದೇ ಪದೇ ಕೇಳಿದರು. ನಂತರ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಕೋರ್ಟ್ ಆರ್ಡರ್ ಆಗಿರುವುದನ್ನು ಬ್ಯಾಂಕಿಗೆ ಕೊಡಿ ಎಂದು ತಿಳಿಸಿದರು, ಮುಂದುವರೆದು ಸದಸ್ಯರಾದ ಶ್ರೀ ಟಿ ಎಸ್ ಸುನಿಲ್ ಪ್ರಸಾದ್‌ರವರು ಈಗಾಗಲೇ ಬ್ಯಾಂಕಿಗೆ ಕೊಟ್ಟಿರುವುದಾಗಿ ತಿಳಿಸಿದರು. ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದ ಮೂರ್ತಿರವರು ಬ್ಯಾಂಕಿಗೆ ಯಾವಾಗ ಕೊಟ್ಟಿದ್ದೀರಾ? ಎಂದಾಗ, ಸದಸ್ಯರಾದ ಶ್ರೀ ಟಿ ಎಸ್ ಸುನಿಲ್ ಪ್ರಸಾದ್‌ರವರು ಮಾತನಾಡಿ ಬ್ಯಾಂಕಿಗೆ ಕೊಟ್ಟು ಈಗಾಗಲೇ ಎರಡುವರೇ ವರ್ಷಗಳಾಗಿದ್ದು ನಮ್ಮ ಹತ್ತಿರ received copy ಇದೆ, ತಮ್ಮ ಗಮನಕ್ಕೆ ಇದೆಯಾ ಇಲ್ಲವ? ಎಂದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಈಗ recent ಆಗಿ ಕೊಟ್ಟಿದ್ದೀರಾ? ಎಂದು ಕೇಳಿದರು, ಅದಕ್ಕೆ ಸದಸ್ಯರಾದ ಶ್ರೀ ಟಿ ಎಸ್ ಸುನಿಲ್ ಪ್ರಸಾದ್‌ರವರು ಮಾತನಾಡಿ ಹಣವನ್ನು ಕಟ್ಟಿ ಎರಡುವರೆ ವರ್ಷಗಳಾಗಿವೆ ಎಂದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಆಸ್ತಿ ಮೇಲೆ ಸಾಲ ಮಾಡಿ ಹಣವನ್ನು ಕಟ್ಟದೆ ಇಷ್ಟೆಲ್ಲಾ ರಗಳೆ ಮಾಡಿಕೊಂಡಿದ್ದು ಎಂದಾಗ ಸದಸ್ಯರಾದ ಶ್ರೀ ಟಿ ಎಸ್ ಸುನಿಲ್ ಪ್ರಸಾದ್‌ರವರು ಮಾತನಾಡಿ ಇಲ್ಲಿ ಯಾರು ರಗಳೆ ಮಾಡುತ್ತಿಲ್ಲ, ಹರಾಜು ಮಾಡಿದ್ದು ಸರಿ ಇದೆ, ಬ್ಯಾಂಕಿನ ಪರವಾಗಿ collect ಮಾಡಿರುವುದು ಸರಿ ಇದೆ ಎಂದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ನಿಮ್ಮ ಹತ್ತಿರ ಇರುವ ಕೋರ್ಟ್ ಆರ್ಡರನ್ನು ಬ್ಯಾಂಕಿಗೆ ಕೊಡಿ ನಮ್ಮ ವಕೀಲರ ಹತ್ತಿರ ಮಾತನಾಡಿ ಕೋರ್ಟ್ ಆರ್ಡರನ್ನು ಪಾಲನೆ ಮಾಡುತ್ತೇವೆ ಎಂದು ತಿಳಿಸಿದರು.

ಮುಂದುವರೆದು ಸಭೆಯು ಇಲ್ಲಿಗೆ ಮುಕ್ತಾಯವಾಯಿತು ಎಂದಾಗ ಸದಸ್ಯರಾದ ಶ್ರೀ ಟಿ ಎಸ್ ಸುನಿಲ್ ಪ್ರಸಾದ್‌ರವರು ಮಾತನಾಡಿ ತಾವುಗಳು ಕೋರ್ಟ್ ಆರ್ಡರ್ ಅನ್ನು ಪಾಲನೆ ಮಾಡದಿದ್ದರೆ ದಂಡ ತೆರಬೇಕಾಗುತ್ತದೆ. ಯಾರೋ ಸದಸ್ಯರ ಆಸ್ತಿಯನ್ನು undersale ಮಾಡಿ, 20 ವರ್ಷಗಳಿಂದ ಕೋರ್ಟ್‌ಗೆ ಅಲೆಸಿ, ಆಸ್ತಿಯನ್ನು ಕಿತ್ತುಕೊಂಡು ಇವತ್ತಿನವರೆಗೂ ಬಡ್ಡಿಯನ್ನು ಕಟ್ಟಿ ಅನ್ನುತ್ತಿದ್ದೀರಾ, ಇದು ಯಾವ ದೇಶದ ನ್ಯಾಯ? ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಕೋರ್ಟ್ ಆದೇಶದಲ್ಲಿ ಏನಿದೆ ಎನ್ನುವುದನ್ನು ಪಾಲಿಸುವುದಾಗಿ ತಿಳಿಸಿದರು, ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದ ಮೂರ್ತಿರವರು ಸುಪ್ರೀಂ ಕೋರ್ಟ್ ಆರ್ಡರ್ ಆಗಿದೆಯಾ? ಇಲ್ಲ ಎಂದಾಗ ಸದಸ್ಯರಾದ ಶ್ರೀ ಟಿ ಎಸ್ ಸುನಿಲ್ ಪ್ರಸಾದ್‌ರವರು ಮಾತನಾಡಿ ಹೈ ಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಇದೆ ಎಂದಾಗ ಸಭೆಯಲ್ಲಿ ಗದ್ದಲದ ವಾತಾವರಣ ಶುರುವಾಯಿತು.

ನಿರ್ದೇಶಕರಾದ ಶ್ರೀ ಬಲರಾಮ ಶೆಟ್ಟಿರವರು ಈ ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸಿ ವಾರ್ಷಿಕ ಸಾಮಾನ್ಯ ಸಭೆಯು ಯಶಸ್ವಿಯಾಗಿ ನಡೆಯಲು ಕಾರಣಕರ್ತರಾದ ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಹೆಚ್ ಎಂ ದಿವ್ಯಾನಂದಮೂರ್ತಿ ರವರಿಗೆ ಹಾಗೂ ಉಪಾಧ್ಯಕ್ಷರಾದ ಶ್ರೀಯುತ ಸಿ ಆರ್ ನಟರಾಜ್ ರವರಿಗೆ ನಮ್ಮೆಲ್ಲರ ಪರವಾಗಿ ವಂದನೆಗಳನ್ನು ಸಲ್ಲಿಸಿದರು ಹಾಗೇ ಎಲ್ಲಾ ಆಡಳಿತ ಮಂಡಳಿಯ ನಿರ್ದೇಶಕರುಗಳಿಗೆ, ಮುಖ್ಯಕಾರ್ಯನಿರ್ವಾಹರಿಗೆ ಹಾಗೂ ಸಿಬ್ಬಂದಿ ವೃಂದದವರೆಲ್ಲರಿಗೂ ವಂದನೆಗಳನ್ನು ಸಲ್ಲಿಸಿದರು ಹಾಗೂ ಮುಖ್ಯವಾಗಿ ನಮ್ಮ ಬ್ಯಾಂಕಿನ ಆಧಾರ ಸ್ಥಂಭಗಳಾದ ಸದಸ್ಯರುಗಳಿಗೂ ಸಹ ಕಾರ್ಯಕಾರಿ ಮಂಡಳಿಯ ಪರವಾಗಿ ವಂದಿಸುವುದರೊಂದಿಗೆ ಬ್ಯಾಂಕಿನ 62ನೇ ವರ್ಷದ ಸಾಮಾನ್ಯ ಸಭೆಯು ವಿದ್ಯುಕ್ತವಾಗಿ ಮುಕ್ತಾಯವಾಯಿತು.

| | |
|---|---|
| ಸಹಿ/– | ಸಹಿ/– |
| **(ಜೆ ಸುರೇಶ್)** | **(ಹೆಚ್ ಎಂ ದಿವ್ಯಾನಂದಮೂರ್ತಿ)** |
| **ಮುಖ್ಯ ಕಾರ್ಯನಿರ್ವಾಹಕರು** | **ಅಧ್ಯಕ್ಷರು** |

:ನಕಲು:

**(ಜೆ ಸುರೇಶ್)**

**ಮುಖ್ಯ ಕಾರ್ಯನಿರ್ವಾಹಕರು**

*******

# TGMC BANK

63 years of Professional Banking

## ಠೇವಣಿಗಳ ಮೇಲೆ ಅತ್ಯಾಕರ್ಷಕ ಬಡ್ಡಿದರಗಳು

| ವಿವರಗಳು | ಬಡ್ಡಿದರಗಳು |
|---|---|
| 15 ದಿನಗಳಿಂದ 90 ದಿನಗಳವರೆಗೆ | 04.50 % |
| 91 ದಿನಗಳಿಂದ 180 ದಿನಗಳವರೆಗೆ | 05.00 % |
| 181 ದಿನಗಳಿಂದ 1 ವರ್ಷದವರೆಗೆ | 06.75 % |
| 1 ವರ್ಷ ಮೇಲ್ಪಟ್ಟು 2 ವರ್ಷಗಳವರೆಗೆ | 07.00 % |
| 2 ವರ್ಷಗಳ ಮೇಲ್ಪಟ್ಟು 5 ವರ್ಷಗಳವರೆಗೆ | 07.50 % |

ಹಿರಿಯ ನಾಗರೀಕರ 1 ವರ್ಷ ಮೇಲ್ಪಟ್ಟ ಠೇವಣಿಗಳಿಗೆ 0.50% ರಷ್ಟು ಹೆಚ್ಚುವರಿ ಬಡ್ಡಿ ದರ ನೀಡಲಾಗುವುದು

## ಉಳಿತಾಯ ಖಾತೆ ಬಡ್ಡಿದರ

| ವಿವರಗಳು | ಬಡ್ಡಿದರಗಳು |
|---|---|
| ಉಳಿತಾಯ ಖಾತೆ | 03.00% |

## ಸಾಲ ಮತ್ತು ಮುಂಗಡಗಳ ಮೇಲಿನ ಬಡ್ಡಿ ದರಗಳು

| ಕ್ರ.ಸಂ. | ವಿವರಗಳು | ಬಡ್ಡಿದರಗಳು |
|---|---|---|
| 1 | ಗೃಹಸಾಲ ರೂ. 35,00,000/- ಗಳವರೆಗೆ | 08.00% |
| | ಗೃಹಸಾಲ ರೂ. 35,00,000/- ಮೇಲ್ಪಟ್ಟು ರೂ. 2,00,00,000/–ಗಳವರೆಗೆ | 08.25% |
| 2 | ಮನೆ ನಿರ್ಮಿಸುವ ಸಲುವಾಗಿ ನಿವೇಶನ ಖರೀದಿಸಲು ಸಾಲ ಸೌಲಭ್ಯ | 08.50% |
| 3 | ಚಿನ್ನಾಭರಣ ಸಾಲ | 08.25% |
| 4 | ಚಿನ್ನಾಭರಣಗಳ ಮೇಲಿನ ಮೀರೆಳೆತ ಸಾಲ* | 08.75% |
| 5 | MSME Loan* | 10.00% |
| 6 | ಸರಕು ಅಡಮಾನ ಸಾಲ ರೂ. 5 ಕೋಟಿಗಳವರೆಗೆ | 09.00% |
| | ಸರಕು ಅಡಮಾನ ಸಾಲ ರೂ. 5 ಕೋಟಿಗಳ ಮೇಲ್ಪಟ್ಟು | 08.75% |
| 7 | ಆಸ್ತಿ ಅಡಮಾನ ಸಾಲ / Rental Discounting Scheme* | 11.00% |
| 8 | ವಾಣಿಜ್ಯ ಕಟ್ಟಡ ನಿರ್ಮಿಸಲು, ಖಾಲಿ ನಿವೇಶನ ಆಧಾರದ ಮೇಲೆ ಸಾಲ Loan for Real Estate,Business,SSI Loan / ವಾಯಿದೆ ಸಾಲ / ಮೆಷಿನರಿ ಸಾಲ | 11.50% |
| 9 | ನಗದುದ್ದರಿ/ಮೀರೆಳೆತ ಸಾಲ (Cash Credit / Over Draft )* | 11.50% |
| 10 | ವಾಹನ ಸಾಲ | |
| | ದ್ವಿಚಕ್ರ ವಾಹನ ಸಾಲ | 11.50% |
| | ಹೊಸ ಕಾರು ಸಾಲ (ಸ್ವಂತ ಉಪಯೋಗಕ್ಕಾಗಿ) | 08.25% |
| | ಹೊಸ ಕಾರು ಸಾಲ (ಸ್ವಂತ ಉಪಯೋಗಕ್ಕಾಗಿ) (ಕೃಷಿ ಆದಾಯದ ಮೇಲೆ)* | 09.00% |
| | ಹಳೆಯ ವಾಹನ ಸಾಲ (ಸ್ವಂತ ಉಪಯೋಗಕ್ಕಾಗಿ) | 13.00% |
| | ಹೊಸ ವಾಹನ ಸಾಲ ( ಟ್ಯಾಕ್ಸಿ) | 10.00% |
| | ಹೊಸ ವಾಹನ ಸಾಲ ( ವಾಣಿಜ್ಯ ಉಪಯೋಗಕ್ಕಾಗಿ) | 10.00% |
| | ಹಳೆಯ ವಾಹನ ಸಾಲ ( ವಾಣಿಜ್ಯ ಉಪಯೋಗಕ್ಕಾಗಿ) | 14.50% |
| 11 | ವೇತನಾಧಾರ ಸಾಲ | 12.00% |
| 12 | LIC / NSC ಆಧಾರದ ಮೇಲೆ ಸಾಲ | 11.00% |
| 13 | ಗೃಹ ಉಪಯೋಗಿ ವಸ್ತುಗಳ ಆಧಾರದ ಮೇಲೆ ಸಾಲ | 13.50% |

* ಷರತ್ತುಗಳು ಅನ್ವಯ

UPI ಯು.ಪಿ.ಐ. ಸೌಲಭ್ಯ ದೊರೆಯುತ್ತದೆ.

# TGMC BANK

63 years of Professional Banking

# ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಛೇರಿ : ಬಿ.ಹೆಚ್. ರಸ್ತೆ, ತುಮಕೂರು-572 103. ☎ 0816-4021102/03 : https://tgmc.bank.in : tgmc.ho@tgmc.bank.in

## ನಿಮ್ಮ ಕನಸನ್ನು ನನಸಾಗಿಸಲು ಸುವರ್ಣಾವಕಾಶ



## Home Loan

Rate of Intrest

**8.00%***

Golden Opportunity to Build
or Purchase of Your Dream House
Purchase of Site for
Construction of House 8.50%

## Vehicle Loan

Rate of Intrest

**8.25%***





## Gold Loan

Rate of Intrest

**8.25%***

Maximum Loan available
on your Gold Ornament with
Lower rate of Interest.

## Loan on Mortgage of Property

From Rate of Intrest

**11%***

* ಷರತ್ತುಗಳು ಅನ್ವಯ

ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ದೊರೆಯುತ್ತದೆ.

# TGMC Bank Ltd.,

B.H. Road, TUMKUR - 572 103.

## HIGHLIGHTS

*Rs. in Lakhs*

| Total Business Crossed | Profit (Before Tax) and provisions | Interest Income | Interest Expenditure | Non-Interest Income | Non-Interest Expenditure | Net Profit per Employee |
|---|---|---|---|---|---|---|
| 278837.22 | 3353.47 | 15009.17 | 9528.05 | 1522.97 | 3650.61 | 11.00 |

| Business per Employee | Earning Assets | Total Income/ Working Capital | C.R.A.R. | Return on Assets | Net Profit/ Total Assets | C.D. Ratio |
|---|---|---|---|---|---|---|
| 1566.50 | 197787.10 | 8.80% | 21.43% | 0.88% | 0.81% | 72.66% |